# ಕರ್ಣಾಟಕ ಕಾವ್ಯಮಂಜರಿ.

ರತ್ನಾಕರಕವಿ ವಿರಚಿತ

# ರತ್ನಾಕರಾಧೀಶ್ವರ ಶತಕಂ ಮತ್ತು
# ಅಪರಾಜಿತೇಶ್ವರ ಶತಕಂ

[ ೧ ]

ಎಸ್. ಜಿ. ನರಸಿಂಹಾಚಾರ್,
ಮ. ಅ. ರಾಮಾನುಜೈಯ್ಯಂಗಾರ್,
ಇವರಿಂದ ಪರಿಷ್ಕರಿಸಲ್ಪಟ್ಟು

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ

ಮೈಸೂರು,
ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.
೧೮೯೩.

[ಕ್ರಯ [illegible] ರೂಪಾಯಿ.

…ರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾ. ಪ್ರೊಪ್ರೈಟರು, ಮ. ಕೆ. ನಾರಣಸ್ವಾಮಿ ತಿರುಮಲಾಚಾರ್, ಅ. ಅನಂದಾಳ್ವಾರ್ ಇವರಲ್ಲಿ ದೊರೆಯುತ್ತವೆ.

*Registered according to Act XXV of 1867*

[ALL RIGHTS RESERVED.]

# ಕರ್ಣಾಟಕ ಕಾವ್ಯಮಂಜರಿ.

## — ರತ್ನಾಕರಾಧೀಶ್ವರಶತಕಂ —

ಶ್ರೀರಾಗಂ ಸಿರಿಗಂಪು ಮಾಲೆ ಮಣಿಹಾರಂ ವಸ್ತ್ರಮುಂಗಕ್ಕಲಂ ।
ಕಾರಂ ಹೇಯಮಿದಾತ್ಮತತ್ವರುಚಿ ಬೋಧೋದ್ಯಚ್ಚರಿತ್ರಂಗಳೇ ॥
ತ್ರೈರತ್ನಂ ಮನಸಿಂಗೆ ಸಿಂಗರಮುಮಾದೇಹಂಗಳೆಂದಿತ್ತ ಶೃಂ ।
ಗಾರ ಶ್ರೀಕವಿಹಂಸರಾಜನೊಡೆಯಾ ರತ್ನಾಕರಾಧೀಶ್ವರಾ ॥೧

ತತ್ವಪ್ರೀತಿ ಮನಕ್ಕೆ ಪುಟ್ಟಲದು ಸಮ್ಯಗ್ದರ್ಶನಂ ಮತ್ತಮಾ ।
ತತ್ವಾರ್ಥಂಗಳನೊಲ್ದು ಬೋಧಿಪುದು ಸಮ್ಯಜ್ಞಾನಮಾಬೋಧದಿಂ ।
ತತ್ವಂಗಳ್ಕಡದಂತು ಪೋವಿ ನಡೆಯಲ್ಸಮ್ಯಕ್ಚರಿತ್ರಂ ಸುರ ।
ತ್ನತ್ವಂ ಮೂಱುಮ ಮುಕ್ತಿಗೆಂದಱಿಪಿದೈ ರತ್ನಾಕರಾಧೀಶ್ವರಾ ॥೨

ಮಿಗೆ ಷಡ್ದ್ರವ್ಯಮನಸ್ತಿಕಾಯಮನಿಪ್ಪೈದುಂ ತತ್ವಮೇಳುಂ ಮನಂ ।
ಬುಗಲೊಂಬತ್ತುಪದಾರ್ಥಮಂ ತಿಳಿದೊಡಂ ತನ್ನಾತ್ಮನೀತೊಯ್ಯದಂ ।
ದುಗದಿಂ ಬೇಱೊಡಲೀನಚೇತನಮಿ ಜೀವಂ ಚೇತನಂ ಜ್ಞಾನಸ್ವರೂ ।
ಪಿ ಗಡಾಯೆಂದಱಿದಿರ್ದನೇ ಸುಖಿಯಲಾ ರತ್ನಾಕರಾಧೀಶ್ವರಾ ॥೩

ಅಱಿವಿಂದೀಕ್ಷಿಸಲಕ್ಕುವಾತ್ಮನಿರವಂ ದೇಹಂಬೊಲೀ ಕಣ್ಗೆ ತಾಂ |
ಗುಱಿಯಾಗಂ ಸಿಲೆಯೊಳ್ಸುವರ್ಣಮರಲೊಳ್ಸೌರಭ್ಯಮಾಕ್ಷೀರದೊಳ್ ||
ನಱುನೆಯ್ ಕಾಷ್ಠದೊಳಗ್ನಿಯಿರ್ಪ ತೆಱದಿಂದೀ ಮೆಯ್ಯೊಳೊಂದಿರ್ಪವಂ |
ದೆಱೆದಭ್ಯಾಸಿಸೆ ಕಾಣ್ಗವೆಂದಱಿಪಿದೈ ರತ್ನಾಕರಾಧೀಶ್ವರಾ ||೪

ಕಲ್ಗಳೊಳ್ತೋರ್ಪ ಪೊಂಗರ್ಸುವರ್ಣದ ಗುಣಂ ಕಾಷ್ಠಂಗಳೊಳ್ತೋರ್ಪ ಕಿ
ಚ್ಚಿಲ್ಲ ಕಿಚ್ಚಿನ ಚಿಹ್ನವಾಕೆನೆಯಿರಲ್ಪಾಲೊಳ್ಘೃತಚ್ಛಾಯೆಯಿಂ ||
ದೆಲ್ಲರ್ಬಣ್ಣವರಂತುಟೀತನುವಿನೊಳ್ ಚೈತನ್ಯಮುಂ ಬೋಧಮುಂ |
ಸೊಲ್ಲುಂ ಜೀವಗುಣಂಗಳೆಂದಱಿಪಿದೈ ರತ್ನಾಕರಾಧೀಶ್ವರಾ ||೫

ಮುತ್ತಾ ಕಲ್ಲನೆ ಶೋಧಿಸಲ್ ಕನಕಮಂ ಕಾಣ್ಬಂತೆ ಪಾಲಂ ಕ್ರಮಂ |
ಬೆತ್ತೊಳ್ಪಂ ಮಥನಂಗೆಯಲ್ಘೃತಮುಮಂ ಕಾಣ್ಬಂತೆ ಕಾಷ್ಠಂಗಳಂ ||
ಒತ್ತಂಬಂ ಪೊಸೆದಗ್ನಿಗಾಣ್ಬ ತೆಱದಿಂ ಮೈಬೇಱೆ ಬೇಱಾನೆನು |
ತ್ತಿತ್ತಭ್ಯಾಸಿಸಲೆನ್ನ ಕಾಣ್ಬುದರಿದೇ ರತ್ನಾಕರಾಧೀಶ್ವರಾ ||೬

ಅಂಗುಷ್ಠಂ ಮೊದಲಾಗಿ ನೆತ್ತಿವರೆಗಂ ಸರ್ವಾಂಗಸಂಪೂರ್ಣನು |
ತ್ತುಂಗಜ್ಞಾನಮಯಂ ಸುದರ್ಶನಮಯಂ ಚಾರಿತ್ರತೇಜೋಮಯಂ ||
ನಾಗಿರ್ಕ್ಕುಂ ಮಹಿಮಂ ಸ್ವಯಂಭು ಸುಖಿ ನಿರ್ಬೋಧಂ ನಿರಾಪೇಕ್ಷ ನಿ |
ಮ್ಮಂಗಂಬೊಲ್ ಪರಮಾತ್ಮನೆಂದಱಿಪಿದೈ ರತ್ನಾಕರಾಧೀಶ್ವರಾ ||೭

ಬಿಸಿಲಿಂ ಕಂದದ ಬೆಂಕಿಯಿಂ ಸುಡದ ನೀರಿಂ ನಾಂದದಾಗ್ರಾಸಿ ಭೇಂ |
ಪಸುಳುಂ ಬಾರದ ಚಿನ್ಮಯಂ ಮಱೆದು ತನ್ನೊಳ್ಪಂ ಪರಧ್ಯಾನದಿಂ ||
ಪಸಿವಿಂದೀಬಱುಬಾಧೆಯುಂ ರುಜೆಗಳುಂ ಕೇಡಾಗಲೀ ಮೆಯ್ಗೆ ಸಂ |
ದಿಸದಂ ತನ್ನನೆ ಚಿಂತಿಸಲ್ ಸುಖಿಯಲಾ ರತ್ನಾಕರಾಧೀಶ್ವರಾ ||೮

ಒಡಲೆಂಬೀ ಜಡನಂ ಲಯಪ್ರಕರನಂ ನಿಶ್ಚೇಷ್ಟನಂ ದುಷ್ಟನಂ।
ಪಡಿಮಾತೇಂ ಪೆಣನುಂ ಮಹಾತ್ಮನಹಹಾ! ತನ್ನೊಂದು ಸಾಮರ್ಥ್ಯದಿಂ।
ನಡೆಯಿಪ್ಪಂ ರಥಿಕಂಬೊಲೇಂ ನುಡಿಯಿಪಂ ಮಾರ್ದಂಗಿಕಂಬೊಲ್ಬಿಸು॥
ಬ್ಬುಡುಪಂ ಜೋಹಡಿಗಂಬೊಲೇಂ ಕುಶಲನೋ ರತ್ನಾಕರಾಧೀಶ್ವರಾ॥೯

ಬೇಱಿರ್ಪಂ ತನುವೆಂಬ ಪಂದೊವಲ ಕೂರ್ಪಾಸಂಗಳಂ ತೊಟ್ಟು ತಾ।
ನೇಱಿರ್ಪಂ ತನುಗೂಡಿ ಸಂಚರಿಪನಾಮೆಯ್ಗೂಡಿ ತನ್ನೊಳ್ಪಮಂ ॥
ಕೇಱಿರ್ಪಂ ತನುಗೂಡಿ ತತ್ತನುಗೆ ಜೀವಂ ಪೇಸಿ ಸುಜ್ಞಾನದಿಂ ।
ಪೋಱಿರ್ಪಂ ಶಿವನಾಗಿಯುಂ ಚದುರನೋ ರತ್ನಾಕರಾಧೀಶ್ವರಾ ॥೧೦

ಬೂರಂ ವಾರಿಯೊಳಿರ್ದುಯೂರ್ಧ್ವಗಮನಂಗೆಟ್ಟಿರ್ಪ್ಪಿಯೊಳ್ಬಿಟ್ಟು ದೂ।
ಳ್ಬರ್ಪ್ಪಸಲ್ಪಲಗಾಳಿಯಿಂದುರುಳ್ವವೋಲ್ ಕರ್ಮಂಗಳಂ ನಾಂದು ಮೆ॥
ಯ್ಯೆರಂದಾಳ್ದಿ ಧರ್ಮಮೊಯ್ದೆಡೆಗೆ ಸುತ್ತುತ್ತಿರ್ಪನಂತಲ್ಲದಾ।
ನೆರೆಸುಸ್ಮೃತಿಯಾತ್ಮ ಮೋಕ್ಷಕನೆನಾಂ ರತ್ನಾಕರಾಧೀಶ್ವರಾ ॥೧೧

ತನುವೇ ಸ್ಫಾಟಿಕಪಾತ್ರಮಿಂದ್ರಿಯದ ವೊತ್ತಂ ತಾನೆ ಸದ್ವರ್ತಿ ಜೀ ।
ವನವೇ ಜ್ಯೋತಿಯುದಕ್ಷ ಪಜ್ಜಳಿಸುವಾ ಸುಜ್ಞಾನಮೇ ರಶ್ಮಿಯಿಂ॥
ತಿನಿತುಂ ಕೂಡಿರೊಡಂ ಸುಗಶ್ರಯೊದವಿಂಗೇ ದೇವ ನೀನೆನ್ನ ಚಿಂ ।
ತನೆಗಳ್ಪೋಡೆ ಸ್ಮೃತಂಬೊಲೆಸ್ಸೆವೊಲಲಾ ರತ್ನಾಕರಾಧೀಶ್ವರಾ ॥೧೨

ತನುವೇಂ ತಾಮ್ರನಿವಾಸಮೋ ಮಳಲಚಿಟ್ಟೋಳ್ತೋಡಿ ಬೇಡಂ ಕುರು।
ಳ್ತನವೊಲ್ದಿರ್ಪವೊಲಿಂದೊ ನಾಳೆಯೊ ತೊಡಂಕೇಂ ನಾಳದೋ
[illegible]ಕಳೋ ॥
ಘನದೊಡ್ಡಿಂಬವೊಲೊಡ್ಡಯೊ[illegible]ವ ಮೆಯ್ಯೊಳ್ಮೋಕ್ಷಮೇಕಿಷ್ಟವೈ ।

ನೆನೆದಿರ್ಜ್ಜೀವನೆ ಮೇಲೆನೆಂದಱಿಪುವೈ ರತ್ನಾಕರಾಧೀಶ್ವರಾ ॥೧೩

ಉಂಬೂಟಂ ಮಿಗಿಲಾಗೆಯೇಱುವ ಹಯಂ ಬೆಚ್ಚಲ್ಕೆ ನೀರ್ಮ್ಮಗಿನೊಳ್ ।
ತುಂಬಲ್ಪೋಗುತೆ ಮುಗ್ಗಿಯುಂ ಮರಣಮಕ್ಕುಂ ಜೀವಕೀದೇಹವೆ ॥
ಷ್ಟಂ ಬಾಳ್ದಪ್ಪುದು ಲಾಭವೇಂ ಕಿಡುವ ಮೆಯ್ಯಿಂ ಕೊಟ್ಟು ನಿತ್ಯತ್ವಮಾ ।
ದಿಂಬಂ ಧರ್ಮ್ಮದೆ ಕೊಂಬವಂ ಚದುರನೈ ರತ್ನಾಕರಾಧೀಶ್ವರಾ ॥೧೪

ಪುಲವೀಡೊಳ್ಪುಲವುಂ ಪಗಲ್ಪರದನಿದ್ರಾದಾಯಮುಂ ಪೆತ್ತು ಬಾ ।
ೞ್ನಲೆಯುಳ್ಳೊಂದೆಡೆಗೈದಲಾನೆಲೆಯವರ್ನ್ನೀವಂತೆ ಪಾಪ್ಮೆಯೊಳ್ ॥
ರ್ಪ್ಪುಲವಿಂ ಪುಣ್ಯಮನೀಮನಂ ಗಳಿಸಿಕೊಂಡಾದೇವಲೋಕಕ್ಕೆ ಪೋ ।
ಗಲೊಡಂ ನೋವರವರ್ಗ್ಗೆ ನೋವು ತನಗೋ ರತ್ನಾಕರಾಧೀಶ್ವರಾ ॥

ದಾನಕ್ಕಿಲ್ಲ ತಪಕ್ಕೆ ಸಲ್ಲ ಮರಣಂಗಾಣ್ಬಂಧು ನಿಮ್ಮಕ್ಷರ ।
ಧ್ಯಾನಕ್ಕೊಲ್ಲೆನೆನಿಪ್ಪವಂ ಮಡಿಯೆ ನೋಯಲ್ತಕ್ಕುದಷ್ಟಾದಿಗಳ್ ॥
ದಾನಂಗೆಯ್ದು ತಪಕ್ಕೆ ಪಾಯ್ದು ಮರಣಂಗಾಣ್ಬಂದು ನಿಮ್ಮಕ್ಷರ ।
ಧ್ಯಾನಂಗೆಯ್ದುಱದಂಗೆ ಶೋಕಿಪರದೇಂ ರತ್ನಾಕರಾಧೀಶ್ವರಾ ॥೧೬

ಸಾವಿಂಗಂಜಲದೇಕೆ ಸಾವು ಪೆಱತೇ ಮೈದಾಳ್ದದಗ್ಗಂಜಲಾ ।
ಸಾವೇಂ ಪಾಣ್ಗಮೆ ಕಾವರುಂಟೆಯಕಟಾ! ಈಜೀವನೆಂದೆಂದುಮೇಂ ॥
ಸಾವಂ ಕಂಡವನಲ್ಲವೇ ಮರಣವಾಗಲ್ಕಿಂದದೇಂ ಪುಟ್ಟನೇ ।
ನೀವೆನ್ನೊಳ್ನೆಲೆ ಸಾವುದುಂ ಸುಖವಲ್ತೆ ರತ್ನಾಕರಾಧೀಶ್ವರಾ ॥೧೭

ಪ್ರಾಣಂ ಮಾನವಜನ್ಮಮುಂ ಪಡೆದ ಮೆಯ್ಯೊಳ್ನಿಚ್ಚಲುಂ ಪಂಚಕ ।
ಲ್ಯಾಣಂ ಪಂಚಗುರುಸ್ತವಂ ಪರಮಶಾಸ್ತ್ರಂ ಮೋಕ್ಷಸಂಧಾನಚಿ ॥

ತ್ರಾಣಂ ಚಿತ್ತಿನ ರತ್ನಮಾಱುವನಲಂಪಿಂ ಚಿಂತನುಗೆಯ್ವನೇ |
ಜಾಣಂ ಮತ್ತಿನ ಚಿಂತಕರ್ ಮರುಳ್ಗಳೈ ರತ್ನಾಕರಾಧೀಶ್ವರಾ ||೧೯

ಪಡೆದತ್ತಿಲ್ಲವೆ ಪೂರ್ವದೊಳ್ ಧನವಧೂರಾಜ್ಯಾದಿಸೌಭಾಗ್ಯಮಂ |
ಪಡೆದೆಂ ತನ್ಮಮಕಾರದಿಂ ಪಡೆವೆನೀಸಂಸಾರಸಂವೃದ್ಧಿಯಂ ||
ಪಡೆವತ್ತಿಲ್ಲ ನಿಜಾತ್ಮತತ್ತ್ವರುಚಿಯಂ ತದ್ಬೋಧಚಾರಿತ್ರಮಂ |
ಪಡೆದಂದಾಗಳೆ ಮುಕ್ತಿಯಂ ಪಡೆಯೆನೇ ರತ್ನಾಕರಾಧೀಶ್ವರಾ ||೨೦

ಒಱಗಿರ್ದ್ದಂ ಕನಸಿಂದೆ ದುಃಖಸುಖದೊಳ್ ಬಾೞ್ದಂತೆ ತಾನೆೞ್ದ ಕ|
ಣ್ದೆಱೆದಾಗಳ್ಬಯಲಪ್ಪವೋಲ್ ನರಕತಿರ್ಯಙ್ಮರ್ತ್ಯದೇವತ್ವದೊಳ್ ||
ತಿಱೆತಂದೊಪ್ಪುವ ಬಾೞ್ಕೆಯೀಬಯಲ ಬಾೞುಂ ನೆಚ್ಚಿ ನಿತ್ಯತ್ವಮಂ|
ಮಱೆವಂತೇಕೆಯೋ ನಿಮ್ಮನಾಂ ಮಱೆವೆನೋ ರತ್ನಾಕರಾಧೀಶ್ವರಾ ||

ಇಂದಾನಾದವನೇ ಸಮಂತು ಬರಿಸಂ ನೂರೊಂದಹಂಕೋಟಿಯಿಂ |
ಹಿಂದತ್ತತ್ತಲನೇಕಕೋಟಿಯುಗದಿಂದತ್ತತ್ತಲಂಬೋಧಿಯಿಂ ||
ಹಿಂದತ್ತತ್ತಲನಾದಿಕಾಲದಿನನಂತಾಕಾರದಿಂ ತಿಱೆನಲ್ |
ಬಂದೆಂ ನೊಂದೆನನಾಥಬಂಧು ಸಲಹೋ ರತ್ನಾಕರಾಧೀಶ್ವರಾ ||೨೨

ನಾನಾಗರ್ಭದೆ ಪುಟ್ಟಿ ಪುಟ್ಟಿ ಪೊಱಮಟ್ಟೀರೂಪುಜೋಹಂಗಳಂ |
ನಾನಾಭಾವದೆ ತೊಟ್ಟು ತೊಟ್ಟು ನಡೆದೆಂ ಮೈವೆಚ್ಚದೊಟ್ಟುಂಗಳಂ ||
ನಾನಾಭೇದದೊಳುಂಡುಮುಂಡು ತಣಿದೆಂ ಚಿಃ ಸಾಲದೇ ಕೆಂಡುಮಿಂ |
ತೇನಯಾತ್ಮತಳುಮಾಟ್ವರೇ ಕರುಣಿಸಾ ರತ್ನಾಕರಾಧೀಶ್ವರಾ ||೨೩

ಅಯ್ಯೋ! ಕುತ್ಸಿತಯೋನಿಯೊಳ್ಪೊಸುಳ್ವ ದೆತ್ತಾನೆತ್ತ ಚಿಃ ನಾಱುವೀ|

ಮೆಯ್ಯತ್ತನ್ನಯ ನಿರ್ಮಲಪ್ರಕೃತಿಯತ್ತೀ ದೇಹವನ್ಯಾಧಿಯಿಂ ||
ಪೊಯ್ಯಲ್ಪತ್ತಿಹುದೆತ್ತಲೆನ್ನ ನಿಜವೆತ್ತೊಯ್ದನ್ನ ನಿರ್ಮತ್ತದ |
ನ್ಯಯ್ಯಾ ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ||೨೪

ದಾರಿದ್ರ್ಯಂ ಕವಿದಂದು ಕಾಯ್ದು ಪಗೆಗಳ್ಸಂಕೆಗೊಟ್ಟಂದು ದು|
ರ್ವಾರವ್ಯಾಧಿಗಳೊತ್ತಿದಂದು ಮನದೊಳ್ ನಿರ್ವೇಗಮುಕ್ಕಂ ಬಱ ||
ಕ್ಕಾರೋಗಂ ಕೆಱದಂದು ವೈರಿಲಯವಾದಂದರ್ಥವಾದಂದಿದೇಂ |
ವೈರಾಗ್ಯಂ ತಲೆದೋಱ ದಂಡಿಸುವುದೋ ರತ್ನಾಕರಾಧೀಶ್ವರಾ ||೨೫

ಮೆಯ್ಯೊಳ್ತೋಱುವ ರೋಗದಿಂ ಮನಕೆ ಬಂದಾಯಾಸದಿಂ ಭೀತಿವ|
ಟ್ಟಯ್ಯೋ! ಎಂದೊಡೆ ಸಿದ್ಧಿಯೇಂ ಜನಕನುಂ ತಾಯುಂ ಪಲುಂ ಬಲ್ಲದೇ ||
ಗೆಯ್ಯಲ್ಕರ್ಣರೊ ತಾವುಮುಮ್ಮಳಿಸುವರ್ಕ್ಕುಪಂದೊಡಂಜಿರ್ಪೆಯೊ|
ಮ್ಮಯ್ಯಾ ಸಿದ್ಧಜಿನೇಶನೆಂದೊಡೆ ಸುಖಂ ರತ್ನಾಕರಾಧೀಶ್ವರಾ||೨೬

ತಾಯುಂ ತಂದೆಯುಮಾನೆನಟ್ಟಿಳುತೆ ಸಾವಂ ಸತ್ತುಬೇಱನ್ಯರಾ |
ಕಾಯಂ ಪೊಕ್ಕೆಗೆನೆ ಬೞಿಕ್ಕವರುಮಂ ತಾಯ್ತಂದೆಯೆಂದಪ್ಪಿಕೊಂ|
ಡಾಯೆಂದಾಡುವನಿತ್ತಲಂದು ಪಡೆದರ್ಗಿಚ್ಛೈಸನಾತ್ಮಂಗಿದೇಂ |
ಮಾಯಾಮೋಹಮೊ ಪೇೞ್ವುದೇನನಕಟಾ ರತ್ನಾಕರಾಧೀಶ್ವರಾ ||೨೭

ಸ್ತ್ರೀಯುಂ ಮಕ್ಕಳನೆಂತೆಗಲ್ಪೆ ನಿಮಗಾರುಂಟೆಂದು ಗೋಳಿಟ್ಟ ಕ|
ಣ್ಬಾಯುಂ ಬಿಟ್ಟೞವಂ ಬೞಿಕ್ಕದಯಿಪಂ ತಾನತ್ತ ಬೇಱನ್ಯರೊಳ್ ||
ಪ್ರಾಯಂಬಾಳ್ದು ವಿವಾಹಮಾಗಿ ಸುತರಂ ಮುದ್ದಾಡುವಂ ಮುನ್ನಿನಾ|
ಸ್ತ್ರೀಯುಂ ಮಕ್ಕಳನಾಗಳೇಕೆ ನೆನೆಯಂ ರತ್ನಾಕರಾಧೀಶ್ವರಾ ||೨೮

ಆರಾಱಲ್ಲದ ಗರ್ಭದೊಳ್ಬಳೆಯನಾರಾ ಮೂತ್ರದ ದ್ವಾರದೊಳ್ ।
ಬಾರಂ ಬಂದುಱ್ ಬಂಧುಗಳ್ಪಿತೃಗಳೆಂದೆನ್ನಂಗನಾನೀಕಮಂ॥
ದಾರಾರೆಂಜಲನುಣ್ಣನಾತ್ಮಜರೆನುತ್ತಾರಾರ ದುರ್ಗಂಧದಿಂ ।
ಚಾರಿತ್ರಂಗಿಡನಾತ್ಮನೇಂ ಭ್ರಮಿಪನೋ ರತ್ನಾಕರಾಧೀಶ್ವರಾ ॥೧೯

ಕುಲಮಂ ಗೋತ್ರಮನುರ್ವಿಯಂ ಬಿರುದುಮಂ ಪಕ್ಷೀಕರಂಗೊಂಡು ತಾ।
ನೊಲವಿಂ ತನ್ನವೆನುತ್ತೆ ಲೋಗರವೆನುತ್ತಂ ನಿಂದಿಪಂ ಜೀವನಂ ॥
ಅಲೆದಂ ಭರ್ತ್ರರ ನಾಲ್ಕುಲಕ್ಷಭವದೊಳ್ಬಂದಲ್ಲಿ ತಾನಾವುದ ।
ಕ್ಕೊಲಿದಂ ನಿಂದಿಸನಾವುದಂ ನಿರವಿಸಾ ರತ್ನಾಕರಾಧೀಶ್ವರಾ ॥೨೦

ಬಾಹ್ಯಾಪೇಕ್ಷೆಯಿನಾದೊಡಂ ಕುಲಬಲಸ್ಥಾನಾದಿಪಕ್ಷಂ ಮನ।
ಸ್ಸಹ್ಯಂ ನಿಶ್ಚಯದಿಂದಮಾತ್ಮನಕುಲಂ ನಿರ್ಗೋತ್ರಿ ನಿರ್ನಾಮಿ ನಿ ॥
ರ್ಗ್ರಹ್ಯೋದ್ಭೂತನನಂಗನಚ್ಯುತನನಾದ್ಯಂ ಸಿದ್ಧನೆಂದೆಂಬುದೇ ।
ಗ್ರಾಹ್ಯಂ ತತ್ಪರಿಭಾವಮೇ ಭವಹರಂ ರತ್ನಾಕರಾಧೀಶ್ವರಾ ॥೨೧

ಪಕ್ಷಂಗೊಂಡೊಡೆ ಕೊಳ್ಗೆ ಜೀವಹಿತಮುಳ್ಳಾಚಾರಮುಳ್ಳಗ್ರಮೋ।
ಮೋಕ್ಷಕ್ಕೈದಿಸಲಾಪ್ಪ ಸತ್ಕುಲಸುಧರ್ಮಶ್ರೀಯನುಂತಲ್ಲದು ॥
ದ್ಭಕ್ಷದ್ವೇಷದೆ ಕೊಲ್ವ ಕುತ್ಸಿತದ ಶೀಲಂ ತಳ್ತು ಸಾಧ್ವಾತ್ಮರು।
ಭಿಕ್ಷಂಗೆಯ್ವವನಾತ್ಮನೇಕೆ ಹಿಡಿವಂ ರತ್ನಾಕರಾಧೀಶ್ವರಾ ॥೨೨

ಎಲೆಲೇ ಉಳ್ಳುದನಾದೆ ಕೊಳ್ಳಗೊಳುವರ್ ನೋಡೆಂಬ ನಾಡ್ಮಾತ್ರ ದೇ।
ಸಲೆ ಸತ್ಯಂ ಬಹ್ವುಯೋನಿಯೊಳ್ಪಲವು ತಾಯುಂ ತಂದೆಯೊಳ್ಪುಟ್ಟದಾ॥
ಮಲಶುಕ್ಲಂಗಳೊಳಾಱು ಬಾಱುದುಮನಮನ್ಯರೊಳ್ಳಂದು ಬೈವಲ್ಲಿ ತಾಂ।
ಪಲಗರ್ಗಂ ಪುಟ್ಟದೆಯುಂದೊಡೇಂ ಕುದಿವುದೋ ರತ್ನಾಕರಾಧೀಶ್ವರಾ॥

ಪಾಪಂ ನಾರಕಭೂಮಿಗೊಯ್ವುದಸುವಂ ಪುಣ್ಯಂ ದಿವಕ್ಕೊಯ್ವುದಾ।
ಪಾಪಂ ಪುಣ್ಯಮುಮೊಂದುಗೂಡಿದೊಡೆ ತಿರ್ಯಙ್ಮರ್ತ್ಯಜನ್ಮಂಗಳೊಳ್॥
ರೂಪಂಮಾಳ್ಕುಮಿವೆಲ್ಲಮಧ್ರುವಮಿವೇಂ ಜನ್ಮಕ್ಕೆ ಸಾವಿಂಗೊಡಲ್।
ಪಾಪಂ ಪುಣ್ಯಮಿವಾತ್ಮಬಾಹ್ಯಕವಲಾ ರತ್ನಾಕರಾಧೀಶ್ವರಾ ॥೩೫

ಸುಕೃತಂ ದುಷ್ಕೃತಮುಂ ಸಮಾನಮದನನ್ಯರ್ಕೆಚ್ಚರೇಕೆಂದೊಡಾ।
ಸುಕೃತಂ ಸ್ವರ್ಗಸುಖಕ್ಕೆ ಕಾರಣಮೆನಲ್ತತ್ಸೌಖ್ಯಮೇಂ ನಿತ್ಯಮೋ॥
ವಿಕೃತಂಗೊಂಡಱಿವಂದಱಲ್ಲಿ ನಿಸದೋ ಸ್ವಪ್ನಂಬೊಲೇಂ ಮಾಂಜದೋ
ಪ್ರಕೃತಿಪ್ರಾಪ್ತಿಗೆ ನೂಂಕದೊ ಪಿಱಿವದೇಂ ರತ್ನಾಕರಾಧೀಶ್ವರಾ॥೩೬

ದುರಿತಂ ತೀರ್ದೊಡೆ ಪುಣ್ಯದೊಳ್ನಿಲುವನಾ ಪುಣ್ಯಂ ಕರಂ ತೀರ್ದೊಡಾ।
ದುರಿತಂಬೊಂದುವನಿತ್ತಲತ್ತಲಿಡೆಯಾಟಂ ಕುಂದಪಾತ್ರಂಗಿವಂ ॥
ಸರಿಗಂಡಾತ್ಮವಿಚಾರಮೊಂದಱೊಳ್ ನಿಂದಾನಂದಿಸುತ್ತಿರ್ಪನೇ।
ಸ್ಥಿರನಕ್ಕುಂ ಸುಖಿಯಕ್ಕುಮಕ್ಷಯನಲಾ ರತ್ನಾಕರಾಧೀಶ್ವರಾ ॥೩೭

ಬಗೆಯಲ್ದುಷ್ಕೃತಮೊರ್ಮೆ ತಾಂ ಶುಭದಮಾತ್ಮಂಗೇಕೆನಲ್ಪುಣ್ಯಮ್ಮ ।
ಪ್ಪಗೆ ತಾಂ ಮುಂದನುಬಂಧಮಾದ ಕತದಿಂ ಪುಣ್ಯಂ ಸುಪುಣ್ಯಾನುಬಂ॥
ಧಿಗೆ.ಬಂದಂದದು ಪುಂ ಶುಭಂ ಸುಕೃತಮುಂ ಪಾಪಾನುಬಂಧಕ್ಕೆಮುಂ।
ಪುಗೆ ಪಾಪಕ್ಕನುಬಂಧಿ ಪಾಪಮಶುಭಂ ರತ್ನಾಕರಾಧೀಶ್ವರಾ ॥೩೮

ಅದು ತಾನೆಂತೆನೆ ಮುನ್ನೆಗೆಯ್ದ ದುರಿತಂ ದಾರಿದ್ರ್ಯದೊಳ್ತಳ್ತೊಡಂ।
ಸದಯಾಮೂಲಮತಕ್ಕೆ ಸಂದು ನಡೆವಂ ಮುಂದೆಯ್ದುವಂ ಪುಣ್ಯಸಂ॥
ಪದಮಂ ತಾಂ ಸುಕೃತಾನುಬಂಧಿ ದುರಿತಂ ತಾಂಗಿರ್ದನಂ ಮಿಥ್ಯೆಯೊ।
ಳ್ಳುದಿಯಲ್ತಂ ದುರಿತಾನುಬಂಧಿ ದುರಿತಂ ರತ್ನಾಕರಾಧೀಶ್ವರಾ॥೩೯

ಪಡೆವಂ ಪೂರ್ವದ ಪುಣ್ಯದಿಂ ಸಿರಿಯನಾತಂ ಶ್ರೀದಯಾಮೂಲದೊ |
ಳ್ಪಡೆವಂ ತಾಂ ಸುಕೃತಾನುಬಂಧಿ ಸುಕೃತಂ ಮತ್ತಾಧನಾಢ್ಯಂ ಗುಣಾಂ ||
ಗಿಡೆ ಮಿಥ್ಯಾಮತದಲ್ಲಿ ವರ್ತಿಪನವಂ ಮುಂದೆಯ್ದುವಂ ದುಃಖಮಂ |
ನುಡಿಯಲ್ತಾಂ ದುರಿತಾನುಬಂಧಿ ಸುಕೃತಂ ರತ್ನಾಕರಾಧೀಶ್ವರಾ ||೩೯

ಅಘಪುಣ್ಯಂಗಳನಿಷ್ಟವೆಂದು ಬಳಿಕಂ ಲೇಸೆಂದೆನೇಕೆಂದೊಡಂ |
ತಘಮಂ ಪ್ರೊಕ್ಕ ಮನಂ ಸುಧರ್ಮಕೆ ಪುಗಲ್ ಮುನ್ನಾದ ಪಾಪಕ್ರಮಂ||
ಲಘುವಕ್ಕುಂ ಸುಕೃತಕ್ರಮಂಬಿಡಿದು ಭೋಗಪ್ರಾಪ್ತಿಯಿಂ ತೀರ್ದು
ಮೂ
ರ್ತಿಘನಂಬೊಲ್ಬಯಲಾಗಿ ಮುಕ್ತಿವಡೆಗುಂ ರತ್ನಾಕರಾಧೀಶ್ವರಾ||೪೦

ಪಡಿಯೇಂ ಜೀವದಯಾಮತಂ ಪರಮಧರ್ಮಂ ತನ್ಮತಂಬೊರ್ದಿ ಮುಂ|
ಗಡೆ ನಿರ್ಗ್ರಂಥರಥಕ್ಕೆ ಸಂದ ಯತಿ ಸೂರ್ಯಂಬೊಲ್ ಭವಾಂಭೋಧಿಯಂ ||
ಕಡುವೇಗಂ ಪರಿಲಂಘಿಪಂ ಸುಕೃತಕೃದ್ಗಾರ್ಹಸ್ಥ್ಯನುಂ ಧರ್ಮದಾ|
ಪಡಗಿಂ ಮೆಲ್ಲನೆ ದಾಂಟದೇಇರನಲಾ ರತ್ನಾಕರಾಧೀಶ್ವರಾ ||೪೧

ತನುವಂ ಸಂಘದ ಸೇವೆಯೊಳ್ಮನಮನಾತ್ಮಧ್ಯಾನದಭ್ಯಾಸದೊಳ್ |
ಧನಮಂ ದಾನಸುಪೂಜೆಯೊಳ್ದಿನಮನರ್ಹದ್ಧರ್ಮಕಾರ್ಯಪ್ರವ||
ರ್ತನೆಯೊಳ್ಪರ್ವವನೊಲ್ದು ನೋಂಪಿಗಳೊಳರ್ದಾಯುಷ್ಯಮಂ ಮೋ
ಕ್ಷಪಿಂ |
ಚನೆಯೊಳ್ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ ||೪೨

ಪುತ್ರೋತ್ಸಾಹದೊಳಕ್ಷರಾದಿಸಕಲಪ್ರಾರಂಭದೊಳ್ವ್ಯಾಧಿಯೊಳ್ |
ಯಾತ್ರಾಸಂಭ್ರಮದೊಳ್ಪ್ರವೇಶದೆಡೆಯೊಳ್ ವೈವಾಹದೊಳ್ನೀವಿ
ನೊಳ್ ||

ಛತ್ರಂದೋಳಗ್ರಹಾದಿಸಿದ್ಧಿಗಳೊಳರ್ಹತ್ಪೂಜೆಯುಂ ಸಂಘಸ |
ತ್ಪಾತ್ರಾರಾಧನಮುತ್ತಮೋತ್ತಮವಲಾ ರತ್ನಾಕರಾಧೀಶ್ವರಾ ||೪೩

ಆಹಾರಾಭಯವೈದ್ಯಶಾಸ್ತ್ರಮೆನೆ ನಾಲ್ಕುಂ ದಾನದಿಂ ಸೌಖ್ಯಸಂ |
ದೋಹಂ ಶ್ರೀಶಿಲೆ ಲೇಪ್ಯಕಾಂಸ್ಯರಜತಾಷ್ಟಾಪದರತ್ನಂಗಳಿಂ ||
ದೇಹಾರಂಗೆಯಲಂಗಸೌಂದರಬಲಂ ತಚ್ಚೈತ್ಯಗೇಹಪ್ರತಿ |
ಷ್ಠಾಹರ್ಷಂಗೆಯೆ ಮುಕ್ತಿಸಂಪದವಲಾ ರತ್ನಾಕರಾಧೀಶ್ವರಾ ||೪೪

ಪಿಡಿದೊಲ್ದರ್ಚಿಸೆ ನೋನೆ ದಾನವನಲಂಪಿಂ ಮಾಡೆ ತತ್ಪುಣ್ಯದಿಂ |
ಕುಡುಗುಂ ನಿಮ್ಮಯ ಧರ್ಮಮೊಂದೆ ನೃಪರೊಳ್ಪಂ ಭೋಗಭೂಲಕ್ಷ್ಮಿಯುಂ ||
ಬಿಡುಗಣ್ಣೊಸರಿಯುಂ ಬಳಿಕ್ಕೆ ಸುಕೃತಂ ಭೋಗಂಗಳೊಳ್ತೀರ್ದೊಡಂ |
ಕುಡುಗುಂ ಮುಕ್ತಿಯನಿಂತದಾರ್ಕುಡುವರೋ ರತ್ನಾಕರಾಧೀಶ್ವರಾ ||

ಪುಣ್ಯಂಗೆಯ್ಯದೆ ಪೂರ್ವದೊಳ್ಬರಿದೆ ತಾನೀಗಳ್ಮನಂನೋಡೆ ಲಾ |
ವಣ್ಯಕಾಕ್ಯಭರಣಕ್ಕೆ ಭೋಗಕೆ ನಸುಂ ರಾಗಕ್ಕೆ ಚಾಗಕ್ಕೆ ಕಾ ||
ರುಣ್ಯಕ್ಕಗ್ಗದ ಲಕ್ಷ್ಮಿಗಂ ಬಯಸಿ ಬಾಯಂ ಬಿಟ್ಟು ಕಾಂಕ್ಷಾಮಹಾ |
ರಣ್ಯಂಬೊಕ್ಕ ಕಟೇಕೆ ಚಿಂತಿಸುವರೋ ರತ್ನಾಕರಾಧೀಶ್ವರಾ ||೪೬

ಅರಿತಾರ್ಕಳೆದರ್ ದರಿದ್ರಮನದಾವಂಗಾವನೇನೊಂದುಸ |
ತ್ಕಾರಂಗೆಯ್ಯದೆ ಭಾಗ್ಯಮಂ ಕಿಡಿಸಿದಂ ಪೂರ್ವಾರ್ಜಿತಪ್ರಾಪ್ತಿಯಿಂ ||
ದಾರಿದ್ರ್ಯಂ ಧನಮೆಂಬಿರಟ್ಟಿಮನಿಕುಂ ಮತ್ತೇಕೆ ಧೀರತ್ವಮಂ |
ದೂರಂಮಾಡಿ ಮನಂ ಸದಾ ಕುದಿವುದೋ? ರತ್ನಾಕರಾಧೀಶ್ವರಾ ||೪೭

ಕುರುರಾಯಂ ಬಹುವಿತ್ತಮಂ ಕುಡುವನಾ ಕರ್ಣಂಗೆ ಮತ್ತಾಸಹೋ |

ದರಗರ್ಪಾಂಡವರ್ಗೇನುಮಂ ಕುಡನದೇಂ ಪಿಂಬೊಟ್ಟಿನೊಳ್ಕರ್ಣನು॥
ವರ್ಗೆ ದಾರಿದ್ರ್ಯನೆನಲ್ಕೆ ಸುದ ನರರೇಂ ಧರ್ಮಾರ್ಥರಾಧೀಶರಾ ।
ದರಿದೇಂ ಪಾಪಶುಭೋದಯಕ್ರಿಯೆಯಲಾ ರತ್ನಾಕರಾಧೀಶ್ವರಾ ॥೪೮

ಉಪಭೋಗಂ ಬರೆ ಭೋಗಮೈತರೆ ಮನೋರಾಗಂಗಳಂ ಭೋಗಿಪಂ ।
ತುಪಸರ್ಗಂಬರೆ ಮೋಙ್ದರಿದ್ರಪಶಸಲ್ ಸಂತೋಷಮಂ ತಾಳ್ದು ನಿ॥
ಮ್ಮ ಪದಾಂಭೋಜಯುಗಂ ಸದಾಶರಣೆನುತ್ತಿರ್ಚೈಸುಮಂಗಾಸ್ಕೃಪ ।
ಸ್ಥಪದಂ ತಾನೆ ಮುನೀಂದ್ರಪದ್ಧತಿಯಲಾ ರತ್ನಾಕರಾಧೀಶ್ವರಾ ॥೪೯

ಸಿಹಿಯುಂ ಕಾರಮುಮಾಮ್ಲಮುಂ ತೊವರು ಮುಪ್ಪುಂ ಕೈಪೆಯುಂ ಬೇಱೆವೇ
ಱ ಪಿತಂದೋರ್ಕುಮೆನುತ್ತವಕ್ಕೊಲಿವವೊಲ್ ಶ್ರೀಗಂ ದರಿದ್ರೋದ್ಧರಾ ॥
ಗೃಹಕಂ ಭೋಗಕೆ ರೋಗಕಂ ಪಱುವಿಗಂ ಕೇಡಿಂಗೆಯುಂ ಬಾಧೆಗು ।
ತ್ಸಹನುಂ ಮಾಳ್ಪ ಗೃಹಸ್ಥನುಂ ಸುಖಿಯಲಾ ರತ್ನಾಕರಾಧೀಶ್ವರಾ ॥

ಘುಟಿಕಾಮಾತ್ರಕನನ್ಯರೊಳ್ ಕಥೆಯನೊಂದಂ ಸೂಚಿಸುತ್ತಿರ್ದೊಡಂ ।
ಸ್ಫುಟದಿಂ ಚಿತ್ತಮುಮಕ್ಷಿಯುಂ ಪದಪದಕ್ಕಾಮಾತ್ರೆಯುಂಸಾರ್ಗ್ಗಮಂ॥
ತುಟಿ ತಾನುಂತುಟಿ ಬಾಹ್ಯದೊಳ್ನಗುಱ್ದೊಡಂ ಧ್ಯಾನುಕ್ಷಣಕ್ಕೊರ್ಮೆಸು
ಘುಟಿಸಲ್ಕಿಮ್ಮಪದಂಗಳೊಳ್ ಸುಖಿಯಲಾ ರತ್ನಾಕರಾಧೀಶ್ವರಾ ॥೫೧

ಪಿಡಿಪಿಡಾರ್ಂತನಕೈಗೆ ಸೂತ್ರವೆನಸುಂ ಸಿಲ್ಕಿರ್ದೊಡಂ ವ್ಯೋಮದೊಳ್
ನಡೆಗುಂ ಗಾಳಿಪಟಂ ನಮುಂತದಱವೊಲ್ ಮೆಯ್ಯೊಳ್ಮನಂ ಜಂಜಡಂ॥
ಬಡೆದಿತ್ತಲ್ಸಿಲುಕಿರ್ದೊಡಂ ನೆನದು ಲೋಕಾಗ್ರಕ್ಕೆ ಪಾಯ್ದತ್ತಲಾ।
ಗಡೆ ಸಿದ್ಧಾಂಘ್ರಿಗಳೊಳ್ಪಳಂಚೆ ಸುಖಿಯೈ ರತ್ನಾಕರಾಧೀಶ್ವರಾ॥೫೨

ನಡೆವಾಗಳ್ನಡೆಕೊಂಕಿದಾಗಳೞಿಯೊಳ್ ಬೀೞ್ವಾಗಳೇೞ್ವಾಗಳುಂ ।
ನುಡಿವಾಗಳ್ನುಡಿತಪ್ಪಿದಾಗಳೆರ್ದೆಗೆಟ್ಟಾಗಳ್ಸುಖಾವಾಪ್ತಿಯೊಳ್ ॥
ಬಿಡದರ್ಹತ್ಪ್ರಭುಸಿದ್ಧ ಶಂಕರ ಸಮುದ್ರಾಧೀಶ್ವರ ತ್ರಾಹಿ ಎಂ ।
ದೊಡನಭ್ಯಾಸಿಸುವಾತನೇ ಸುಖಿಯಲಾ ರತ್ನಾಕರಾಧೀಶ್ವರಾ ॥೫೩

ಎತ್ತೆತ್ತಂ ಲಲಿತಾಂಗಿಯರ್ ಸುೞಿದರತ್ತತ್ತಡುಗುಂ ಕಣ್ಗಳೆ ।
ತ್ತೆತ್ತಂ ಕಾಮಿನಿಯರ್ ಮೊಗಂದೆಗೆದರತ್ತತ್ತೊಂದುಗುಂ ಜಿಹ್ವೆ ಮ॥
ತ್ತೆತ್ತೆತ್ತಂ ಸರಿವಿಂಡಿಯರ್ತೆಗೆದರತ್ತತ್ತೆಯ್ದುಗುಂ ಬುದ್ಧಿ ನಿಂ ।
ಮತ್ತಂ ಬಾರದು ಕೆಟ್ಟನೇವೆನಕಟಾ ರತ್ನಾಕರಾಧೀಶ್ವರಾ ॥೫೪

ಮೊದಲೊಳ್ಮುಗ್ಗುವನಿಚ್ಛೆವಟ್ಟೊಡನೆ ತಾನುಚ್ಛ್ವಾಸನಿಶ್ವಾಸವ್ರೊ ।
ರದೆ ಕೈಕಾಲ್ಬಡಿಗೊಂಬನಾಕಡೆಯೊಳುಂ ಶಕ್ತಿಕ್ಷಯಂದೋಱೆ ತ ॥
ಬ್ಬಿದಪೆಣ್ಣಂ ಬಿಡುಗೆಯ್ದು ಕೂಡೆ ಕೆಲದೊಳ್ಬಿದ್ದಳ್ಕೆಮೊಯ್ವಂ ಮನ।
ಕ್ಕಿದು ಲೇಸೇ ಸುಖವೇ ಮರುಳ್ತನವಲಾ ರತ್ನಾಕರಾಧೀಶ್ವರಾ ॥೫೫

ತಿಳಿವಿಲ್ಲಾಗಿ ಶಿಶುತ್ವದೊಳ್ತನಗೆ ತಾಂ ತನ್ನೆಂಜಲೊಳ್ಮೂತ್ರದೊಳ್ ।
ಮುೞುಗಿರ್ದುಂ ಬೞಿಕಂ ವಿವೇಕವೆರ್ದೆಯೊಳ್ಮೂಡಿದೋಱಿಯುಂ ಪ್ರಾಯದೊಳ್॥
ಎಳವೆಣ್ಣೆಂಜಲನುಂಡು ಮೂತ್ರಬಿಲದೊಳ್ ಚೀನಾಱುವೀಶುಕ್ಲಮಂ ।
ತುಳುಕಲ್ಮೋಹಿಪನಾತ್ಮನೇಂ ಭ್ರಮಿತನೋ ರತ್ನಾಕರಾಧೀಶ್ವರಾ ॥

ಸುಖವೆಂಬರ್ ಸುಖವೆಂತೊ ನಿರ್ಮಲಬಲಂ ಸುಜ್ಞಾನಮುಂ ಶಾಶ್ವ ಸುಂ।
ಮುಖವಾದಂದದು ಸೌಖ್ಯವಂಗನೆಯ ಸಂಭೋಗಾಂತ್ಯದೊಳ್ ಹೇಯದುನ್ಮುಖಮುಂ ॥
ಶಕ್ತಿವಿನಾಶಮುಂ ಮರವೆಯುಂ ನಿದ್ರಾಜಡಂದೋಱಿಯುಂ ।
ಸುಖವೆಂದೆಂಬರದೇನೊ ದುರ್ಮುಖರಲಾ ರತ್ನಾಕರಾಧೀಶ್ವರಾ ॥೫೭

ಏನೊಂದುಗ್ರಮೊ! ನೋಡ ನೋಟಮಱಿವೇ ಮೆಯ್ಯಾದಶುದ್ಧಾತ್ಮನಂ।
ಮೀನಾಕ್ಷೀತನು ತನ್ನ ತಳ್ಕೆಸಲೊಡಂ ನೇತ್ರಂಗಳಂ ಕಟ್ಟಿಸು॥
ಜ್ಞಾನಂಗುಂದಿಸಿ ಮೂರ್ಛೆಗೈದಿಸಿ ಪೆಣಂಬೊಲಾಕ್ಕುಗುಂ ಮತ್ತದ
ಕ್ಕಾನಂದಂ ಮಿಗೆ ಮುಗ್ಧನುಂ ಮರುಳಲಾ ರತ್ನಾಕರಾಧೀಶ್ವರಾ ॥೪೮

ಮದನವ್ಯಾಧಿಗೆ ಕಲ್ಲ ಪೊಯ್ಯುದಿನಿದೇ? ಮೆಯ್ತೀಂಟಿಗಂ ಕಜ್ಜಿಗಂ।
ಬಡಿಯಂ ತೋಡುವುದೊಳ್ಳಿತಲ್ತು ಬಗೆವಂದಾತ್ಮಂಗೆ ನಾರೀರತಂ॥
ಮುದವಲ್ತಾದೊಡಮಂತದಂ ಬಿಡಲಶಕ್ಯಂ ಬಿಟ್ಟೊಡೀಯುವ್ವನೋ।
ನ್ಮಾದದುದ್ರೇಕಮಡಂಗದೇವೆನಕಟಾ! ರತ್ನಾಕರಾಧೀಶ್ವರಾ॥೪೯

ತನು ವೇೞ್ಕುಂಬವನೌಷಧಕ್ಕೆಳಸನೇ? ಪಿತ್ತೋದ್ರಿಕ್ತಂ ದೇಹಕೋ।
ಧನೆಯುಂ ಪಾಲ್ವೊಲಂಗನಾಸುರತದಿಂ ತನ್ನಿಂದ್ರಿಯಂ ಪೋಗೆ ಯು॥
ವ್ವನತಾಪಂ ನಿಲುಗುಂ ನಿಲಲ್ ಚರಿತೆ ಸಲ್ಗುಂ ಸದ್ಗೃಹಸ್ಥಂಗೆ ತ।
ತ್ತನು ಬೇಡೆಂಬ ಮುನೀಶ್ವರಂಗುಚಿತಮೇ ? ರತ್ನಾಕರಾಧೀಶ್ವರಾ ॥೫೦

ವಿಷಮೋದ್ರೇಕದ ಜನ್ಮನಂದಳೆದೊಡಂ ತತ್ಪ್ರಾಯದೊಳ್ಪೆಣ್ಗಳೊಳ್।
ವಿಷಯಕ್ಕಾಟಿಸನಾವಗಂ ಪರಮತತ್ವಜ್ಞಾನಸಂತುಷ್ಟಕಂ॥
ಋಷಿ ತಾನಕ್ಕೆಮ ಶಿಷ್ಯನಕ್ಕೆಮ ಅವಂ ಮಾನುಷ್ಯನಲ್ತಲ್ತು ನಿ।
ರ್ವಿಷರೂಪಂ ನಿರಘಂ ನಿರಾವರಣನೈ ರತ್ನಾಕರಾಧೀಶ್ವರಾ॥೫೧

ಮರ್ದ್ದಂ ಮಾನಿನಿಯುಂ ಸಮಾನಮಱಿವಂಗಂತಲ್ಲದೇಂ ಪೆಣ್ಣೊಳೊಂ।
ದಿರ್ದ್ದಂ ಶ್ರೀಜಿನದತ್ತನುಂ ಕಪಿಳಮಿತ್ರಂ ವಾರಿಷೇಣಾದಿಗಳ್॥
ಸಾರ್ದ್ದಿರ್ಪರ್ ಸುಡುಗಾಡನೇಕೆ? ತಪಮೇಕಾಪರ್ವದೊಳ್ಮತ್ತೆ ಪೆ।
ಣ್ಣೊರ್ದ್ದತ್ತೈದುವರೆಯ್ದಿಯುಂ ಭ್ರಮಿತರೋ ? ರತ್ನಾಕರಾಧೀಶ್ವರಾ॥

ಧಾರಾಪೂರ್ವಕಮಾದ ಪೆಣ್ಗಳೊಳವರ್ ಪ್ರತ್ಯೇಕಮೇಕೈಕಮ|
ತ್ಸೀರಾಗಪ್ರತಿಕರ್ ಮದಕ್ಷಯನಿಮಿತ್ತಂ ಕಾಮಮಂ ತೀರ್ಚುವರ್॥
ವಾರಸ್ತ್ರೀಬಹುಲಾಂಗನಾಪರವಧೂಚೇಟೀರತಕ್ಕಾಟಸರ್ ।
ಸಾರಾತ್ಮರ್ ಜಿನದತ್ತಮುಖ್ಯರಹರೇ ರತ್ನಾಕರಾಧೀಶ್ವರಾ ॥೬೩

ಸತ್ಯಾಧಿಷ್ಠಿತಧರ್ಮಮಂ ತಿಳಿದ ಜೀವಂ ತನ್ನನೀಕಾಮಮ|
ಪ್ರತ್ಯಾಖ್ಯಾನಕಷಾಯಸಂಭವದೆ ಸುತ್ತಿತ್ತಂದು ಪೆಣ್ಗೂಡಿಯುಂ॥
ರತ್ಯಂತೋದ್ಭವಹೇಯಮಂ ನೆನೆಯುತುಂ ಪ್ರೋಗಲ್ ಜಯಂ ಪೆಣ್ಗೆ ತಾ|
ನತ್ಯಂತಪ್ರಿಯಬದ್ಧನಾಗೆ ಕಿಡನೇ? ರತ್ನಾಕರಾಧೀಶ್ವರಾ॥೬೪

ಪೊಲೆಯುಂ ಮುದ್ದುಮೊಗಂ ಬೆಡಂಗೆಸೆಯೆ ಪೆಣ್ಣಂತಿರ್ದಳಿಂತಿರ್ದಳೆಂ|
ದೊಲವಿಂ ಭಾವಿಸಿ ಕಾಣ್ಬುದೇ ನರಕಮಬ್ಧಿಪ್ರಾಂತಮಗ್ನಾದ್ರಿಯೊಳ್॥
ಸಲಿಲಂ ತನ್ನುಡೆ ಮುಟ್ಟತೋರ್ಪನದೆ ಪಲ್ಯಂಕಾಸನಂ ಸ್ಫಾಟಿಕೋ|
ಜ್ವಲನೆಂದಾಗಳೆ ನಿಮ್ಮಕಂಡೊಡೆ ಸುಖಂ ರತ್ನಾಕರಾಧೀಶ್ವರಾ॥೬೫

ಪೆರರಂ ಪೇಳ್ದೊಡೆ ನೋವರಾನೆನಗೆ ಪೇಳ್ವೆಂ ಕಾಮಿನೀಮಾತ್ರದೊ ।
ಜ್ಜರಮೆಯ್ಯಂ ಲತೆಯೆಂದು ಮಾಂಸಕುಚಮಂ ಹೇಮಾಬ್ಜಮೆಂದೆಂದು ನೆ॥
ತ್ತರನುಂಡಾತುಟಿಯಂ ಸುಧಾರುಚಿಯೆನುತ್ತಾಂ ಬಿಟ್ದುದುಂ ಸಾಲದ|
ಸ್ವರನೊಯ್ದಂ ಕವಿಯೋ ಪಲಂ ಕಪಿಯೊ ನಾಂ ರತ್ನಾಕರಾಧೀಶ್ವರಾ॥

ಗುರುಮಾತಾಪಿತರಂ ಪತಿವ್ರತೆಯರಂ ಸಮ್ಯಕ್ತ್ವಸಂಪನ್ನರಂ|
ಪಿರಿದುಂ ಬಣ್ಣಿಸಿ ಪೇಳ್ಗೆ ತೀರ್ಥಕಕಥಾಶೃಂಗಾರಮಂ ಪೇಳ್ಗೆ ಮೇಣ್॥
ದುರಿತಸ್ತ್ರೀಯರನಾತ್ಮಬಾಹ್ಯರನದೇಂ ಪೇಳ್ವರ್ದ್ದಿನಂ ಸಗ್ಗದಂ|
ತಿರೆಯಂಧಂಗೆ ತವಿಸ್ರೀಯುಂ ನುಡಿವರೇ? ರತ್ನಾಕರಾಧೀಶ್ವರಾ॥೬೭

ಕವಿತಾಶಕ್ತಿಯೆ ಕಲ್ಪವಲ್ಲಿಯುದನಾಸದ್ಧರ್ಮಮೆಂದೆಂಬ ಮೇ|
ರುವಿನೊಳ್ಬಿತ್ತಿ ಮನೋವಿಶುದ್ಧಿಬಲವೀರ್ಯಂ ಬುದ್ಧಿಸಾಫಲ್ಯಮಾ‖
ಕವಿಯುಂ ಸರ್ವರುಮುಣ್ಬರಾಫಲಮನಿತ್ತುಲ್ಮಾಣ್ದುಮಿಥ್ಯಾತ್ವಮಾ|
ರವಮೊಳ್ಬಿತ್ತಿ ಬೞಲ್ವರೇತಕಕಟಾ! ರತ್ನಾಕರಾಧೀಶ್ವರಾ‖೭೮

ಒಡಲಂ ರಕ್ಷಿಸಲನ್ಯರಂ ನುತಿಸಿದಾಕೊಂಡಾಟಮಂ ಪೆಣ್ಗಳೊಳ್|
ಕಿಡೆ ಬೞ್ದುಡಿದ ಲಂಪಟಭ್ರಮಣದಾಭಂಡಾಟಮಂ ಸರ್ವರೊಳ್‖
ನುಡಿದೇಕುಬ್ಬುವರಯ್ಯ ಪುಣ್ಯಕಥೆಯೋ ಅಧ್ಯಾತ್ಮಮೋ ಕೋಳ್ಕುಸ|
ರ್ಮದುಮಂ ಪೊಲ್ಗಡಲೆಂದು ಕಂಡರಕಟಾ! ರತ್ನಾಕರಾಧೀಶ್ವರಾ‖೭೯

ನೀನಾಕಿನ್ನರಿವೇಣುತಾಳಮುರಜಾಳಾಪಾದಿಸಂಸಿದ್ಧಿ ಗೀ|
ರ್ವಾಣಪ್ರಾಕೃತವಾಕ್ಯಸಿದ್ಧಿಸುಕವಿತ್ವಂ ಸುಸ್ವರಂ ಸತ್ಕುಲಂ‖
ತಾರುಣ್ಯಂ ಶ್ರೀ ಚೆಲುವಕ್ಕೆಯಾದೊಡಮದೇನಾಲೀಲೆಗಂ ನಿಮ್ಮ ಕ|
ಲ್ಯಾಣಾರಾಧನೆಯಕ್ಕೆ ಚಿತ್ತವಿಸಿದಂ ರತ್ನಾಕರಾಧೀಶ್ವರಾ‖೮೦

ಪಿತಕ್ಕಾಡುವರಯ್ಯ ಹಮ್ಮನಕಟಾ! ತಮ್ಮಲ್ಲಿ ವಿದ್ಯಾಕಳಾ|
ವ್ರಾತಂ ತೞ್ತುದನಾಕವಿತ್ವಮುಸಿರ್ಗುಂ ಸುಜ್ಞಾನಮುಂ ತತ್ಪರಂ‖
ಜ್ಯೋತಿರ್ವ್ಯಕ್ತಿಯ ಯುಕ್ತಿಯೇ ನುಡಿಗುಮಿನ್ನಂತಲ್ಲದಲ್ಲಿಯ|
ದ್ವಾತದ್ವಾ ಬಹುಭಾಷೆಯಿಂ ಫಲವದೇಂ ? ರತ್ನಾಕರಾಧೀಶ್ವರಾ‖೮೧

ತರ್ಕಂಬಂದೊಡೆ ದೃಷ್ಟದಿಂ ಶ್ರುತದಿನಂತೂಹಾನುಮಾನಂಗಳಿಂ|
ಬೇರ್ಕೆಯ್ದಾತ್ಮನನೆಲ್ಲರುಂ ನೆರೆಯೆ ಕಂಡಂತಾಗೆಯಾಸ್ಥಾನಮಾ‖
ಲರ್ಕಂಡಾಡೆ ಕುವಾದಿಯುಂ ತಿಳಿಯೆ ಪೇೞಲ್ಬಲ್ಲನೇ ಬೋಧಮಾ |
ಲಾರ್ಕಂ ಶುಷ್ಕವಿವಾದಿ ತಾನಧಿಕನೇ ರತ್ನಾಕರಾಧೀಶ್ವರಾ‖೮೨

ಶಾಸ್ತ್ರಂ ಬಂದೊಡೆ ಶಾಂತಿ ಸ್ಥೈರಣೆ ನಿಗರ್ವಂ ನೀತಿ ಮೆಲ್ವಾತು ಮು|
ಕ್ತಿಸ್ತ್ರೀಚಿಂತೆ ನಿಜಾತ್ಮಚಿಂತೆ ನಿಲವೇಳ್ಕುಂತಲ್ಲದಾಶಾಸ್ತ್ರದಿಂ॥
ದುಸ್ತ್ರೀಚಿಂತನೆ ದುರ್ಮುಖಂ ಕಲಹಮುದ್ಗರ್ವಂ ಮನಂಗೊಂಡೊಡಾ|
ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ ರತ್ನಾಕರಾಧೀಶ್ವರಾ॥

ಭೂನಾಥರ್ಕಳ ಬಾೞ್ಕೆ ಚಿತ್ತಕೆ ಸದಾ ತಳ್ಪಂಕವೆಷ್ಟೆಷ್ಟು ಧಾ|
ತ್ರೀನಾರೀಧನಸೇನೆ ಸಾರ್ದ್ದುದಮದುಂ ಸಾಲ್ದಪ್ಪುವೇ? ಮತ್ತೆ ದು॥
ರ್ಧ್ಯಾನಾಘೇಕ್ಷೆಯಿ ಪೆರ್ಚ್ಚುಗುಂ ಬಗೆಯಲುಂತಾಚಿಂತೆಯೋ ವ್ಯಾಧಿ ಸು|
ಜ್ಞಾನೈಶ್ವರ್ಯಕೆ ಸಾಟಿ ಸೌಖ್ಯಮೊಳವೇ? ರತ್ನಾಕರಾಧೀಶ್ವರಾ॥ ೨೪

ಪಡೆಯೊಳ್ಬಲ್ಲಿದನಾದೊಡಾ ಪಡೆಯಿನೇಂ ಸಂಸಾರಿಯಂ ಗೆಲ್ವನೇ?|
ಕಡುಪಿಂದಂ ಜವನಂ ತೆರಳ್ಚುವನೆ? ಬಲ್ಪಿಂ ಮೋಕ್ಷಮಂ ಕೊಳ್ವನೇ?॥
ಕಡೆಗಾಭೂಪನ ಶಕ್ತಿ ನಾಲ್ಗೞಿಗೆ ಸಲ್ಗುಂ ಮರ್ತ್ಯಕೀಟಂಗಳೊಳ್|
ಬಿಡು ಯೋಗೀಂದ್ರನ ಶಕ್ತಿಗಾವುದು ಸಮಂ ರತ್ನಾಕರಾಧೀಶ್ವರಾ॥ ೨೫

ತಮ್ಮಂ ಕೀರ್ತಿಸೆ ನಲ್ಮೆಯೊಲ್ಮೆ ಕಡುಚಾಗಂ ಕೂಡೆ ಸಂಭಾಷಣಂ|
ನಿಮ್ಮಂ ಕೀರ್ತಿಸಲಪ್ಪನೋರೆ ಬಡಶಾಗಂ ಮೌನಮೀಭೂಮಿಪರ್॥
ತಮ್ಮಂ ಕೊಲ್ವ ನರೇಂದ್ರನಂ ಪೊಗೞ್ಚುಂ ಮನ್ನಿಪರ್ ನಿಮ್ಮೊಳೇಂ|
ಹಮ್ಮಂ ತೋರ್ಪರೊ ಪಾಪನೊಳ್ಕಲಹವೇ? ರತ್ನಾಕರಾಧೀಶ್ವರಾ॥ ೨೬

ಆರಿಂದಾದುದೊ ರಾಜ್ಯಲಕ್ಷ್ಮಿಯದು ನಿಮ್ಮಿಂದಾದುದೆಂತೆಂದೊಡಾ|
ಚಾರಂ ಮುನ್ನಿನ ಪಾತ್ರನಿರ್ಜ್ಜ ಫಲದಿಂದಾ ಜೀವಕೀಜನ್ಮದೊಳ್॥
ನೇರಿತ್ತಾಚರಣಕ್ಕೆ ನೀನೆ ಪತಿ ನಿನ್ನಂ ಮಾಣ್ದವಂ ಕಷ್ಟಸಂ|
ಸಾರಾಂಭೋಧಿಯ ದಾಂಟಲೇನಱವನೇ? ರತ್ನಾಕರಾಧೀಶ್ವರಾ॥ ೨೭

ಅಣುಮಾತ್ರಂ ವ್ರತಮಲ್ಪಕಾಲಮಿರೆ ಮುನ್ನಂ ತತ್ಫಲಪ್ರಾಪ್ತಿಯಿಂ ।
ಪ್ರಣುತಕ್ಷ್ಮಾಪತಿಯಾದೆನಿನ್ನಧಿಕದಿಂ ಸಮ್ಯಗ್ವ್ರತಾಚಾರಲ ॥
ಕ್ಷಣಮುಂ ಶಾಶ್ವತಮಾಂತು ದೇವಪದಮಂ ಕೈವಲ್ಯಮುಂ ಕೊಳ್ವೆನೆಂ ।
ದೆಣಿಸುತ್ತುಜ್ಜುಗಿಪಾತನೇ ಸುಖಿಯಲಾ ರತ್ನಾಕರಾಧೀಶ್ವರಾ ॥೭೮

ಭೃತ್ಯಂ ತನ್ನನದೆಂತು ಕಾಣ್ಬನವನಂತುರ್ವೀಶ್ವರರ್ ನಿಮ್ಮ ಕಂ।
ಡತ್ಯಾನಂದದೆ ಕಾಣ್ಕೆ ಕೈಮುಗಿತಮುಷ್ಟಾಂಗಾನತಂ ಸಮ್ಮುಖಂ॥
ಸ್ತೋತ್ಯಂ ಸೇವೆಗಳೆಂಬಿವಂ ನೆಗಳುತುಂ ನಂಬಿರ್ದೊಡಾತಂಗೆ ತ।
ತ್ಪ್ರತ್ಯರ್ಥಿಕ್ಷಿತಿಪಾಲರೇನೆಱಗರೇ? ರತ್ನಾಕರಾಧೀಶ್ವರಾ॥೭೯

ಸುರಪಂ ತನ್ನಿಭವಿತ್ತು ಪಾವತಿಗನಪ್ಪಂ ಕಾಂತೆಯಿಂ ಪಾಡಿಪಂ।
ಸುರಸೈನ್ಯಂ ಸಹಮಾಗಿ ನಿಮ್ಮ ಜಳಕಕ್ಕೊಲ್ದೋಳಿಗಂ ಮಾಳ್ಪನಾ॥
ಧರದಿಂ ಛತ್ರಮನೆತ್ತುವಂ ನಡಿಸುವಂ ಪಲ್ಲಕ್ಕಿಯಂ ತಾಳ್ವನೀ।
ನರಕೀಟಾದಿಗಳೇಕೆ ಗರ್ವಿಸುವರೋ? ರತ್ನಾಕರಾಧೀಶ್ವರಾ ॥೮೦

ದೊರೆಯೇನಂ ಪಿಡಿದಿರ್ಪನಂತದನೆ ಲೋಕಂ ಮೆಚ್ಚುಗುಂ ತದ್ಧರಾ।
ವರನಾದುರ್ಮತದತ್ತ ತಾನೆಳಸಿದಂದಾಸಾರ್ದರಂ ತನ್ನವಂ॥
ನರಕಕ್ಕಿಕ್ಕಿದನೊಲ್ದು ನಿಮ್ಮ ಮತದತ್ತೆಚ್ಚೈಸಿದಂದಾತನು।
ದ್ಧರಿಸಲ್ತಾನೆ ಸಮರ್ಥನಾದ ನರನೈ ರತ್ನಾಕರಾಧೀಶ್ವರಾ॥೮೧

ನರರೊಳ್ಪುಟ್ಟೆ ನರೇಂದ್ರನಾದ ದಿನದೊಳ್ ಸದ್ಧರ್ಮಮಂ ಸನ್ಮುನೀ।
ಶ್ವರರಂ ಭವ್ಯರನೊಲ್ದು ಮನ್ನಿಸಿಯನಾಥರ್ಗಾಶ್ರಿತರ್ಗೀಯುತುಂ॥
ಪರಿವಾರಪ್ರಜೆಗಳ್ಗೆ ತಾಯ ತೆಱದಿಂದೋವುತ್ತಮಿರ್ಪಂ ಧರಾ।
ವರನಿಂದಾಬರ್ದಿಗಲಕ್ಕೆ ನಾಳನವನೈ ರತ್ನಾಕರಾಧೀಶರಾ॥೮೨

ಎಷ್ಟೆಷ್ಟೈಸಿರಿ ಪೆರ್ಚುಗುಂ ತನಗೆ ತಾನಷ್ಟಷ್ಟು ಸದ್ಧರ್ಮಕು|
ತ್ಕೃಷ್ಟಂಮಾಡಲಿವೇಳ್ಕು ನೋಂಪಿಗಳನಾನಿರ್ಗ್ರಂಥರಂ ನಿಚ್ಚ ಸಂ||
ತುಷ್ಟಂಮಾಡಲಿವೇಳ್ಕು ಧಾರ್ಮಿಕಜನಕ್ಕಾಧಾರವಾಗಲ್ಕೆವೇ|
ಳ್ಕಿಷ್ಟಂ ತಾಂ ಸುಕೃತಾನುಬಂಧಿ ಸುಕೃತಂ ರತ್ನಾಕರಾಧೀಶ್ವರಾ||೮೩

ವ್ರತಮಂ ಮಾಣ್ದೊಡೆ ಸೇವೆಮಾಣ್ಬುದರಿದೇ? ಶೀಲೋಪವಾಸಕ್ಕೆ ಬೆ|
ರ್ಚುತಿರಲ್ಕೆ ಕ್ರಮಲಕ್ಷ್ಮಿಜಾರ್ವುದರಿದೇ? ಸತ್ಪಾತ್ರದಾನಂ ವಿವ||
ರ್ಜಿತಮಾಗಲ್ ಸಿರಿಕುಂದಿವರ್ಪುದರಿದೇ? ನಿಮ್ಮರ್ಚನಾಸಂಭ್ರಮಂ|
ಚ್ಯುತಮಾಗಲ್ ನೃಪವೈಭವಂ ಸಡಿಲದೇ? ರತ್ನಾಕರಾಧೀಶ್ವರಾ||೮೪

ಭೂಕಂಪಂ ಗ್ರಹಣಂ ಬರಂ ಗೃಹದನಿಷ್ಟಂ ವ್ಯಂತರೋಗ್ರಾ ರುಜಾ|
ಶೋಕಂ ದುಸ್ಥಿತಿ ಗವ್ಯಮರ್ತ್ಯಗಜವಾಹೋನ್ಮಾದಿ ದುಸ್ಸ್ವಪ್ನ ನಾ||
ನಾಕಷ್ಟಕ್ಕೆ ಮಹಾಭಿಷೇಕ ಕವಿಕುಂಡಾದ್ಯರ್ಚನಂ ಸಂಘಪೂ|
ಜಾಕೃತ್ಯಂ ದೊರೆ ಮಾಳ್ಪ ಶಾಂತಿಕವಲಾ ರತ್ನಾಕರಾಧೀಶ್ವರಾ||೮೫

ದೀಕ್ಷಾಗ್ರಾಹಿಗಳಂ ದಯಾಶ್ರಿತರನಾಯುಕ್ಷರ್ಕಳಂ ನಿಮ್ಮ ಸ|
ಲ್ಲಕ್ಷದ್ಬಿಂಬಮನಾನೆಯಂದಣಗಳೊಳ್ಪಲ್ಲಕ್ಕಿಯೊಳ್ತೇಱೊಳ್||
ಟ್ಟಕ್ಷೀಣೋತ್ಸವದಿಂ ಪ್ರಭಾವನೆಗಳಂ ಮಾಳ್ಪಂ ನಿರಾಯಾಸದಿಂ|
ಮೋಕ್ಷಶ್ರೀಗಧಿನಾಥನಪ್ಪುದರಿದೇ? ರತ್ನಾಕರಾಧೀಶ್ವರಾ||೮೬

ಕೋಱಮಿಂಚಿಂ ಕೋಲಿವೆಣ್ಗೆ ಸೋಲ್ವ ಕೆಱದಿಂ ಶೃಂಗಾರವೀರಕ್ಕೆ ಬಾ|
ಯೊಱ್ತೀತಸ್ಕರಜಾರವೀರವಿಟವೇಶ್ಯಾಕಾವ್ಯಮಂ ಕೇಳ್ದು ಮೆಯ್ ||
ಮಱೆವರ್ ಪುಣ್ಯಪುರಾಣದತ್ತೆಳಸರಯ್ಯೋ! ಭೂಪರೊಲಾದ್ವನ್ನುಮಂ|
ಸುರಿವರ್ ಪಾಲ್ಗುಡಿಯೆಂದರಂ ಜಡಿವರೈ ರತ್ನಾಕರಾಧೀಶ್ವರಾ ||೮೭

ಶೃಂಗಾರಂ ಕವಿನೀತಿಗೆಂದವನಿಪರ್ ದುಷ್ಕಾವ್ಯಕೇಕೊಲ್ವರಾ।
ಶೃಂಗಾರಂ ಕವಿನೀತಿಗಳ್ಕಡಮೆಯೇ ಸತ್ಕಾವ್ಯದೊಳ್? ಲೌಕಿಕಂ॥
ಪೊಂಗಿರ್ದ್ದರ್ಗ್ಗಳ ನೇಮಿ ರತ್ನ ಕುಮುದೇಂದು ಶ್ರೀಜಿನಾಚಾರ್ಯಕಾ।
ವ್ಯಂಗಳ್ಮಾಡವೆ ಮೋಹಮಂ ಮುಕುತಿಯಂ? ರತ್ನಾಕರಾಧೀಶ್ವರಾ॥೮೮

ಚೇತೋರಂಗದೊಳಿಟ್ಟು ನಿಮ್ಮಡಿಗಳಂ ಬಂದೋಲಗಂಗೊಟ್ಟೊಡಂ।
ಪ್ರಾತಃಕಾಲದ ರಾಗದೊಳ್ ಪದದೊಳಂ ವದ್ಯಂಗಳೊಳ್ ವೀಣೆಯೊಳ್॥
ಶ್ರೀತೀರ್ಥಂಕರ ನಿಮ್ಮ ಪಾಡಿಸುತೆ ಪಾಡುತ್ತುತ್ತಿಯಂ ಮಾಡುತಿ।
ರ್ಪಾತಂ ಭೂಪನೆ ಪಾಪಲೋಪಕನಲ್ತೆ ರತ್ನಾಕರಾಧೀಶ್ವರಾ ॥೮೯

ಭರತಂಗಂ ಸಭೆಗೆಯ್ದ ಚಿತ್ತಕಲುಷಂ ನಿಮ್ಮಾಲಯಕ್ಕೆಯ್ದ ಸ।
ತ್ಪರಿಣಾಮಂ ಪರಿದೆಯ್ದುತುಂ ಪರಿಯುತುಂ ಬೆಂಕೊಂಡಿರಲ್ಕಂಡು ತ॥
ದ್ಭರತಂ ನಿಮ್ಮನೆ ಪೊರ್ದಿ ಸಾರ್ದನಮೃತಶ್ರೀಸೌಖ್ಯಮಂ ನಿಮ್ಮನೀ।
ನರನಾಥರ್ಮಱದೇಕೆ ನೋವರಕಟಾ! ರತ್ನಾಕರಾಧೀಶ್ವರಾ ॥೯೦

ರಾಜಶ್ರೀಯೊಳನೇಕಕಾಮಿನಿಯರುಂಟಾಳಾಪನೃತ್ಯಂಗಳುಂ।
ಟಾಜಿಹ್ವಾರುಚಿಯುಂಟು ಕಾಮಿಸಿದವೆಲ್ಲಾನ್ನುಂಟುವುಂಟಾದೊಡಾ॥
ರಾಜೀವಂ ಕೆಸಱುಳ್ದಯುಳ್ದದವೊಲಿದೂರ್ಧ್ವಕ್ಕೆ ಕಣ್ಣಿಟ್ಟೊಡಾ।
ರಾಜಂ ರಾಜನೆ ತಾನೆ ರಾಜಋಷಿಯಲ್ತೆ ರತ್ನಾಕರಾಧೀಶ್ವರಾ॥೯೧

ಅಂದೇಂ ತಂದನೆ ಗರ್ಭದಿಂ ಪರರದೇಶಂ ಲಕ್ಷ್ಮಿ ಸೈನ್ಯಂಗಳಂ।
ಮುಂದೇನೊಯ್ವನೆ ತೆಱ್ತು ಪೆಣ್ಪಡೆದ ಮಕ್ಕಳ್ಪುತ್ತ ದೇಹಂಗಳಂ॥
ಬಂದತ್ತೊಂದು ವಿನೋದಗೋಷ್ಠಿಯದು ಮುನ್ನಂ ನಿಮ್ಮಕಂಡಿರ್ದಸ್ಸೈ
ಹಿಂದಂ ಮತ್ತದನೇಕೆ ತಾಂ ಮಱೆವನೋ? ರತ್ನಾಕರಾಧೀಶ್ವರಾ॥೯೨

ಭಂಡಾರಂ ಬರುವನ್ನಮಿರ್ಪನೆ? ವಧೂಸಂಭೋಗದೊಳ್ ಸಾಕೆನಲ್।
ಕಂಡೇಂ ಪ್ರೋಪನೆಯುಳ್ಳರಿಂ ಪಡೆದ ರಾಜ್ಯಶ್ರೀಯನೇನಂತ್ಯದೊಳ್॥
ಕೊಂಡೊಯ್ದಪ್ಪನೆ? ನಾಸ್ತಿ ನಾಸ್ತಿ ಗುರುದೈವಕ್ಕೊಲ್ದು ಕೊಟ್ಟ [ಸ್ಟುತಾ।
ನುಂಡುಟ್ಟೈಸು ತನತ್ತು ಮತ್ತೆ ಬಱುವೈ ರತ್ನಾಕರಾಧೀಶ್ವರಾ ॥೯೩

ಆವಾವಂಗನೆಯಲ್ಲಿ ಕೂಡಿದೊಡಮಾಪಾಡಲ್ಲದೇಂ ಕಂಡನೇ? ।
ಆವಾವೂಟಮನುಂಡೊಡಂ ಸವಿಗಳೊಳ್ಬೇಱೊಂದನೇನುಂಡನೇ? ॥
ಆವಾವಾಭರಣಂಗಳಂ ತುಡೆ ತೊವಲ್ಪೊನ್ನಾದುದೇ? ಕಂಡುಮೀ ।
ಜೀವಂ ಕಾಣದೊ? ಉಂಡುಮೇಂ ದಣಿಯದೋ? ರತ್ನಾಕರಾಧೀಶ್ವರಾ॥

ಭರತಂಬೊಲ್ ಸಗರಂಬೊಲಾದಶರಥಂಬೊಲ್ ಶ್ರೇಣಿಕಂಬೊಲ್ಮಹೇ ।
ಶ್ವರನೊದ್ದಾಯನ(?)ನಂತೆ ದಾನರುಚಿಯೊಳ್ ಶಾಸ್ತ್ರಾರ್ತಿಯೊ [ಳ್ಸತ್ಯದೊಳ್ ॥
ವಿರತಿಕ್ಷಾಂತಿಯೊಳರ್ಬ್ಬನಾವಿಭವದೊಳ್ ಸಂದೊಪ್ಪೆ ಭಾಗ್ಯಂ ಸುಖಾ ।
ಕರಮಂತಲ್ಲದೊಡೇನೊ ದುಷ್ಕರಮಲಾ ರತ್ನಾಕರಾಧೀಶ್ವರಾ ॥೯೫

ಉಳಿಯಿಂ ಗೆಯ್ಯದ ಚೈತ್ಯಮಂಬಿರದೊಳಿಟ್ಟೇಯೋಗಿಗಳ್ತಾರದಾ ।
ಜಳದಿಂ ತೇಯದ ಗಂಧದಿಂ ತೊಳೆಯದೇ ನಾಂದಕ್ಕಿಯಿಂದೆತ್ತದಾ ॥
ತಳಿರ್ಪೂವಿಂದಡದನ್ನದಿಂ ಸುಡದ ದೀಪೋದ್ಧೂಪದಿಂ ಕೊಯ್ಯದಾ ।
ಫಳದಿಂದರ್ಘ್ಯದೆ ನಿಮ್ಮನರ್ಚಿಪರಹೋ ರತ್ನಾಕರಾಧೀಶ್ವರಾ ॥೯೬

ಆವಂಮಾಡಿದ ಭಾವಪೂಜೆಯಿನವಂಗೂರ್ವಂಗೆ ಲೇಸಲ್ಲಿಗಾ ।
ಸಾವದ್ಯಂ ರಹಿತಂ ಸಮಂತು ಸುಜನರ್ ಸದ್ವಸ್ತುವಿಂ ಪೂಜಿಸಲ್॥
ಸಾವದ್ಯಂ ಕಳೆಯಲ್ಕೆ ತೀರದೊಡಮೇಂ? ತತ್ಪೂಜೆಯಂ ಕಂಡುಕೇ।
ಳ್ದಾವೇಳ್ದರ್ ಪಲರುಂ ಸುಖಂಬಡೆಯರೇ ರತ್ನಾಕರಾಧೀಶ್ವರಾ॥೭೯(?)

ಮುನಿಗಳ್ಮಾಡುವ ಭಾವಪೂಜೆ ರುಚಿಯೋ ಸದ್ದ್ರವ್ಯಸಂತಾನದ ।
ರ್ಚನೆಗೆಯ್ವುತ್ತಮವಸ್ತುಪೂಜೆ ರುಚಿಯೋ ಪೇಳಯ್ಯ ನೀನೇಕೆ ಸು॥
ಮ್ಮನೆಯಿರ್ಪೆಯಿದರಂದಮಂ ತಿಳಿದೆನ್ನೆ ನಿಷ್ಕಾಂಕ್ಷಕಂ ನಿನ್ನಮಂ ।
ಮನಮಂ ನಿಮ್ಮೊಳಡಕ್ಕಿ ಸಾಧಿಪರಲಾ ರತ್ನಾಕರಾಧೀಶ್ವರಾ ॥೯೮

ಪೂಜಾತಂತ್ರದೆ ವಸ್ತುವಂ ನೆನೆಯುತುಂ ಮತ್ತಂ ಸುಮಂತ್ರಾಕ್ಷರ ।
ಭ್ರಾಜದ್ಧ್ಯಾನಮನಾಲಿಸುತ್ತೆ ತವಬಿಂಬಸ್ನಾನಮಂ ನೋಡಿ ನಾ ॥
ನಾಜೀವಂ ಸುಖಿಯಕ್ಕುಮಲ್ಲಿ ಬಹಿರಂಗಾಳೋಚನಂ ಮೋಚನಂ ।
ಪೂಜಾರ್ಥಂ ಪುರುಷಾರ್ಥಮಾದುದದಱಿಂ ರತ್ನಾಕರಾಧೀಶ್ವರಾ ॥೯೯

ಉಪಹಾರಂ ಸ್ತವನಂ ಸುವಾದ್ಯನಿನದಂ ನೃತ್ಯಂ ಸುಗೀತಂಗಳಂ ।
ತುಪಚಾರಂಗಳಮೈಸೆ ನಿಮ್ಮ ರುಚಿಯೋ ಅಲ್ತುಲ್ತು ನಿಮ್ಮಲ್ಲಿಮು ॥
ಕ್ತಿಪದಂ ಸ್ವಲ್ಪಮೆ ವೃದ್ಧಿವೃದ್ಧಿ ಧನಿಕಂಗೊಂದಿತ್ತರೞ್ಕೊಳ್ವದ ।
ರ್ಕುಪಮಾನಂ ಮಿಗೆ ಶಾಣ್ಕೆಯೆಂದು ಕುಡರೇ ರತ್ನಾಕರಾಧೀಶ್ವರಾ ॥

ಮೋಕ್ಷಶ್ರೀಸುಖವಿಶ್ವನಾಥನಿವನೆಂದಾರೋಪಿಸಲ್ ಪೂಜೆಯೊಳ್ ।
ಯಕ್ಷರ್ ದಿಕ್ಪ್ರಭುಗಳ್ ಗ್ರಹರ್ ತಿಥಿವರರ್ ನಾಗರ್ ಸುರರ್ ವ್ಯಂತರರ್ ॥
ನಕ್ಷತ್ರರ್ ಮುನಿಗಳ್ ಸುಮಂತ್ರವಿಧಿಯಿಂ ಸನ್ಮಾನಿಸಲ್ಪಟ್ಟರೀ ।
ದಾಕ್ಷಿಣ್ಯಂ ಭಜಕಂಗದೇನ ಕುಡದೋ ರತ್ನಾಕರಾಧೀಶ್ವರಾ ॥೧೦೧

ಉಪಕಾರಕ್ಕುಡಲೀವಮಂಗುಣಲಿಡಲ್ಮತ್ತೇನನೊಲ್ದೀಯನೋ ।
ಉಪಮಾತೀತನೆ ನಿಮ್ಮ ಬಿಂಬವನಲಂಪಿಂದರ್ಚಿಸಲ್ ಸಂಪದಂ ॥
ವಿಪುಳಾನಂದದೆ ನಿಮ್ಮ ರೂಪಿನ ಮುನೀಂದ್ರರ್ಗನ್ನಮಂ ನೀಡುವಂ ।
ಗಪವರ್ಗಂ ನಿಜಮಾರ್ಗವಪ್ಪುದರಿದೇ ರತ್ನಾಕರಾಧೀಶ್ವರಾ ॥೧೦೨

ವಿಜ್ಞಾನಂ ಕ್ಷಮೆ ಶಕ್ತಿ ಭಕ್ತಿ ದಯೆ ನಿರ್ಲೋಭಂ ದೃಢಂಗೂಡಿ ಯಾ ।
ತ್ಮಜ್ಞಾನಾನ್ವಿತಯೋಗಿಗನ್ನಮನಲಂಪಿಂದಿತ್ತುವಂ ಕೂಡೆ ತಾಂ ॥
ಸುಜ್ಞಾನಂಬಡೆದಂ ಸುಖಂಬಡೆದನೊಳ್ಪಂ ಪೆತ್ತನೇವಾತೊ ಸ ।
ರ್ವಜ್ಞಾ ನಿಮ್ಮನೆ ಕಂಡನಿನ್ನುೞಿದುವೇಂ ರತ್ನಾಕರಾಧೀಶ್ವರಾ॥೧೦೩

ಒಡಲಂ ದಂಡಿಸುತಿಂದ್ರಿಯಂಗಳ ಪ್ರೌಢವರ್ಗಂ ಕುಂದಿಸುತ್ತುಂ ಗುಣಂ।
ಬಡೆಯುತ್ತುಂ ಮನದೇೞ್ಗೆಯಂ ತಡೆಯುತುಂ ತನ್ನಾತ್ಮನೊಳ್ತಾನೆ ಮಾ॥
ರ್ನುಡಿಯುತ್ತುಂ ಭಜಕರ್ಗೆ ಮುಕ್ತಿಪದಮಂ ತೋಱುತ್ತೆ ನೋಂಪಟ್ಟಿ
[ಯಂ
ಪಡೆಗೆಯ್ದಾಚರಿಪಾತನೇ ಶಿವನಲಾ ರತ್ನಾಕರಾಧೀಶ್ವರಾ ॥೧೦೪

ಕಡೆಗಿನ್ನೆಂತೊ ಭವಾಗ್ನಿತಾಪವಕಟಾ! ಕಾಮಾಗ್ನಿಯಂ ನೋೞ್ಪಡಾ।
ಸಿಡಿಲೇಂ ಶೇಷನ ದಾಡೆಯೇಂ ವಡಬನೇಂ ಕಾಲಾಗ್ನಿಯೇಂ ಶೃಂಗಿಯೇಂ।
ತಡೆದಾಂತಗ್ಗಳೆಯಂ ಗಡಂ ಮದನನೇಂ ಮಾಮಾರಿಯೇಂ ಕಾಲನೇಂ ।
ಮೃಡನೇಂ ಮೃತ್ಯುವದೇಂ ನಿಲಲ್ಕಿಱಗುಮೇ ರತ್ನಾಕರಾಧೀಶ್ವರಾ ॥

ಶ್ರುತಮಂ ನೋೞ್ಪ ತದರ್ಥಮಂ ತಿಳಿವ ತನ್ಮರ್ಯಾದೆಯೊಳ್ಪೋಪ ಸು।
ವ್ರತಮಂ ಪಾಲಿಪ ಕಾಮಮಂ ತುಳಿವ ಮಾಯಾಜಾಡ್ಯಮಂ ಝಾಡಿಪು॥
ನ್ನತಕಾರುಣ್ಯದೊಳಾಪ್ತ ಜೀವಹಿತಮಂ ಪೇೞ್ವಾತನೇ ಸದ್ಗುರು।
ಶ್ರುತಯೋಗೀಶ್ವರನಿಂದು ನಾಳಿನ ಶಿವಂ ರತ್ನಾಕರಾಧೀಶ್ವರಾ ॥೧೦೬

ಪರಸಂತೋಷಮೆ ಸೌಖ್ಯಮೆಂಬ ಪರದುಃಖಂ ತನ್ನ ನೋವೆಂಬ ತಾಂ।
ಪರನೆಂಬಂದಮನಿಂತುಟೆಂಬ ಪರಲೋಕಂ ತನ್ನ ನಾಡೆಂಬ ತ ॥
ತ್ಪರಮಜ್ಞಾನಿಜಗದ್ಗುರುಂ ಮಮಗುರುಂ ದೇವೇಂದ್ರಕೀರ್ತಿವ್ರತೀ।
ಶ್ವರನಾತಂ ಪೆಱನಲ್ತು ನೀನೆ ಪೆಱನೇಂ ರತ್ನಾಕರಾಧೀಶ್ವರಾ ॥೧೦೭

ವ್ಯವಹಾರಂ ವ್ಯವಸಾಯಮೋಲಗಮಿವಂ ಮಾಡೆಂಬರಂ ಮಾಡೆ ನೀ ।
ಚ್ಚುವರಂ ಮೆಚ್ಚರನೆಲ್ಲಿಯುಂ ಪಡೆಯಲುಂಟೂರೂರೊಳನ್ನಂತೆ ಮೋ॥
ಕ್ಷವನೊಂದಂ ನೆಗೞೆಂಬರಂ ನೆಗೞ್ ಹೋ ಲೇಸೆಂಬರಂ ನಚ್ಚುವಾ।
ಟ್ಟುವರಂ ನಿನ್ನವರಲ್ಲದೆಲ್ಲಿ ಪಡೆಯೆಂ ರತ್ನಾಕರಾಧೀಶ್ವರಾ ॥೧೦೮

ಕೆಳಗಣ ಪದ್ಯಂಗಳೆರಡುಂ ದೇವತಾವಂದನೆಯ ಕಾಲಸಿದ್ಧಿಗೆ.

ವಿಂಧ್ಯಾಕುಕ್ಕುಟನೊಂದು ಸಂಕ್ರಮಣಮಂ ಸಾರ್ದಲ್ಲಿ ಮಿಯ್ವಣ್ಣಮಂ।
ವಂದ್ಯಂಮಾಡದೆ ಮಾಡಿಕೊಳ್ವುದು ಗಡಾ ಯೋಗೀಶ್ವರರ್ ನಿಚ್ಚಮುಂ॥
ಸಂಧ್ಯಾಕಾಲಮನಾಸೆಪಟ್ಟದಱೊಳೀರ್ಯಾಶುದ್ಧಿಯುಂ ಸ್ತೋತ್ರಜ।
ಪ್ಯಂ ಧ್ಯಾನಂಗಳ ಮಾಡೆ ಸಿದ್ಧಿಯರಿದೇ ರತ್ನಾಕರಾಧೀಶ್ವರಾ॥೧೦೯

ಅಸ್ತಾದ್ರಿಸ್ಥಳದಲ್ಲಿ ಕಂಡು ರವಿಯುಂ ತಾರಾಳಿಯುಂ ಕಾಣ್ಬನಂ।
ನಿಸ್ತೇಜಕ್ಕಡೆಯಾದ ತಾರೆಗಳ ಕಂಡರ್ಕೋದಯಂಗಾಣ್ಬನಂ ॥
ವಿಸ್ತಾರಂಗಿಡೆ ಮೈನೆಳಲ್ ಮುಗುಳೆ ವಿಸ್ತಾರಕ್ಕೆ ತೋರ್ಪನ್ನೆಗಂ।
ಸುಸ್ತೋತ್ರಂಗೆಯೆ ನಿಮ್ಮ ಕಾಣ್ಬುದರಿದೇ ರತ್ನಾಕರಾಧೀಶ್ವರಾ ॥

ಕೆಳಗಣ ಪದ್ಯಂಗಳ್ ಮೂಱುಂ ಪಸಪ್ರತಿಮೆಗಳ ನಂಬುಗೆಗೆ.

ಸಿಂಹಂ ನಾಸ್ತಿ ಛಟಾಳಿ ಸಿಂಹರವಮುಂ ಮಾಡಲ್ಕಜಂ ಬೆರ್ಚುಗುಂ ।
ಸಿಂಹಾಕಾರಮನಂಕಿಸಲ್ ನರರ ಬೆನ್ನೊಳ್ ಹಸ್ತಿರೋಗಂ ಹರಂ ॥
ಸಿಂಹಾರೂಢನೆ ನಿಮ್ಮ ಮಂತ್ರದೆ ಭವಚ್ಛ್ರೀಬಿಂಬದಿಂ ಪೀಡೆಗಳ್ ।
ಸಂಹಾರಂಗಳನೆಯ್ದುವೇ ಸಕಲವೇಂ ರತ್ನಾಕರಾಧೀಶ್ವರಾ ॥೧೧೧

ಗರುಡೋಚ್ಚಾರಣಮಂತ್ರದಿಂ ವಿಷವಿನಾಶಂ ಯಕ್ಷಿಣೀಮಂತ್ರದಿಂ।
ದೊರೆಕೊಳ್ಗುಂ ಬಹುವಿದ್ಯೆಗಳ್ ಗರುಡಯಕ್ಷರ್ ಪ್ರೋಜ್ಯಸಾದಾಬ್ಜನಂ॥
ಗುರುವೇ ನಿಮ್ಮನಲಂಪಿನಿಂ ನೆನೆವವಂಗಾವಾವ ಕಷ್ಟಂಗಳ ।

ಲ್ಲಿರವಾವಾವ ಮನೋರಥಂ ಫಲಿಸವೋ ರತ್ನಾಕರಾಧೀಶ್ವರಾ ॥೧೧೨

ಗೆಡೆಗೊಂಡಾಡುವ ಲೋಕವಾರ್ತೆಗಳೊಳಿನ್ನುಂಗಾಯಿತಂ ತುಂಬಿದಾ ।
ಕೊಡದಂತಿರ್ಪುದು ನಿಮ್ಮ ಮಂತ್ರಜಪಮಂ ಮಾಡ್ಪಾಗಳುಂ ಮೀರ್ದ್ದು ಕ॥
ಣ್ಬಿಡುನೀರ್ ಮೆಯ್ಯುರಿವಾಗುಳಕ್ಕೆಗಳವೇ ದುಷ್ಕರ್ಮಬಂಧಂ ಸಡಿ ।
ಲ್ವಿಡದೇ ನೋರ್ದ್ದಪ್ರುದೆಂಬುದಂ ನುಡಿಯವೇ ರತ್ನಾಕರಾಧೀಶ್ವರಾ॥

ಕೆಳಗಣ ಪದ್ಯಂಗಳೆರಡುಂ ಪದಸ್ಥಧ್ಯಾನಕ್ಕೆ.

ಪಣಿಪಂ ಪಂಚಸರಂಗಳಂ ಪಿಡಿದು ಮುಕ್ತಾಜಾಲಮಂ ತಾಂ ಪರೀ ।
ಕ್ಷಣೆಗೆಯ್ವಂತಿರೆ ಪಂಚಮಂತ್ರದೊಳೊಡಂಬಟ್ಟಕ್ಷರವ್ರಾತಮಂ ॥
ಪಣೆಯೊಳ್ಕಾಣಿಸಿ ಚರ್ಮದೃಷ್ಟಿ ಮುಗಿಯಲ್ ಸುಜ್ಞಾನಸದ್ದೃಷ್ಟಿಯಿಂ।
ದೆಣಿಸುತ್ತಾಗಳೆ ಕಾಣ್ಬನೇ ರಿಸಿಯಲಾ ರತ್ನಾಕರಾಧೀಶ್ವರಾ ॥೧೧೪

ಮೂವತ್ತೈದು ಶುಭಾಕ್ಷರಂ ತುದಿಗೆ ಬಂದೋಂಕಾರವೊಂದಾದಿಗಂ ।
ತೀವಲ್ಕೊರ್ಕ್ಕೆವೆ ಮೂಲಮಂತ್ರವದು ತಾನೇಱುಗವಾಯಾದ್ದೊಡೆ ॥
ಲ್ಲಾವೊಂದೇ ಅಸಿಆವುಸಾಯನಲಿವೇ ಪಂಚಾಕ್ಷರಂ ಭಾವಿಸಲ್ ।
ಕೈವಲ್ಯಾಂಗನೆ ಕೂಡೆ ಕೈವಿಡಿಯಳೇ ರತ್ನಾಕರಾಧೀಶ್ವರಾ ॥೧೧೫

ನಳನೀನಾಳಕೆ ಮೂಲದಿಂ ತುದಿವರಂ ಸಂಪೂರ್ಣದಿಂ ಸ್ವಚ್ಛದಿಂ ।
ದೊಳಗಂತಿರ್ಪುದು ತಂತುವಂತೆ ನರರ್ಗಂ ಕೆಂಬಣ್ಣಿಯಿಂ ನೆತ್ತಿ ಮು॥
ಟ್ಟಳೆತಂ ತಪ್ಪದೆ ಮೂರ್ತಿ ತುಂಬಿ ಪಳುಕಿಂಗೆಯ್ಸಿರ್ದ್ದ ನಿವೊಂದುನಿ।
ರ್ಮಳಬಿಂಬೋಪಮನಾತ್ಮನಿರ್ದ್ದಪನಲಾ ರತ್ನಾಕರಾಧೀಶ್ವರಾ ॥೧೧೬

ನರರಾತ್ಮಂ ಸ್ಫಟಿಕೋಪಮಂ ಗಡಮದೇನಾಕಾರಮಂ ಸ್ವಚ್ಛಮಾ ।
ಗಿರದೆಂಬರ್ ಮಿಗೆ ಕೇಳಮಾಸ್ಫಟಿಕಮೆಂತೈವಣ್ಣಮುಂ ಸೋಂಕೆಯಾ॥

ಪರಿಯೊಳ್ತೋಱುಗುಮಂತೆಮೆಯ್ಯತೊವಲುಂಕರ್ಪಾಗೆಕೆಂಪಾಗೆತಾಂ
ಕರಿಯಂ ಕೆಂಪನೆನಿಪ್ಪನೆಂದಱಿಪಿದೈ ರತ್ನಾಕರಾಧೀಶ್ವರಾ ‖೧೧೭

ಸ್ವೆಚ್ಛಾಕಾರದ ಜೀವನೀತನುವಿನೊಳ್ತಾನೇಕೆ ಸಿಲ್ಕಿರ್ದಪಂ ।
ಸ್ವೇಚ್ಛಾಮಾರ್ಗದೆ ತಾನುಪಾರ್ಜಿಸಿದ ಕರ್ಮಾಧೀನದಿಂ ಕರ್ಮಮುಂ ‖
ತುಚ್ಛಂ ಕ್ರೋಧದೆ ಮಾಯೆಮಾನಗಳನಾಲೋಭಾರ್ತ್ಥದಿಂ ಬಂದುದೇ ।
ಮ್ಲೇಚ್ಛಾಕಾರಕಷಾಯಮುಂ ಸುಡೆ ಸುಖಂ ರತ್ನಾಕರಾಧೀಶ್ವರಾ ‖

ನೆಲದಿಂ ಮೇಲೊಗೆದೈದು ಸಾಸಿರ ಧನುಃಪ್ರಮಾಣ್ಯದೊಳ್ಕಾಂಚನೋ।
ಜ್ವಲರತ್ನಂಗಳೊಳಾದ ಮಂಟಪದ ಮಧ್ಯಸ್ಥಾನದೊಳ್ಸಿಂಹದಾ ‖
ತಲೆಯೊಳ್ತೋರ್ಪರುಣಾಬ್ಜಕರ್ಣಿಕೆಗೆ ಚಾತುಷ್ಕಾಂಗುಲೋದ್ದೇಶದೊ
ಳ್ಗಲಮಾಂತಿರ್ಪ ರವೀಂದುಕೋಟಿಕಿರಣಾ ರತ್ನಾಕರಾಧೀಶ್ವರಾ‖೧೧೯

ಕೆಳಗಣ ಪದ್ಯಂ ರೂಪಸ್ಥಧ್ಯಾನಕ್ಕೆ

ಜೊನ್ನಂಬೊಲ್ ನಯನಕ್ಕೆ ತೋಱು ಕರದಿಂದಂ ಮುಟ್ಟಲಿಲ್ಲಾದ ಸಂ।
ಪನ್ನಾಕಾರದೊಳಿರ್ದಪಂ ವಿಮಲಸಿದ್ಧಕ್ಷೇತ್ರದೊಳ್ಸಿದ್ಧನ ‖
ಚಿನ್ನಜ್ಞಾನಸಮೇತನಷ್ಟಗುಣಗಾಂಭೀರ್ಯಾತ್ಮನೆಂದಿಚ್ಛೆಯಿಂ ।
ನಿನ್ನಂ ಧ್ಯಾನಿಸುವಂಗೆ ಮುಕ್ತಿಯರಿದೇ ರತ್ನಾಕರಾಧೀಶ್ವರಾ ‖೧೨೦

ಕೆಳಗಣ ಪದ್ಯಂ ರೂಪಾತೀತಧ್ಯಾನಕ್ಕೆ

ಕ್ಷಮೆ ಮಾಳ್ಪಂತೆ ವಿರೋಧಮೇಂ ಕುಡುವುದೇ ಸಂತೋಷಮಂ ತತ್ವಶಾ
ಸ್ತ್ರಮೆ ಮಾಳ್ಪಂತೆ ಕುಶಾಸ್ತ್ರಮೇಂ ಕುಡುವುದೇ ಸುಜ್ಞಾನಮಂ
[ಮೋಕ್ಷರಾ ‖
ಜ್ಯಮೆ ಮಾಳ್ಪಂತೆ ಚತುಸ್ಸ್ಥಳಂ ಕುಡುವುದೇ ಸಿದ್ಧತ್ವಮಂ ನಿಮ್ಮ ಧ।
ರ್ಮಮೆ ಕಾವಂತೆನಗನ್ಯರೇಂ ಪೊರೆವರೇ ರತ್ನಾಕರಾಧೀಶ್ವರಾ ‖೧೨೧

ನಿನ್ನಂ ಚಿಂತಿಸುತಿರ್ಪವಂಗೆ ಪರದೇಶಂ ತನ್ನದೇಶಂ ಪರರ್।
ತನ್ನಿಷ್ಟರ್ ಪಗೆಗಳ್ ಭಟರ್ ದೊರೆಗಳಾತ್ಮಸ್ನೇಹಿತರ್ ಕಿಚ್ಚುಬಾ ‖

ವನ್ನಂ ವ್ಯಾಧಿ ಸುಖಂ ವಿಷಂ ಸುಧೆಯೆನಿಕ್ಕುಂ ನೋಡೆ ನೀನಿರ್ದ್ದವಾ।
ನಿನ್ನೊಂದಕ್ಕೆಳಸಿರ್ದ್ದನೇಕೆಯಕಟಾ! ರತ್ನಾಕರಾಧೀಶ್ವರಾ ॥೧೦೨

ನೀನಾನೆಂಬಱಿವಾಗೆ ಸಾಕು ಸಿರಿಯೇಂ ದಾರಿದ್ರ್ಯಮೇಂ ಗ್ರಾಮಮೇಂ।
ತಾನೇಂ ಪಾಲುಣಿಸೇಂ ಕದನ್ನದುಣಿಸೇಂ ನಿರ್ಬ್ಬಂಧಮೇಂ ರಾಜ್ಯಮೇಂ॥
ಈನಾನಾವಿಧಿಯೆಲ್ಲಮುಂ ಕನಸಿನಂ ಕೊಂಡೇನೊ ನಿನ್ನನ್ನ ಸಂ।
ಧಾನಂ ನಿತ್ಯಸುಖೈಕವಿನ್ನುಱದುವೇಂ ರತ್ನಾಕರಾಧೀಶ್ವರಾ ॥೧೦೩

ಇದು ಯೋಗಪದ್ಧತಿ

ನಡೆದೆಂ ಚಿತ್ತಕೆ ಬಂದವೊಲ್ ನುಡಿದೆನಾಂ ಬಾಯ್ಗೆ ಬಂದಂತೆ ಸೈ।
ಗೆಡೆದೆಂ ದುಃಖಸಮುದ್ರದೊಳ್ ಪಡೆದೆನಂಧಂ ಕಣ್ಗಳಂ ಪೆತ್ತವೊಲ್॥
ಬಿಡೆ ನಿಮ್ಮಂಘ್ರಿಗಳಂ ಬಿಡೆಂ ಬಿಡೆನುದಾರಂ ನೀನಹೋ! ಬಲ್ಗಿನೆ।
ನ್ನೊಡೆಯಾ ರಕ್ಷಿಸು ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ॥೧೦೪

ತ್ರಾಹಿ ತ್ರೈಭುವನೇಂದ್ರಮಸ್ತಕಮಣಿವ್ರಾತಾರ್ಚ್ಚಿತಾಂಘ್ರಿದ್ವಯಾ।
ತ್ರಾಹಿ ಶ್ರೀರಮಣೀನಟನ್ನಟನರಂಗಶ್ರೀಪದಾಬ್ಜೋಭಯಾ॥
ತ್ರಾಹಿ ತ್ರಾಹಿ ಮಹೇಶ ಮಾಂ ಪುನರಪಿ ತ್ರಾಹಿ ತ್ರಿರತ್ನತ್ರಯಂ।
ದೇಹಿ ತ್ವಂ ಮಮ ದೀಯತಾಂ ಜಯಜಯಾ ರತ್ನಾಕರಾಧೀಶ್ವರಾ॥

ವೈರಾಗ್ಯನೀತಿಯಾತ್ಮವಿ।
ಚಾರಂ ತಾಂ ಬಗೆದು ನೋಡೆ ರಾಜಿಸುಗುಂ ಶೃಂ॥
ಗಾರಕವಿಹಂಸರಾಜಂ।
ಪೂರಿಸಿದಸಮಾದಶತಕ ರತ್ನಾಕರದೊಳ್ ॥೧೦೬

ಇಂತು ಶ್ರೀರತ್ನಾಕರಶತಕಂ ಸಮಾಪ್ತಂ.

II.

## ರತ್ನಾಕರಕವಿವಿರಚಿತಂ

### — ಅ ಪ ರಾ ಜಿ ತೇ ಶ್ವ ರ ಶ ತ ಕ ಂ —

ಶ್ರೀ ಕುಲಮಾಪ್ತಗೋತ್ರಮಮಲಾಂಗಮತೆಂದ್ರತೆ ಸಮ್ಯಗಾಯು ವಿ ।
ದ್ಯಾಕುಶಲತ್ವಮಾದೊಡಮಿದೆನ್ನದಿದನ್ಯಮೆನುತ್ತೆ ಕಂಡು ನಿ ॥
ರ್ವ್ಯಾಕುಲನಾಗಿಯೆಲ್ಲಱನಗಲ್ದು ಮಣಿತ್ರಯಸಂಪದಕ್ಕೆ ರ ।
ತ್ನಾಕರನಾದಮಂ ತವಕ್ಕೃಪಾತ್ರನಲಾ ಅಪರಾಜಿತೇಶ್ವರಾ ॥೧

ನಂಬುವುದೇಳು ತತ್ವಮನದುತ್ತಮದೃಷ್ಟಿ ತದರ್ಥಮಂ ನಯಾ ।
ರ್ಥಂ ಬರೆ ನೋಡಿ ಭೇದಿಪುದದುತ್ತಮಬೋಧಮಹಿಂಸೆಯಲ್ಲಿ ಮಾ ॥
ರ್ಗಂಬಿಡದಿರ್ಪುದುತ್ತಮಚರಿತ್ರಮಿವಿಂತು ಮಣಿತ್ರಯಂ ತದೀ ।
ಯಾಂಬುಧಿಯಾವುದುತ್ತಮತಪಂಗಳಲಾ ಅಪರಾಜಿತೇಶ್ವರಾ ॥೨

ಮೂಜಗವೆಂಬ ಗೇಹದೊಳ್ ತುಂಬಿದ ವಸ್ತುಗಳಾಱು ಕಾಯಮೈ ।
ದೋಜೆಯ ತತ್ವವೇಳು ನವಭೇದಪದಾರ್ಥಮಿವಂ ತಪಸ್ವಿ ಸಂ ॥
ಯೋಜಿಸಿ ಕೂಡೆ ಕೂಡೆ ಪರಿಭಾವಿಸಿ ತನ್ನನೆ ಕಾಣ್ಬುದರ್ಕೆ ಚೇ ।
ತೋಜಯನಾಗಬೇಕು ಮೊದಲೆಂದೆಯಲಾ ಅಪರಾಜಿತೇಶ್ವರಾ ॥೩

ಬಱಿಕಣುಪೆಕ್ಕೆ ಪನ್ನೆರಡಱಲ್ಲಿ ಚತುಷ್ಕದ ಧರ್ಮಜಾಗದೊಳ್ ।
ಸುಱಿಸುಱಿದಾಡಿ ಕೂಡೆ ಗುರುಪಂಚಕದೊಳ್ಪೊಳೆದಾಡಿ ಚಿತ್ತದ ॥

ಗ್ಗಱಮನಡಂಗಿಸುತ್ತೊಡನೆ ತನ್ನಯ ದೇಹದೊಳಾತ್ಮನಲ್ಲಿ ನಿಂ |
ದಱಲಱಿದಿರ್ದವಂ ತವಕ್ಕೃಪಾತ್ಮನಲಾ ಅಪರಾಜಿತೇಶ್ವರಾ ‖೪

ಅಪದದೊಳ್ ಕ್ಷಣಕ್ಷಣಕೆ ಕರ್ಮಸಮೂಹಕೆ ಹಾನಿ ಸದ್ಗುಣೋ |
ದ್ದೀಪಿಕೆಯಪ್ಪುದೋದಿನ ಪರಿಶ್ರಮಮುಂ ತಪದುಬ್ಬೆಯುಂ ಸುಧಾ‖
ರೂಪಮನೆಯ್ದುತಿರ್ಕುಮದಱಿಂದದನೇ ಸಕಲಪ್ರಯತ್ನದಿಂ |
ಸ್ಥಾಪಿಸಿ ಮುಕ್ತಿಯಂ ಪಡೆವುದೆಂದೆಯಲಾ ಅಪರಾಜಿತೇಶ್ವರಾ ‖೫

ಅದು ಲಘುಕರ್ಮಿಗಾತ್ಮತನುಭೇದವಿಚಾರದೊಳೞ್ತಿಯುಳ್ಳವಂ |
ಗುದಯಿಪುದಲ್ಲದೇ ಸಕಲಶಾಸ್ತ್ರಮನೋದಿದೊಡಂ ತಪಂಗಳೊ ‖
ಳ್ಪಿದೊಡಮಾಗದಂತದಱಿನಾರುಚಿಯುಳ್ಳವನೇ ಭವತ್ಪ್ರಸಾ |
ದದ ಸುಖಿಯೆಂದು [1]ಮೆಚ್ಚಿ ಪರಿಕೀರ್ತಿಪೆನಾನಪರಾಜಿತೇಶ್ವರಾ ‖೬

ಭೇದವಿಚಾರಮೆಂತೊ ತನುಮೂಱವರಲ್ಲಿಯೆ ಕರ್ಮ[2]ಮೆಂಟವೇ |
ವೇದನೆಗಿಂಬುಗಳ್ಕಡೆಗಚೇತನರೂಪಿಗಳಾತ್ಮನಿಲ್ಲಿ ವಿ ‖
ಶ್ರೋದಯನಾಗಿ ಬಾಳ್ದಪನವಂ ಸುಖಿ ಚಿನ್ಮಯನೆಂದು ಬುದ್ಧಿಯಿಂ |
ಭೇದಿಸಿ ಬೇಱೆಗೆಯ್ದೊಳಗೆ ನೋೞ್ಪುದಲಾ ಅಪರಾಜಿತೇಶ್ವರಾ ‖೭

ಪೇೞಗಿದು ಧಾತುರೂಪದೊಡ[3]ಲಿಂನೆರಡುಂಟೊಳಗೊಂದು ತೇಜದಿಂ |
ತುೞುಗಿದ ತೈಜಸಾಂಗಮೊಡನಷ್ಟಮಲಾಶ್ರಿತಕಾರ್ಮಣಾಂಗಮೊಂ ‖
ದುೞ ಪಿಸೞಿಂದೆ ಬೇರ್ಪಡಿಸಬರ್ಪುದು ರೂಪದೆ ಮಿಶ್ರಿತಂಗಳೀ |
ಸೆೞವನೆ ಮೂಱುಮೊ[4]ಳ್ಪುದಿದನಾತ್ಮನಹೋ ಅಪರಾಜಿತೇಶ್ವರಾ ‖೮

1. ಪೆರ್ಚಿ. ಖ‖ 2. ಮೆಂಟರಲೊಡನೆಗಿಂಬುಗಳ್. ಖ‖
3. ನಿಂದೆರಡುಂ. ಖ‖ 4. ಳ್ಪುಟ್ಟಿದ ಜೀವನಹೋ. ಕ‖

ಆಗುತೆ ಪೋಗುತಿರ್ಪುದಿದು ಬಾಹ್ಯಶರೀರಮನೇಕರೂಪದಿಂ ।
ಯೋಗಿವಿಯೋಗಿಗಪ್ಪ ಪದಿನಾಲ್ಕುಗುಣಸ್ಥಲಕಾಲಕಲ್ಲದೇ ॥
ಪೋಗದು ತೈಜಸಂ ಪುದಿದ ಕಾರ್ಮಣಮುಂ ಸಲೆ ಭೇದಭಾವನೋ ।
ದ್ಯೋಗಮನಿಂದು ತೊಟ್ಟೆಸೆಗವೇೞ್ಕುಮದರ್ಕಪರಾಜಿತೇಶ್ವರಾ ॥೯

ಕಳೆದು ಸಮಸ್ತಬಾಹ್ಯರತಿಯಂ ಮನದುತ್ಸವದಿಂದೆ ಗೂಢನು ।
ಸ್ಥಳದೊಳಗಿರ್ದು ತನ್ನೊಳಗೆ ತನ್ನಯ ರೂಪನೆ ನಿಮ್ಮರೂಪಿನಾ ॥
ಪಳುಕಿನ ಬೊಂಬೆಯಂದಮೆನುತುಂ ನೆನೆದೀಕ್ಷಿಸುವಂಗೆ ಚಿತ್ತದೊಳ್ ।
ಪೊಳೆಯದೆ ಮಾಣ್ಬುದೇ ಪರಮಸಿದ್ಧನ ರೂಪಪರಾಜಿತೇಶ್ವರಾ ॥೧೦

ತನು ಜಿನಗೇಹಮೆಂಬುದೊಳಗಿರ್ದ ನಿಜಾತ್ಮನೆ ದೇವನೆಂಬುದಾ ।
ತನುಪರಿಮಾಣನೆಂಬುದಶರೀರಕನೆಂಬುದು ಬೋಧದರ್ಶನಂ ॥
ತನುವೆನಿಸಿರ್ದನೆಂಬುದಕಲಂಕನಬಾಧನಖಂಡನೆಂಬ ಭಾ ।
ವನೆಯನೆ ಭಾವಿಸುತ್ತಿರೆ ಭವಚ್ಯುತಿ ತಾನಪರಾಜಿತೇಶ್ವರಾ ॥೧೧

ಮೊದಮೊದಲಾಸರಪ್ಪುದೊಡನೊಪ್ಪಿರೆ ಸಂತಸಮಪ್ಪುದಂತು ಮಾ।
ಣದೆ ಪರಿಭಾವಿಸುತ್ತಿರೆ ಮಹಾಸುಖಮಪ್ಪುದು ಬಾಹ್ಯದಾಟದೊಳ್ ॥
ಬೆದಱಿಕೆಯಪ್ಪುದಾತ್ಮನೊಳೆ ಮೆಚ್ಚುಗೆಯಪ್ಪುದು ಲೋಕಮೆಲ್ಲಮಾ।
ಯದ ಮರುಳಾಗಿ ತೋರ್ಪುದು ನಿಜಾತ್ಮರತಂಗಪರಾಜಿತೇಶ್ವರಾ ॥೧೨

ನುಡಿ ಕಿಱಿದಪ್ಪುದೂಟದೊಳರೋಚಕಮಪ್ಪುದು ಬಾಹ್ಯಗೋಷ್ಠಿ
[ಯೊಳ್।
ಸಿಡಿಮಿಡಿಯಪ್ಪುದಂತೆ ಬಹಿರಂಗದ ನೋಟಕೆ ಕಣ್ಗಳೊಲ್ಲವಾ ॥
ಕಡುಪಿನ ಕಾಲ್ಗಳಾಟವಡಕಕ್ಕೊಳಗಪ್ಪುದು ಬುದ್ಧಿ ಮುಕ್ತಿಯಂ ।
ತುಡುಕುತುಮಿರ್ಪುದಲ್ತೆ ಪರಮಾತ್ಮರತಂಗಪರಾಜಿತೇಶ್ವರಾ ॥೧೩

ಪೊಱಗೆ ತಪಂಗಳಾಱಱ ಸಹಾಯತೆ ಬೇಕು ಶರೀರಮೋಹಮಂ।
ತೊಱೆಯಲೆಬೇಕು ಭಾವನೆಯ ಶಾಸ್ತ್ರವಿಲೋಕಿತೆ ಬೇಕು ನಿಚ್ಚಮುಂ॥
ನೆಱೆವ ವಿರಕ್ತಿ ಬೇಕು ರಿಪುಬಂಧುಗಳೊಳ್ಸರಿಗಾಣಬೇಕು ಕಂ ।
ಡಱದು ನಿಜಾತ್ಮನಂ ಚಲಿಸದೀಕ್ಷಿಸುವಂಗಪರಾಜಿತೇಶ್ವರಾ ॥೧೪

ಮೆಯ್ಯೊಳಗೆನ್ನೆಗಂ ಮಮತೆಯುಂಟವನನ್ನೆಗಮುಗ್ರಕಾಲನಾ ।
ಕೆಯ್ಯೊಳಗಿರ್ದ ಪಕ್ಕಿ ವಿಷಯಂಗಳ ಮೆಚ್ಚಿದವಂ ವಿಷಾಗ್ನಿಯೊಳ್ ॥
ಚುಯ್ಯನೆ ಬೆಂದವಂ ಬಹುಕಷಾಯಮನೊತ್ತಿ ಕಟಲ್ಚದಾತನ ।
ಯ್ಯಯ್ಯೊ ! ಮುಳುಂಗಿದಂ ನರಕದೊಳ್ಪಲವೇನಪರಾಜಿತೇಶ್ವರಾ ॥೧೫

ತನು ಪಗೆಯೆಂಬವಂ ವ್ರತಯುತಂ ವಿಷಯಂ ವಿಷಮೆಂದು ಬಿಟ್ಟವಂ।
ವಿನುತತಪಸ್ವಿ ಕೋಪವಿಡಿದಿರ್ದ ಕಷಾಯಕೆ ದೂರನಾದ ಶಾಂ ॥
ತನೆ ಸಕಲಾತ್ಮರಕ್ಷನಿನಿತುಂ ಗುಣಸಂತತಿಗೂಡಿ ತತ್ವಭಾ ।
ವನೆಯೊಳೆ ಬಾೞ್ವನೇ ಶಿವನವಂಗೆಣೆಯಾರಪರಾಜಿತೇಶ್ವರಾ ॥೧೬

ಉಂಬನಿತರ್ಕೆ ಕೊಟ್ಟು ಪಗೆಯೊಳ್ಪಲವುಂ ತೆಱದಿಂದೆ ಸೇವೆಯುಂ ।
ಕೊಂಬ ವಿವೇಕಿಯಂತೆ ವಿರಸಾನ್ನಮನೇ ತನುವಿಂಗೆ ಜೋಕೆಯಿಂ ॥
ತುಂಬಿ ಜಪಂ ತಪಂ ಪರಮಶಾಸ್ತ್ರರಹಸ್ಯದೊಳಾತ್ಮಕಾರಮಂ ।
ಬೆಂಬಿಡದಾವಗಂ ನೆ*ಗೞ್ವವಂಗೆಣೆಯಾರಪರಾಜಿತೇಶ್ವರಾ ॥೧೭

ಉಂಬುದು ನೀರಸಂ ಪೊಱೆವುದೊಂದೊಡಲಿರ್ಪುದು ಗೂಢವಾಸವಾ ।
ಡುಂಬೊಲನೇಳುತತ್ವಮೊಳುಮಾತು ಸರಸ್ವತಿಯೊಳ್ನಿರಂತರಂ ॥
ಹಂಬಲು ಪ್ರಣಾಶದೊಳಗೀಕ್ಷಣಮಾತ್ಮನೊಳಾಗಿ ಬಾೞ್ವ ಧೀ ।
ರಂ ಬಹುಕರ್ಮಮಂ ಕ್ಷಣಕೆ ಖಂಡಿಸನೇ ಅಪರಾಜಿತೇಶ್ವರಾ ॥೧೮

ತನ್ನೊಳೆ ತನ್ನ ನೋಡ್ಪ ಋಷಿಗನ್ಯರ ನೋಟಮದೇಕೆ ಚಿದ್ಗುಣೋ|
ತ್ಪನ್ನಸುಧಾನ್ನಮುಣ್ಬ ಮುನಿಗೊಳ್ಳಣಿಸೆಂಬ ವಿವಕ್ಷೆಯೇಕೆ ಸಿ ॥
ದ್ಧನ್ನಮ ಎಂಬ ವಾಕ್ಯಮಿರೆ ಬೇರ್ನುಡಿಯೇಕೆ ನಿಜಾತ್ಮರೂಪದೊಳ್ |
ನಿನ್ನೊಡನಾಡುವಂಗುಱದ ಗೋಷ್ಠಿಗಳೇಕಪರಾಜಿತೇಶ್ವರಾ ॥೧೯

ಬಿಡದೆ ಕಷಾಯಮಂ ಸುಡದೆಯಿಂದ್ರಿಯತೃಷ್ಣೆಗಳಂ ಪರೀಷಹ |
ಕ್ಕೊಡನಿದಿರಾಗಿ ಗೆಲ್ಲದೆ ಸುಗುಪ್ತಿಗಳಂ ಪುಗದಾತ್ಮನಂ ಮಲಂ ॥
ಬಿಡಿದೊಡಲಿಂದೆ ಬೇರ್ಪಡಿಸಿ ನೋಡದೆ ಸುಮ್ಮನೆ ಕರ್ಮಶತ್ರುವೇ |
ಬಿಡು ಬಿಡು ಪೋಗೆನಲ್ನುಡಿಗೆ ಪೋದಪುದೇ ಅಪರಾಜಿತೇಶ್ವರಾ ॥೨೦

ಪುರುಪರಮೇಶರಾದಿಯೆನೆ ತೀರ್ಥಕರರ್ಕ್ಮೊದಲಾಗಿ ಕಾನನಾಂ |
ತರದೊಳಗದ್ರಿಯೊಳ್ ಚಳಿಯೊಳಾತಪದೊಳ್ಮಳೆಯೊಳ್ ಕ್ಷುಧಾತೃಷಾ ॥
ಭರಮನಡರ್ತು ಗೆಲ್ಲದೆ ಜಿನೇಶ್ವರರಾದರೆ? ಕೋಡಿ ಬಾಡಿ[1] ಜೋ |
ಕರಿಪೆನಗೆತ್ತ ನಿರ್ಜರೆಯ ಮಾತು ಜಡಂಗಪರಾಜಿತೇಶ್ವರಾ ॥೨೧

ಓದಿದ ತತ್ವಮಿಲ್ಲ ಪರಿದಿಟ್ಟ ಪರಿಗ್ರಹಮಿಲ್ಲ ತಗ್ಗಿ ತಂ|
ಪಾದ ಕಷಾಯಮಿಲ್ಲ ನೆರೆ ಗೆಲ್ದ ಪರೀಷಹಮಿಲ್ಲ ಸದ್ಗುಣಾ ॥
ಮೋದತೆಯಿಲ್ಲ ಮಾಡಿದುದು ಧರ್ಮನಿಕಾಸತೆಯಿಲ್ಲ ನಿಮ್ಮೊಳ |
ತ್ಯಾದರಭಕ್ತಿಯಿಲ್ಲ ಸುಖಿಯಾಗುವೆನೆಂತಪರಾಜಿತೇಶ್ವರಾ ॥೨೨

ಬೋಧಿಪೆನೆಂಬೆನೆಲ್ಲರುಮನಾಗಮಪದ್ಧತಿ ಬಾರದಾಯ್ತು ಬ |
ಲ್ಬಾಧೆಯನಾಂತು ಸೈರಿಸುತುಮಾತ್ಮನೊಳಿರ್ದ ಮಲೀಮಸಂಗಳಂ ॥
ಶೋಧಿಪೆನೆಂಬೆನಳ್ಳರ್ದೆ*ತನಂ ಬಿಡದಾಯ್ತು ನಿಜಾತ್ಮದೃಷ್ಟಿಯಂ |
ಸಾಧಿಪೆನೆಂಬೆನೆಂದೊಡೆ ಮನಂ ಚಲಮಾಯ್ತಪರಾಜಿತೇಶ್ವರಾ ॥೨೩

1 ಬೋಕರಿ, ಕ॥

ಭೂರಿಮತಂಗಳಂ ತಿಳಿವುದುಂ ಪಲರುಂ ಮತಿದೋಱೆ ಧರ್ಮದೊಳ್ |
ಸೇರಿವುದುಂ ಮಹೋಗ್ರತಪದೊಳ್ಪೊಱುವಪ್ಪುದುಮಾತ್ಮನಂ ಮನೋ
ಗಾರದೊಳೀಕ್ಷಿಸುತ್ತೆ ಭವಬಂಧಮನಿಕ್ಕುವ ಬುದ್ಧಿ ಸುಮ್ಮನೇ |
ಬಾರದದರ್ಕೆ ನಿಮ್ಮ ಕರುಣೋನ್ನತಿ ಬೇಕಪರಾಜಿತೇಶ್ವರಾ ||೧೪

ಕುಡುವ ಸಮರ್ಥರಾರಖಿಳಲೋಕಕೆ ನೀಂ ಪೊಱಗಾಗಿ ಮಾನವಂ |
ಪಡೆವ ಪದಂಗಳಾವುವು ತಪಂ ಶ್ರುತಮುಂ ಪೊಱಗಾಗಿ ಬಲ್ಲವಂ ||
ಪಿಡಿವ ಸುವಸ್ತುವಾವುದು ಮಣಿತ್ರಿತಯಂ ಪೊಱಗಾಗಿ ಸೋಲ್ತು ಕ |
ಣ್ಣಿಡುವೆಡೆಯಾವುದಾತ್ಮವಿಭವಂ ಪೊಱಗಾಗಪರಾಜಿತೇಶ್ವರಾ ||೧೫

ಪುಟವಿಡುವಲ್ಲಿ ಕಿಚ್ಚಿನುರಿಗಂಜಿದೊಡಾಕನಕಕ್ಕೆ ಕೂಡಿದಾ |
ಕುಟಿಲತೆ ಪೋಕುಮೇ ಮಲಕಳಂಕಮ[1]ನೂದಿ ಕಳಲ್ಚಿ ಕಾಂತಿಸಂ||
ಪುಟದೊಳಗಾತ್ಮನಂ ನಿಲಿಸಿ ನಿರ್ಮಲನಾಗುವೆನೆಂಬ ಭವ್ಯನು |
ತ್ಕಟತಪದುಬ್ಬೆಗಳ್ಕದೊಡೆ ಸಿದ್ಧಿಪುದೇ ? ಅಪರಾಜಿತೇಶ್ವರಾ ||೧೬

ರಾಗಕೆ ರೋಷನಾಗಿ ಲಲನಾದಿವಿಯೋಗದೊಳುಗ್ರಯುದ್ಧದೊಳ್ |
ನೀಗಿದೆನಂಗಕೋಟಿಗಳನಂತದಱಂ ಭವರೋಗಿಯಾದೆನಾ ||
ರೋಗದ ಮೂಲಮಂ ಸುಡುವ ಘೋರತಪಂದಳೆದೊಂದು ಕಾಯಮಂ |
ತ್ಯಾಗಿಸಲಂಜುತಿರ್ದಪೆನಲಾ ಧೃತಿದೋಱಪರಾಜಿತೇಶ್ವರಾ ||೧೭

ಪೋಗದೆ ಪೋಪ ಪೋದ[2]ಭವಕೋಟಿಗಳೊಳ್ಬಱಸೂದು ಕೊಂದು ತಾಂ|
ಕೂಗುವ ಮೋಹರಾಕ್ಷಸನನುಗ್ರತಪೋಭರ[3]ಧೀರನಾಗಿ ನಾಂ ||
ತಾಗುವೆನೆಂದು ತಳ್ತಿಱಿದು ಗೆಲ್ವೆನದೆಂದು ಜಗಕ್ಕೆ ಮಿತ್ರನಾ |

---

1 ನೂಡಿ. ಕ|| 2 ಭವದೊಳ್ಭವದೊಳ್. ಖ|| 3 ದೀನನಾಗಿ. ಕ||

ನಾಗುವೆನೆಂದು ನಿನ್ನೆಡೆಯನೆಯ್ದುವೆನೆಂದಪರಾಜಿತೇಶ್ವರಾ ॥೨೮

[1] ಹೇವರಮಂ ಕ್ಷಣಾಂತರಕೆ ತೋರ್ಪ ಸುಖಕ್ಕೊಲವಿಂದೊ ನಾಳೆಯೋ ।
ಸಾವ ಜನಂಗಳೊಳ್ಕ್ರಮತೆ ಮತ್ಸರವೀಗಳೊ ಬೈಗಿನಾಗಳೋ ॥
ಜೀವ ಶರೀರದೊಳ್ಬರ್ದುಕುವಾಸೆ ವಿರಕ್ತಿಯೊಳಾತ್ಮತತ್ತ್ವಮಂ ।
ಭಾವಿಸಿ ಮುಕ್ತನಾಗಲರಿದಾಯ್ತಕಟಾ ! ಅಪರಾಜಿತೇಶ್ವರಾ ॥೨೯

ನಾಗನರಾಮರೇಂದ್ರರ ಸುಖಂ ಸಿರಿಯಂ ನಿಜದಿಂದೆ ಭಾವಿಸಲ್।
ಜೋಗಿ ಮಹೇಂದ್ರಜಾಲದ ಕುಮಂತ್ರದೆ ತೋಱುವ ಮಾಮಱುಂಗಳೊಳ್॥
ತೂಗುವ ಪಣ್ಗಳಂ ಸವಿದೆನೆಂಬನ ಸಂಭ್ರಮದಂತೆ ಕರ್ಮಸಂ ।
ಯೋಗದಿನಾಯ್ತು ಪೋಯ್ತು ನಿಸುಗುಂ ಪಿರಿದೇನಪರಾಜಿತೇಶ್ವರಾ॥೩೦

ಮುಕ್ತಿಯೊಳಲ್ಲದಿಲ್ಲ ಸುಖಮಂತದು ಕರ್ಮವಿನಾಶವಿಲ್ಲದೇ ।
ವ್ಯಕ್ತಿಗೆ ಬಾರದಾದುರಿತನಾಶಕೆ ದೀಕ್ಷೆಯೆ ಬೇಕು ಮೋಹದಾ ॥
ಶಕ್ತಿಯೊಳರ್ದವಂಗೆ ರುಚಿದೋಱದು ದೀಕ್ಷೆಯದರ್ಕೆ ನಿಮ್ಮ ಸ ।
ದ್ಭಕ್ತಿಯೆ ಬೀಜ[2]ಮೊಯ್ಯನದನೀವುದು ಮುಂದಪರಾಜಿತೇಶ್ವರಾ॥೩೧

ಶಕ್ತಿಗೆ ತಕ್ಕ ದಾನಗುರುಪೂಜನಸುವ್ರತಪರ್ವಕಾಲನಿ ।
ರ್ಭುಕ್ತಿಗಳಂ ನೆಗಳ್ಚುತೆ ಜಿನಾಗಮಗೋಷ್ಠಿಗಳಲ್ಲಿ ಧರ್ಮಸಂ ॥
ಯುಕ್ತರ ಮೇಳದೊಳ್ ಕಳೆಯುತುಂ ದಿನಮಂ ನಡೆವಂಗೆ ಮೋಹದಾ।
ಸಕ್ತಿ ಸಡಿಲ್ದು ಪೋಪುದಿದು ಭಕ್ತಿಯಲಾ ಅಪರಾಜಿತೇಶ್ವರಾ ॥೩೨

ಮಾಡುವುದರ್ಕೆ ಶಕ್ತಿಯೆನಗೊಚ್ಚತವಿಲ್ಲದೊಡೊಲ್ದು ಧರ್ಮಮಂ ।
ಮಾಡುವರಲ್ಲಿ ನೋಡಿ ಪರಿಣಾಮಮನೆಯ್ದುವುದೊರ್ಮೆ ನೋಱ್ಪುದುಂ॥

1 ಹೀವರಮಂ. ಖ॥ 2 ಮೊಯ್ಯನನಗೀವುದು. ಖ॥

ಕೂಡದೊಡಂತೆ ಕೇಳ್ದು ಸುಖಿಯಪ್ಪುದು ನಿಮ್ಮನೆ ನಂಬಿ ಧರ್ಮ್ಮಮಂ।
ಜೋಡಿಸಿ ಕೊಳ್ವುದರ್ಕೆ [1]ಬಿಱುಸುಂಟೆ ಜನಕ್ಕಪರಾಜಿತೇಶ್ವರಾ ॥ ೩೩

ಹವಣಿಸಿ ಕೊಂಬುದೊಯ್ಯನೆ ಪರಿಗ್ರಹಮಂ ಗತಿನಾಲ್ಕಱಂದಮಂ ।
ಶಿವಪದದಂದಮಂ ತಿಳಿಯುತಿರ್ಪುದು ಕಾಯದ ಕಷ್ಟಮಂ ನಿಜಾ ॥
ತ್ಮವಿಪುಲಶುದ್ಧಿಯಂ ನೆನೆಯುತಿರ್ಪುದು ಕೂಡೆ ವಿರಕ್ತಿ ತಾನೆ ಸಂ।
ಭವಿಪುದು [2]ದೇಹಿಗೇದೊರೆಯದೋಜೆಯಲಾ ಅಪರಾಜಿತೇಶ್ವರಾ ॥ ೩೪

ಮಿಕ್ಕ ಪರಿಗ್ರಹಗ್ರಹಿತನನ್ಯಜನಾದುಪಕಾರಲೇಶಮಂ ।
ಲೆಕ್ಕಿಪನೇ ವಿರೋಧಿಗಳ ಬಲ್ಲನೆ ಮೆಲ್ಲಿರ್ದೆ*ಯುಂಟೆ ಮತ್ತನಂ ॥
ನಕ್ಕುದು ನಕ್ಕುದೇ ಮುನಿದುದುಂ ಮುನಿಸೇ ಅವನಾಟವೆಲ್ಲಮುಂ ।
ಮಕ್ಕಳ ಮೇಳದಾಟದವೊಲಿರ್ಪುದಲಾ ಅಪರಾಜಿತೇಶ್ವರಾ ॥ ೩೫

ಗ್ರಹವಿಡಿಗೊಂಡವಂಗೆ ಮಱವೊರ್ಮೆ ವಿವೇಕವದೊರ್ಮೆ ಕೂಡೆ ಸಂ ।
ಗ್ರಹಿಸುತುಮಿರ್ಕುಮಲ್ಲದೆ ಯಥಾಸ್ಥಿತಿಯುಂಟೆ ನಿರಂತರಂ ಪರಿ ॥
ಗ್ರಹದೊಳಗಿರ್ದವಂಗೆ ನುಡಿಯುಂ ನಡೆಯುಂ ಕ್ಷಣಿಕಂಗಳಲ್ಲದೇ ।
ಸಹಜಚರಿತ್ರದೊಳ್ನೆಱಗೆಯೆತ್ತಣವಾತಪರಾಜಿತೇಶ್ವರಾ ॥ ೩೬

ಸೊರ್ಕಿ ಶರೀರನಾರಿಧನವೆನ್ನವಿವೆಂದವರಲ್ಲಿ ಕಣ್ಮನಂ ।
ಸಿರ್ಕಿ ವಿವೇಕಿಗಳ್ನುಡಿದ ಧರ್ಮಮನೊಲ್ಲದೆ ಕೂಟ ಕೊರ್ಬಿನೊಳ್ ॥
ಕರ್ಕಶವೃತ್ತಿಯೊಳ್ನಡೆವ ಕಾಮುಕರಂತಕನೊಯ್ವ ಕಾಲದೊಳ್ ।
ಮರ್ಕಟನಂತೆ ಪಲ್ಗಿರಿವರೇತೆಱ ಬಾೞಪರಾಜಿತೇಶ್ವರಾ ॥ ೩೭

ರಚ್ಚೆಯ ಸಂಭ್ರಮಕ್ಕೆ ಕುಣಿವಿಚ್ಚೆಯ ಕೊಱುಱುತುಂ ಕ್ಷಣಾಂತ್ತದೊಳ್।

1 ಬಿರಿಸುಂಟೆ, ಖ॥ 2 ಗೇಹಿಗೇಂ. ಖ॥

ಕಿಚ್ಚಿನ ಕೊಂಡಮಂ ಪುಗುವ [1]ಮಾಸತಿವೊಲ್ವಿಷಯಂಗಳಿಚ್ಛೆಯಂ॥
ಮುಚ್ಚಿ ಮನಕ್ಕೆ ಬಂದ ತೆಱದೊಳ್ನಡೆದೊಲ್ಲದೆ ಸುವ್ರತಂಗಳಂ।
ಹುಚ್ಚರ ದುರ್ಗತಿಸ್ಥಳಕೆ ಬೀಳ್ವರದೇಕಪರಾಜಿತೇಶ್ವರಾ ॥೩೮

ಪಿಂದಣ ಜನ್ಮಜನ್ಮದೊಳ[2] ಗೆಲ್ಲಿದನೀಭವದತ್ತ ತನ್ನನಾ।
ತಂದರದೆಲ್ಲಿ ಮುಂದೆ ತನಗಿನ್ನೆಡೆ? ಪುಟ್ಟಿದ ತಾಣತಾಣದೊಳ್॥
ಕುಂದದುಪಾರ್ಜಿಸಿರ್ದ ಧನವಂ ತನುವಂ ಬರುತೊಂದನುಂ ಮನಂ।
ತಂದುದೆ? ನಿಮ್ಮ ನಚ್ಚರಪೆ ಚಿಂತಿಪುದೇಕಪರಾಜಿತೇಶ್ವರಾ ॥೩೯

ಇತ್ತೊಡೆ ಬಪ್ಪುದೇ ಬಡತನಂ? ಕುಡದಿರ್ದೊಡೆ ಲಕ್ಷ್ಮಿ ನಿಲ್ವುದೇ?।
ಸತ್ತೊಡೆ ಜೀವನಂತೆ ಲಯವಾದನೆ? ಜೀವಿಸುತಿರ್ದೊಡಿರ್ದನೇ?॥
ಎತ್ತಣ ಮಾತಿದೆಲ್ಲ ಬರುತುಂ ಬಯಲಾಗುತಮಿರ್ಪುದೈಸೆ ನಿಂ।
ಮತ್ತಣ ಭಕ್ತಿಯೊಂದೆ ನಿಜಸಿದ್ಧಿಯಲಾ ಅಪರಾಜಿತೇಶ್ವರಾ ॥೪೦

ನಿನ್ನ ಪದಾಬ್ಜಭಕ್ತಿ ವಿಷಯಾರ್ಥವಿರಕ್ತಿ ತಪೋಭರಕ್ಕೆ ಸಂ।
ಪನ್ನತೆವೆತ್ತ ಶಕ್ತಿ ತನುವಂ ಸಲೆ ಭೇದಿಸಿ ತನ್ನ ರೂಪನ॥
ಚೆನ್ನದೆ ಕಾಣ್ಬ ಯುಕ್ತಿ ಗುಣದಲ್ಲನುರಕ್ತಿಯಿವಾಗೆ ಮುಕ್ತಿ ಜೀ।
ವನ್ನರನಾಗಿವಂ ಪಡೆಯದಿರ್ದೊಡದೇಕಪರಾಜಿತೇಶ್ವರಾ ॥೪೧

ನಿನ್ನೊಳಗಾದ ಭಕ್ತಿ ಗಡ ನಿರ್ವೃತಿ ಬೇಕು ಗಡಂ ವಿಶುದ್ಧದಿಂ।
ತನ್ನಿರವುಂ[3] ಭವತ್ಪ್ರತಿ ಗಡಾಂತುದು ದೀಕ್ಷೆ ಗಡಂ ಬೞಿಕ್ಕಹೋ!॥
ಸನ್ನಿ ಗಡಂ ಬಿಸಿಲ್ಗಡ ಭಯಂ ಗಡ ಬಾಯ್ಸವಿಯಾಸೆಯುಂ ಗಡಂ।
ನನ್ನ ಮನೋವಿಕಾರತೆಯನಾಡುವೆನೇನಪರಾಜಿತೇಶ್ವರಾ ॥೪೨

1. ರಂಡೆಯುವೊಲ್, ಖ॥ 2. ದೆಲ್ಲಿದ. ಖ॥ 3. ಭವಪ್ರತಿಗಡಾಂತು. ಖ॥

ನಾಲಗೆಗಾವುದಿಚ್ಛೆ ತಪನಾಮರಸಾಯನವೊಂದೆ[1] ಯೆನ್ನ ಚಿ ।
ತ್ತಾಲಯದೊಳ್ಬೆಳಪ್ಪ ಮಣಿದೀಪಮದಾವುದು ನಿನ್ನ ರೂಪ ಪ್ರೊ ॥
ಯ್ಯಾಲೆಯ ಮೆಯ್ಯ ಭಾರಣೆಯ ಹಿಂಗಿಸುವೌಷಧಿಯಾವುದೆನ್ನ ಚಿ ।
ತ್ತಾಲಕ ನಿನ್ನ ಮಾರ್ಗ್ಗದ ತಪಂಗಳಲಾ ಅಪರಾಜಿತೇಶ್ವರಾ ॥೪೩

ತೊಗಲ ಪಸುಂಬೆಯೊಳ್ತೊಲಸಿ ನೋವೞಿಯೊಳ್ಪುಜಿಯೆಂಬ ತೇಟ್ಗಳಾ ।
ಪಗವಿನೊಳಿರ್ಪ್ಪವ್ರೊಲ್ತನುವಿನೊಳ್ಕವಿದಿರ್ದ್ದಪನಾತ್ಮನೆಂಬುದಂ ॥
ಬಗೆಯದ ಕಾರಣಂ ಬರ್ದ್ದುಕು ರಂಜಿಸಿತಲ್ಲದೆ ತೂಗಿ ನೋೞ್ಪನಂ ।
ನಗಲಿಡೆಯುಂಟೆ ? ತುತ್ತಿಡೆ ಮನಂ ಬರುದೇ ? ಅಪರಾಜಿತೇಶ್ವರಾ ॥

ಮಾಸು ಮುಸುಂಕಿ ತಾಯೊಡಲೊಳಿಂತಿರೆ ಪರ್ಪ್ಪುದು ಮೂತ್ರಮಾರ್ಗ್ಗ[ದೊಳ್ ।
ಹೇಸದೆ ಬರ್ಪ್ಪುದೆಂತು ? ಮೊರದೊಳ್ಮಲಮೂತ್ರದೊಳಾೞುತೇೞುತುಂ ॥
ಕೂಸೆನಿಸಿರ್ಪ್ಪುದೆಂತುಟದನಾಂ ಮಱೆದಾಗಳೆ ಠಕ್ಕುಜನ್ಮನಂ ।
[2]ಸಾಸದವೆಂದು ನಚ್ಚಿದೆನಲಾ ಮತಿದೋಱಪರಾಜಿತೇಶ್ವರಾ ॥೪೫

ಪಗೆಯ ವಶಕ್ಕೆ ಸಿಲ್ಕಿ ಸೆಱೆಯಿರ್ದ್ದ ಮಹಾನುಭವಂಗೆ ನಿದ್ರೆ ತಾ ।
ನೊಗೆವುದೊ? ಭೋಗದಿಚ್ಛೆಯೆ ವಿಡಾಯುವೆ ಮಚ್ಚರವುಂಟೆ ದಿವ್ಯಯೋ
ಗಿಗೆ ರಿಪುಮೋಹಮಂ ಜಯಿಸಿ[3] ಮೆಯ್ಸೆಱೆಯಂ ಕಳೆವೊಂದು ಜೋ[ಕೆಯು ।
ಜ್ಜುಗವದೆ ಚಿಂತೆಯ್ಮಸೆ ಪೆಱತೊಂದಿರುದೇ? ಅಪರಾಜಿತೇಶ್ವರಾ ॥೪೬

ಓದುವ ಪೇೞ್ವ ಕೇಳ್ವ ಪರಿಭಾವಿಪ ಬಲ್ಲನಿತಂ ಪೆಱರ್ಗೆ ತಾ ।
ನೋದಿಪ ಮೂಱುಸಂಜೆಗಳನಾಱು ಸುಪರ್ವದಿನಂಗಳಂ ಸದಾ ॥

---

1. ನನ್ನ. ಖ॥ 2. ನಾಸದೆವೆಂತುಸಚ್ಚಿ. ಖ॥ 3. ಮ್ಮೆಸಿರೆಯಂ, ಖ॥

ಸಾಧಿಸತಕ್ಕ ಸತ್ಕ್ರಿಯೆಗಳಂ ನೆಗೞ್ದಂತುಟು ದಂದುಗಂಗಳಂ ।
ಪೋದೊಡೆ ಕಾಲಮೆಲ್ಲ ಶುಭಕಾಲವಲಾ ಅಪರಾಜಿತೇಶ್ವರಾ ॥೪೭

[1] ನುಡಿವೊಡೆ ದೇವ ನಿಮ್ಮಯ ಮಹಾಸಭೆಯೊಳ್ನುಡಿವಂತಿರೋಜೆಯಿಂ।
ನುಡಿವುದು ಪೋಗುವಲ್ಲಿ ಮುಳುವಟ್ಟೆಯೊಳೆಯ್ದುವನಂತಿರೋ [ಜೆಯಿಂ ॥
ನಡೆವುದು ಕುಳ್ಳಿರಿರ್ಪೊಱಗುವುಣ್ಬೆಡೆಯೊಳ್ಸೆಱೆಸಿಲ್ಕಿದಾತನಂ ।
ತೊಡನೆ ನಿಜಾತ್ಮಚಿಂತೆಯೊಳಹಂಗಘವೇನಪರಾಜಿತೇಶ್ವರಾ ॥೪೮

ಲೋಕದ ವಾರ್ತೆಯೊಳ್ಬಧಿರನಾತ್ಮಹಿತಂ ಪೊಱಗಾದ ಮಾತಿನೊಳ್ ।
ಮೂಕತೆ ತನ್ನದೇಹಪರದೇಹದ ನೋಟದೊಳಂಧಕಂ ಪ್ರಮಾ ॥
ದೈಕದೆ ಕಂಡು ರಾಗಿಸಿದೊಡಂ ಸುಡು ಮಾಂಸವಿಕಾರಮೆಂದು ಮೆ ।
ಯ್ಗೋಕರಿಪಾತನಂತಕನನಂಜಿಸನೇ ? ಅಪರಾಜಿತೇಶ್ವರಾ ॥೪೯

ನೋಡಿದೊಡೆಲ್ಲಿಯುಂ ತನುವಿನೊಳ್ಮತಿಸೋಲದೆ ಶುದ್ಧಜೀವನಂ ।
ನೋಡುವ ಮಾತನಾಡಿದೊಡೆ ಶಾಂತಿ ಶುಭು ಪವಣಾಗಿ ಪೇೞ್ವ ತಾಂ ॥
ಪಾಡಿದೊಡತ್ತಲಿತ್ತ ತೊನದಾಡದೆ ನಿನ್ನೊಳೆ ನಟ್ಟ ಚಿತ್ತದಿಂ ।
ಪಾಡುವನಾಗಿಯುಂ ಕಡುವಿರಾಗಿಯಲಾ ಅಪರಾಜಿತೇಶ್ವರಾ ॥೫೦

ಕಣ್ಮಲರಳ್ಕರಿಂದೊಸಱೆ ನಿಮ್ಮನೆ ನೋಡುತುಮಂತರಂಗದೊಳ್ ।
ಪೊಣ್ಮೆ ವಿಶೋಧಿ ಭಾವಿಸುತೆ ನಾಲಗೆ ರಾಗಿಸೆ ಪಾಡುತಂಗದೊಳ್ ॥
ಉಣ್ಮಿರೆ ರೋಮಜಾಲವೆಱಗುತ್ತನುಕಂಪನವೆತ್ತ ಕೈಗಳಂ ।
ದಣ್ಮೆ ತವಾಂಘ್ರಿಗ[2]ಳ್ಗಲರನರ್ಚಿಪೆನೆಂದಪರಾಜಿತೇಶ್ವರಾ ॥೫೧

1 ನಡಿವರೆ. ಖ॥ 2 ಳ್ಚಲರ. ಕ॥

ಮಾತಿನ ಮಾಲೆಯೇಕೆ ಜಿನ ನಿನ್ನೆಡೆ ತನ್ನೆಡೆಯಲ್ಲದನ್ಯರೊಳ್ ।
ಪ್ರೀತಿಯನಾವನೆಯ್ದಿದನವಂ ತಳುವೇನುಱೆಯ್ದಿದಂ ಮಹಾ ॥
ಭೀತಿಯನೆಯ್ದಿದಂ ಭವಸಮುದ್ರವನೆಯ್ದಿದನೆಂದೊಡಾತ್ಮಸ ।
ದ್ಭೂತಿಗೆ ನೀನೆ ಮಾನ್ಯ ಪೆಱತುಂ ಫಲವೇನಪರಾಜಿತೇಶ್ವರಾ ॥೫೨

ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ[1]ಯೆನ್ನ ಬಂಧು ಸ ।
ದ್ಭಾವದೆ ಪೂಜಿಪಾತನೆ ಸಖಂ ಶ್ರುತಯೋಗಸಮೃದ್ಧನೆನ್ನ ಸಂ ॥
[2] ಜೀವನನೆಂಬೆನೇಕಿನಿತು ಪಕ್ಷವಿದೆಂಬೊಡೆ ನನ್ನ ಮೆಚ್ಚಿನಾ ।
ದೇವನ ನಚ್ಚಿನಾತನೆನಗನ್ಯನೆ ಪೇಳಪರಾಜಿತೇಶ್ವರಾ ॥೫೩

ಲೋಕಮಿದೆಲ್ಲಮುಂ ಸ್ಮರಪಿಶಾಚವಿಜೃಂಭಿತಮಿಂದ್ರಜಾಲವಿ ।
ದ್ಯಾಕಥನಂ ಯಮಾಸುರನ ಜೀವನದಾಹುತಿಯಲ್ಲಿ ಪಕ್ಷದಿಂ ॥
ಶೋಕವನಾರ್ಗೆ ಮಾಳ್ಪನೊಲಿದಿರ್ಪನದಾರ್ಗೆ ? ಕನಲ್ವನಾರ್ಗೆನಲ್? ।
ಮೂಕತೆಯುಂ ದಯೋಕ್ತಿಯೆರಡೇಹಿತಮಿನ್ನಪರಾಜಿತೇಶ್ವರಾ ॥೫೪

ಮೊನ್ನೆ ಬರುತ್ತೆ ಕಂಡೆನವನಂ ಮೃತನಾದನೆಯಾವನಕ್ಕಟಾ ! ।
ನಿನ್ನೆ ಸುಗೋಷ್ಠಿಗೆಯ್ದನಿವನುಂ ಲಯಮಾದನೆಯಾದನಪ್ಪೊ! ಇಂ ॥
ದಿನ್ನೊಡವಂದನೀತನಕಟಾ ! ಕಡೆಗಂಡನೆ ಕಂಡೆನೆಂಬ ಮಾ ।
ತನ್ನೆಱೆ ಕೇಳುತೆನ್ನೊಡಲ ನಚ್ಚುವನೆಂತಪರಾಜಿತೇಶ್ವರಾ ॥೫೫

ಎಲೆ ಎಲೆ ಇತ್ತಲಿರ್ದ ಮೊಗವತ್ತಲಿದೀಕ್ಷಿಸೆ ಮುನ್ನೆ ಕಂಡರೊಳ್ ।
ಕೆಲಬರನಲ್ಲಿ ಕಾಣಲರಿದಿಂತುಟು ತೋಱುತೆ ಮಾಯಮಪ್ಪ ಮೆ ॥
ಯ್ವೆಲೆಯೊಳೆ ಬಾಳ್ವೆನೆಂಬ ಮನವಲ್ಲದೆ ತತ್ತನುವಂ ತಪಂಗಳೊಳ್ ।
ಸಲಿಸಿ ನಿಜತ್ವಮಂ ಪಡೆಯಲಂಜುವೆನೇಕಪರಾಜಿತೇಶ್ವರಾ ॥೫೬

1. ಉನ್ನ. ಕ॥ 2. ಜೀವತನೆಂಬೆ. ಕ॥

ಪೇೞವೆ ವೇಳೆವೇಳೆಗಿಱುವಾಯುಮನೀಗಳಯಾರಸನ್ನೆಯುಂ ।
ಕೋಱಿಯುಮೋದುತಿರ್ಪ ತಿಥಿವಾರಕಘೋಷಣೆ ತೞ್ತು ಪೇೞ್ಯುಂ॥
ಕೇಳುತುಮಂ[1] ತವಕ್ಕಗಿಯುದಂಗವಿದಂ ಸ್ಥಿರವೆಂದೆ ನಚ್ಚಿ ನಿಂ ।
ನೊಳಗಡಿಚ್ಚಿಯಂ ಮಱೆದು ಕೆಟ್ಟನಲಾ ಅಪರಾಜಿತೇಶ್ವರಾ ॥೫೭

ಪ್ರೊಕ್ಕು ಸಮಾನಚಿತ್ತವನೆ ಸಾಧಿಸಿ ಕರ್ಮನಿಬಂಧಮಂ ಲಯ ।
ಕ್ಕಿಕ್ಕುವೆನೆಂದು ತಾಳ್ದು ತಪಮಂ ನಡೆಯುತ್ತೆಡೆಯೊಳ್ಕೆಲಂಬರೊಳ್॥
ನಕ್ಕು ಕೆಲಂಬರೊಳ್ಮುನಿದು ಬಾೞ್ವುದಿದೇಂ ಬಿಡ ಪೋಗಿ ಮಾಱುಗಂ ।
ಟಕ್ಕಿದ ಗಾದೆಯಾದೆನುಪಶಾಂತಿಯನೀಯಪರಾಜಿತೇಶ್ವರಾ ॥೫೮

[2]ಕಟ್ಟಿದ ಪಟ್ಟಣಕ್ಕೆ ಪಯಣಂಬರುತಿರ್ದವನಲ್ಲಿಗಲ್ಲಿ ತಾಂ ।
ಬಿಟ್ಟೆಡೆಯೊಳ್ಪಲಂಬರೊಳಗೆಂತು ಸಮಂಬಡೆದಿರ್ಪನಂತೆ ಕ ॥
ಣ್ಣಿಟ್ಟು ನಿಜಾತ್ಮಸಿದ್ಧಿಗೆ ತಪಂ[3]ಬಡೆವಂ ಪಲರಲ್ಲಿ ಮುಟ್ಟಯುಂ ।
ಮುಟ್ಟದ ಭಾವದಿಂ ನಡೆಯವೇೞ್ಕುಮಲಾ ಅಪರಾಜಿತೇಶ್ವರಾ ॥೫೯

ಆವನೊಳಾದೊಡಂ ಕುಮತಿ ಕಾೞ್ನುಡಿ ಕಿೞ್ನಡೆ ತೋಱುತಿರ್ದೊಡಾ।
ಜೀವನೆ ಸೈಜವೆನ್ನದೆ ತದೀಯಕಷಾಯಗುಣಂಗಳೆಂದವಂ ॥
ಭಾವಿಸಿಯಾಕಷಾಯತತಿ ತನ್ನೊಳಗಾಗದವೊಲ್ ನಿಜಾತ್ಮನಂ ।
ಕಾವುತುಮಿರ್ಪವಂ ಸ್ವಪರವೇದಿಯಲಾ ಅಪರಾಜಿತೇಶ್ವರಾ॥೬೦

ಗುಣಿಯೆನಿಸುತ್ತೆ ತಾಂ ನಡೆಯುತಿರ್ದೊಡಮನ್ಯರ ದುರ್ಗುಣಂಗಳಂ ।
ಗಣಿಯಿಸಿದಂದು ತಾಂ ಗುಣವಿಹೀನನೆಯಂತದಱಂದೆ ಸರ್ವರೊಳ್ ॥
ಗುಣವನೆ ಕಾಣ್ಬುದುತ್ತಮಗುಣಕ್ಕವರಂ ತರಲಾರ್ಪೊಡೆಲ್ಲರಂ ।
ಗಣಿಯಿಪುದಲ್ಲದಂದವಱ ಚಿಂತೆಯದೇಕಪರಾಜಿತೇಶ್ವರಾ ॥೬೧

---

1. ತದಕ್ಕೆ. ಖ॥ 2. ತುಟ್ಟಿದ. ಕ॥ 3. ಬಡುವಂ. ಕ॥

ಸರ್ವಗುಣಂಗಳೊಳ್ಸಲಭರಾರ್ ಜಿನ ನೀಂ ಪ್ರೌಢಗಾಗಿ ಲೋಕದೊಳ್ |
ಪರ್ವಿದ ಮಿಥ್ಯೆಯೊಳ್ವಿಷಮಕಾಲದೊಳೀನರಕೀಟಕಂಗಳೊಳ್ ||
ಒರ್ವರೊಳಿರ್ದ್ದದೊಂದು ಗುಣಮಂ ಗುಣಕೋಟಿಯೆನುತ್ತೆ ಕಂಡು ತಾ|
ನುರ್ವುವವಂಗೆ ನಿನ್ನ ಗುಣಮೊಲ್ದಿರವೇ ಅಪರಾಜಿತೇಶ್ವರಾ ||೬೨

ದುರ್ವಿಷಯಂಗಳೆಂಬ ವಿಷಮಂ ಕುಡಿದಾರ್ತವಿರೋಧಮೋಹಮೆಂ |
ಬುರ್ವಿನ ವತ್ಸನಾಭಿಯೆನೆ ಮೆಚ್ಚಿ ಕಿಡುತ್ತಿದೆ ಲೋಕಮಕ್ಕಟಾ ||
ಸರ್ವರ ಮೆಯ್ಯೊಳಾವಿಷನಿವಾರಣಕಾತ್ಮನಿಜಸ್ವರೂಪದಾ |
ನಿರ್ವಿಷಮುಂಟದಂ ಮಱೆದು[1] ನೋವರದೇಕಪರಾಜಿತೇಶ್ವರಾ ||೬೩

ಅಱುಯಲೆ ಚಿತ್ತಮೀಯುದಘಸಂತತಿಯಾತ್ಮನನೆತ್ತಲಾನುಮೊ |
ಲ್ದಱಪೊಡೆಯುಸ್ತಬೆಸ್ತವನೆ ಮಾಡುವುದೊರ್ಮೆ ಯಥಾರ್ಥವಾಗಿ ತಾ ||
ನಱದೊಡಮೇನೊ ತನ್ನೊಳಗೆ ತನ್ನನೆ ಭೇದಿಸಿ ಶುದ್ಧಸಿದ್ಧನೆಂ|
ದಱವಿನೊಳೀಕ್ಷಿಸಲ್ಕೆ ಬಿಡದಚ್ಚಗಿ ನೋಡಪರಾಜಿತೇಶ್ವರಾ ||೬೪

ಘುಳಿಸುವನ್ನೈದೆ ಪಾಪಸುಕೃತಂಗಳನುಣ್ಬನೆರಲ್ಫಲಂಗಳಂ |
ಮುಳವಶನಾಗಿ ದೇಹಿ ಸುಖಿ ದುಃಖಿ ಕಷಾಯವಿನಾಶಿ ಕಾಮಿ ಪೃ ||
ಲ್ಪುಟು ಸತಿ ಗಂಡು ಷಂಡನೆನಲಿಂತು ಬಹುಸ್ಥಿತಿಯಪ್ಪನಾತ್ಮನಾ |
ಮುಳಿಕುಳಮಂ ಕಟಲ್ಚಿ[2] ಸುಖಿಯಪ್ಪನಲಾ ಅಪರಾಜಿತೇಶ್ವರಾ ||೬೫

ಕರ್ಮನಿಬಂಧನಾಗಿಯುಮಬಂಧನಮೂರ್ತನೆ ಮೂರ್ತನಾಗಿಯುಂ |
ಕೊರ್ಮೆ ವಿಷಾದಮಿರ್ದ್ದಮಮಲಂ ನಭದಂತಿರೆ ಶೂನ್ಯನಾಗಿಯುಂ||

1. ಪರಿದೇಕೆ. ಖ|| 2. ನಿಜಮಪ್ಪನಲಾ. ಖ||

ಧರ್ಮಗುಣಾತಿಶಾಯಿಕನಿದಾತ್ಮನ ವರ್ತನೆಯದ್ಭುತಕ್ಕೆ ಸಾ।
ಸಿರ್ಮಡಿಯದ್ಭುತಂ ತಿಳಿಯಬಲ್ಲವನಾರಪರಾಜಿತೇಶ್ವರಾ॥೭೬

ಏಕನನೇಕನಲ್ಪನಧಿಕಂ ಕ್ಷಯನಕ್ಷಯನಸ್ತಿನಾಸ್ತಿ ಮೂ।
ಲೋಕಮಿತಂ ಸ್ವದೇಹಮಿತನುತ್ತಮಬೋಧಸುದರ್ಶನಂಗಳಿಂ॥
ಲೋಕಕಲೋಕಕಂ ನೆರೆವನಂಗದ ನೋಟದೆ ಬದ್ಧನಾತ್ಮನಾ।
ಲೋಕನದಿಂದೆ ಮುಕ್ತನಿದು ಶಕ್ಯಮದಾರ್ಗಪರಾಜಿತೇಶ್ವರಾ॥೭೭

ಮಾನವರಾತ್ಮತತ್ವಮಱಿಯಲ್ಕೆ ಕುವಾದಿವಿವರ್ಜನಕ್ಕೆ ನಾ।
ನಾನಯಮುಂ ಪ್ರಮಾಣನಿಧಿಸಂಗ್ರಹಮುಂ ನೆಱದಿರ್ದುವಲ್ಲದೇ॥
ಧ್ಯಾನಿಸುವಾಗಳೀಬಹುವಿಕಲ್ಪತೆಯಿಲ್ಲ ಮಣಿತ್ರಯಾತ್ಮನಂ।
ಬೇನುತಭಾವಮೊಂದೆ ಬೆಳಗಿರ್ಪುದಲಾ ಅಪರಾಜಿತೇಶ್ವರಾ ॥೭೮

ವ್ಯವಹೃತಿಯೆಂದು ನಿಶ್ಚಯತೆಯೆಂದು ಮಣಿತ್ರಯಮಕ್ಕುಮಲ್ಲಿದೇ।
ವಚನ ತಾಪಸರ್ಕಳವಧಾರಣೆ ತಾಂ ವ್ಯವಹಾರಮಲ್ಲಿ ದೋ॥
ಷಮ[1]ನುಱುವಿಲ್ಲದೇ[2]ಗೆಲಿದೆ ನೀನೆ ಮಮಪ್ರಭು ನಿಮ್ಮ ವಾಣಿಯೇ।
ಶಿವಮತ ತಾನಸಂಗನೆ ತಪಸ್ವಿಯಲಾ ಅಪರಾಜಿತೇಶ್ವರಾ ॥೭೯

ಮೊದಲೊಳೆ ತತ್ವಸಪ್ತಕದಿ ಪೇಟ್ದ ಮಣಿತ್ರಯಮಂ ಬಱಿಕ್ಕಿದೇ।
ನಿದನೊರೆದಿರ್ದನೆನ್ನದಿರಿಮಾಪ್ತನೊಳಾಗಮದೊಳ್ತಪಸ್ವಿಯೊಳ್॥
ಪುದಿದುದು ತತ್ವವರ್ಗಮದಱಿಂದೆ[3]ರವಿಲ್ಲಮದುಂ ನಿಜಾತ್ಮಸಾ।
ಧ್ಯದ ಸಹಕಾರಿಯೆಂಬುದು ತವಾಜ್ಞೆಯಲಾ ಅಪರಾಜಿತೇಶ್ವರಾ ॥೮೦

ನಿಶ್ಚಯದಿಂದಮಾತ್ಮನೆ ಸುದರ್ಶನಮಾತ್ಮನೆ ಶುದ್ಧಬೋಧನಂ।
ತಶ್ಚರಿತಂ ನಿಜಾತ್ಮನೆ ಮಣಿತ್ರಯರೂಪನುಮಾತ್ಮನೆಂಬುದಂ॥

---

1. ನುಱುವಿಲ್ಲದೇ, ಖ॥ 2. ಗೆಲಿದ, ಖ॥ 3. ಪುಲ್ಲದುದಂ, ಕ॥

ನಿಶ್ಚಲವಾಗಿ ನಂಬಿ ನಿಜವಂ ತಿಳಿದಲ್ಲಿಯೆ ಲೀನವಾಗಿ ಚೇ |
ತಶ್ಚರವಂ ನೆಗಚ್ಚ ಶಿವವೆಂದೆಯಲಾ ಅಪರಾಜಿತೇಶ್ವರಾ ||೨೧

ನಿನ್ನನೆ ನಂಬು ನಂಬಿದೊಡೆ[1] ನನ್ನನೆ ನಂಬಿದೆ ಶುದ್ಧದೃಷ್ಟಿಯಿಂ |
ನಿನ್ನನೆ ನೋಡು ನೋಡಿದೊಡೆ[2] ನನ್ನನೆ ನೋಡಿದವಂ ಸುಚಿತ್ತದಿಂ ||
ನಿನ್ನೊಳಗೈಕ್ಯವಾಗದುವೆ[3] ನನ್ನೊಳಗೇಕತೆಯಾದುದೆಂದು ರ |
ತ್ನೋನ್ನತಿಯಿಂತುಟೆಂದೊರೆದೆ ನೀನೆ ಬುಧಂಗಪರಾಜಿತೇಶ್ವರಾ ||೨೨

ವರಗುರುಪಂಚಕಂ ವರತಪಶ್ಚರಣಂಗಳಪಿಪ್ಪುವಲ್ಲಿ ಸ |
ದ್ಗುರು[4] ಗುಣಶೀಲಸಂಯಮಸುತೀರ್ಥಪವಿತ್ರತೆಯಲ್ಲಿ ತೋರ್ಕುವು ||
ತ್ತರಗುಣರಾಶಿಮೂಲಗುಣವೃಂದಮುಮಿರ್ಪುವಲ್ಲಿ ನಿನ್ನ ಚಿ |
ತ್ಪರಿಣತೆಯಲ್ಲಿ ನಿಟ್ಟಿಸೊಳಗೆಂದೆಯಲಾ ಅಪರಾಜಿತೇಶ್ವರಾ ||೨೩

ಅಱವಱಿಂಗಡಪ್ಪುಮಱಿವಾತನುಮಂತದೆ ಕಾಣ್ಕೆಕಾಣ್ಕೆಗಂ |
ಗುಱಿಯುಮಡಂಗೆ ಕಾಣ್ಬನುಮದೇ ಶರಣಂ ಶರಣಾರ್ಥಿ ಸಾಧ್ಯದುಂ ||
ಎಱಕವೆಱಂಗುವಾತನೆಱಕಕ್ಕಧಿದೈವಮುಮಾತ್ಮತತ್ವವೇ |
ಪೊಱಗರಸಲ್ಕೆವೇಡ ನಿಜವೆಂದೆಯಲಾ ಅಪರಾಜಿತೇಶ್ವರಾ ||೨೪

ಅದನಱಿದಾತನೆಲ್ಲಮಱಿದಾತನದೊಂದನೆ ಕಂಡನೆಲ್ಲಮಂ |
ಸದರದೆ ಕಂಡನಲ್ಲಿಗೆ ಮನಂ ವಶವಾದೊಡೆ ಮುಕ್ತಿಸಾಧ್ಯವಾ ||
ದು[illegible]ಲವೇಕದೊಂದು ಪೊಱಗಾದೊಡೆ ಕಲ್ತ ಸಮಸ್ತಶಾಸ್ತ್ರದಿಂ |
ಚದುರರೆನಿಕ್ಕುಮಾತ್ಮಪದಸಾಧಕರೇ ಅಪರಾಜಿತೇಶ್ವರಾ ||೨೫

ಉದ್ಗತ[5] ದೃಷ್ಟಿಯಿಂ ಸಕಳಮಂ ಪೊಱಗೀಕ್ಷಿಸಪಪ್ಪುದಾತ್ಮನಂ |
ಹೃದ್ಗತದೃಷ್ಟಿಯಿಂದೊಳಗೆ ನಿಟ್ಟಿಸಬಾರದು ಜನ್ಮಜನ್ಮದೊಳ್ ||

1. 2. 3. ಯೆನ್ನನೆ. ಕ||  4. ಗಣ. ಖ||  5. ದೃಷ್ಟಿಯುಂ, ಕ||

ಪುದ್ಗಲರೂಪದಾಱು ರಸದಿಂ ಸುಖಿಸಲ್ಬಹುದಾತ್ಮರೂಪಸಂ ।
ವಿದ್ಗುಣದಾ ರಸಾನ್ನವನುಣಲ್ಕರಿದಿಂತಪರಾಜಿತೇಶ್ವರಾ ॥೭೬

ತಡೆತಡೆದೋಡುತಿರ್ಪ ಮನಮಂ ಪಿಡಿದಾತ್ಮನೊಳಿಟ್ಟು ತನ್ನ ತಾಂ ।
ನುಡಿನುಡಿದಾತ್ಮನೊಳ್ ಸ್ವಪರತತ್ವರಹಸ್ಯಮನಾತ್ಮರೂಪಮಂ ॥
ಅಡಿಗಡಿಗೊಲ್ದು ನೋಡುತೆ ಶಮಾಮೃತಮಂ ಸಲೆ ಪೀರ್ದು ಪೀರ್ದು ತಾಂ ।
ಪಡರ್ದ ತಪಸ್ವಿಯೋ ಸುಖಿ ಪೆಱಂ ಸುಖಿಯೋ ಅಪರಾಜಿತೇಶ್ವರಾ ॥೭೭

ಮನಮನಿದೊಂದನೇ ತನುವಿನೊಳ್ನಿಲಿಸಿರ್ದ ನಿಜಾತ್ಮನಲ್ಲಿ ನೆ ।
ಟ್ಟನೆ ನಿಲಿಸಲ್ಕೆ ಸಾಕು ಭಯವೆತ್ತಣದೆತ್ತಣದಾರ್ತರೌದ್ರಮೀ ॥
ತನುಸುಖದಾಸೆಯೆತ್ತಣದು ತೀವ್ರಪರೀಷಹಮೆತ್ತ ಮೋಹಮು ।
ಲ್ಲನ ಕುಱುಪಾಟವೆತ್ತ ಪಲವುಂ ಕೊಸಱೇಕಪರಾಜಿತೇಶ್ವರಾ ॥೭೮

ಮನದ ವಿಕಲ್ಪಮಿಂದ್ರಿಯಕಷಾಯಮನಾಗಿಪುದಂತವಾದೊಡಾ ।
ತನು ವಚನಂಗಳಾಡುವುದು ತಾನದಱಿಂದಮೆ ಕರ್ಮಲಬ್ಧಿಯಾ॥
ಮನಮೆ ನಿಜಾತ್ಮರೂಪದೊಳೆ ಮಗ್ನಮನೆಯ್ದಿದ ಮೇಲೆ ಕರ್ಮಬಂ ।
ಧನದೆಡೆಯೆತ್ತ ನಿರ್ಜರೆಗಿದೊಂದೆಯಲಾ ಅಪರಾಜಿತೇಶ್ವರಾ ॥೭೯

ಮನದ ಕುಭಾವಮೇ ದುರಿತಮಲ್ಲಿ ಸುಭಾವಮೆ ಪುಣ್ಯಮೀಯೆರ ।
ಡ್ಮನದೊಳಗಿಲ್ಲದಾ ಮನಮೆ ತನ್ನ ನಿಜಾತ್ಮನೊಳೈಕ್ಯಮಾಗಿ ಸ[illegible]॥
ಮನೆ ನಿಲೆ ಮೋಕ್ಷಮಂತದಱಿನಾತ್ಮನೆ ತಾಂ ಪಗೆ ತಾನೆ ಬಂಧುವುಂ।
ತನಗೆ ವಿನಿಶ್ಚಯಕ್ಕೆ ಗುರು ತಾನೆಯಲಾ ಅಪರಾಜಿತೇಶ್ವರಾ ॥೮೦

ಇಷ್ಟರುಮೆನ್ನೊಳಿರ್ದಪರನಿಷ್ಟರುಮೆನ್ನೊಳೆ ಇರ್ದಪರ್ ಜಿನೋ ।
ದ್ದಿಷ್ಟಮಿದಿರ್ದಮೇಲೆ ಪೊಱಗೇನನಭೀಕ್ಷಿಪೆನೇನ ಮಾಡುವೆಂ ॥

ಅಷ್ಟಗುಣಂಗಳೊಳ್ನಲಿಯುತೊತ್ತರಿಸುತೊತ್ತಡನಷ್ಟಕರ್ಮಮಂ |
[1]ದೃಷ್ಟಿಯುನೆನ್ನೊಳಾನಿರಿಸಿ ನಿಂದಪೆನಿನ್ನಪರಾಜಿತೇಶ್ವರಾ ||೮೧

ಅಱಸುವೆನೆನ್ನ ದೇಹದೊಳಗೆನ್ನನೆ ಕಾಣ್ಬೆನಮೂರ್ತಸಿದ್ಧನಂ |
ಪೊಱಗೊಳಗೆಲ್ಲಮಂ ತೊಳೆದು ತಿಂಗಳ ಪುತ್ಥಱಿಮಾಡಿ ನೋಡುವೆಂ ||
ತೞುಬುವೆನಲ್ಲಿಯೇ ಮನವನಾಗಳೆ ಬಾಹ್ಯಸಮಸ್ತಚಿಂತೆಯಂ |
ಮುೞಿವೆನನಂತಸೌಖ್ಯದೊಳಗೞ್ದಪೆನಾನಪರಾಜಿತೇಶ್ವರಾ ||೮೨

ಬಾಗದೆ ತೂಗದೋರೆ ಪುಗದೊಯ್ಯನೆ ಸೈಕನೆ ಕುಳ್ಳಿತಕ್ಕೆ[2]ನಿಂ(?) |
ದಾಗಲೆ ದೇಹಮೂಷೆಯನುಪಾಯದೊಳಾಂತು ತಪೋಗ್ನಿಗೊಡ್ಡಿ ಬೇ||
ಱಾಗಿರೆ [3]ಸೋರ್ಚೆ ಕರ್ಮ[4]ಮಯಣಾಕೃತಿಯಂ ಬೞಿಕಲ್ಲಿ ತೋಱುತಿ|
ರ್ಪಾಗಸಮೆಂದು ಕಾಣ್ಬೆನೊಳಗೆನ್ನನೆ ನಾಪರಾಜಿತೇಶ್ವರಾ ||೮೩

ಚೇತನನಾತ್ಮನಾಗಸಮಚೇತನಮೆಂಬಿನಿತಲ್ಲದೇ ಸ್ವರೂ |
ಪಾತಿಶಯಕ್ಕೆ ಭೇದವಿಡಲಿಲ್ಲ ನಭಕ್ಕೆಯುಮಾತ್ಮತತ್ವಕಂ ||
ಓತದಱುಂದ[5]ಮಾಗಸವೆ ತಾಂ ಪುರುಷಾಕೃತಿಯಾಯ್ತೊ ಎಂಬುಪಾ ;
ಯಾತುರಮಿಟ್ಟು ನೋೞ್ಪೆನೊಳಗೆನ್ನನೆ ನಾನಪರಾಜಿತೇಶ್ವರಾ ||೮೪

ಸಿದ್ಧರ ರೂಪಿನೊಳ್ಕ್ರಮದಲೆ ನೋಟದ ಸಾಧನೆ ಮಾಡಿಮಾಡಿ ಸಂ |
ಶುದ್ಧದೊಳಾನುಮಿಂತೆಯೆನುತಾಗಳೆ ತನ್ನನೆ ನೋಡಿ ನೋಡಿಯಾ ||
ಸಿದ್ಧರುಮಾನುಮೆಂಬೆರಡು[6]ಭೇದವಡಂಗಿ ನಿಜಾತ್ಮನಲ್ಲಿ ಸಂ |
ನದ್ಧರೊಳೈಕ್ಯವಾಗುವನೆ ಸಿದ್ಧನಲಾ ಅಪರಾಜಿತೇಶ್ವರಾ ||೮೫

ನಾಸಿಕದಗ್ರದೊ[7]ಳ್ನಿಲಸೆ ದೃಷ್ಟಿಗಳೊಪ್ಪೆ ಮನಂ ಲಲಾಟದೊಳ್ |

---

1. ದುಷ್ಟಿ. ಖ|| 2. ನಿಂದಾಗಲಿ. ಖ|| 3. ಸೋರ್ಚೆ. ಖ|| 4. ಮಯನಾ. ಖ||
5. ಮೆನಭಕ್ಕೆ. ಕ|| 6. ಸಂನಾರ್ದದೊಳೈಕ್ಯವಾ. ಖ|| 7. ಳ್ನಿಲಿಸಿ. ಖ||

ಸೂಸದೆ ಕೂರ್ಮನಂತೊಳಗಡಂಗಿರೆ ಮತ್ತಮಿಂದ್ರಿಯಂಗಳುಂ॥
ಶ್ವಾಸಮದೊಯ್ಯನಾಗಲೊಳಗೆನ್ನನೆ ನಾಂ ಪರಿಯಂಕಚಂದ್ರಭ ।
ದ್ರಾಸನಮಾದಿಯಾದವಱೊಳೀಕ್ಷಿಪೆನಿನ್ನಪರಾಜಿತೇಶ್ವರಾ ॥೮೬

ಕಲಿಗೆ ಮಹಾಬಲಂಗೆ ಮುಖಕುಕ್ಕುಟಕೂರ್ಮಸರೋಜವಜ್ರಕಂ ।
ಡಲಿಕೆಮಯೂರವೀರಮಕರೋತ್ಕುಟಿಕಾಸನಮಾದಿಯಾದಿವುಂ ॥
ಫಲಿಸುಗುಮಲ್ಪಶಕ್ತಿಗೆಸೆಗುಂ ಪರಿಯಂಕಮದೊಂದು ಮುಗ್ಗಲೊಳ್ ।
ಮಲಗಿಯುಮಾತ್ಮದೃಷ್ಟಿಯಹುದಾವುದವಂಗಪರಾಜಿತೇಶ್ವರಾ ॥೮೭

ಆಸನಸಂಕುಲಂಗಳನುಬಂಧದಿ ಜಾಡ್ಯಹರಂ ಪಟುತ್ವವೆ ।
ಲ್ಲೋಸರಿಕುಂ ಪುರಾಣರುಜೆ ಪೂರಕಕುಂಭಕರೇಚಕಂಗಳ ॥
ಭ್ಯಾಸಮೆ ಚಿತ್ತಮಂ ಸ್ಥಿರತೆಮಾಡಿ ವಿಕಲ್ಪಮನೊತ್ತುಗುಂ ಸಮಂ ।
ತೀಸಮುಕಟ್ಟು ಬೇಕು ನಿಜವಂ ಬಗೆವಂಗಪರಾಜಿತೇಶ್ವರಾ ॥೮೮

ಪ್ರೋಱ್ ಕೆಱೆಯೊತ್ತು ವಾರ್ಧಿತಟಮರ್ಹದಗಾರಮರಣ್ಯಮುಂ ವನಂ ।
ಪುಱಿಲಚಳಂ ಬಿಲಂ ಗುಹೆ ನಿಷೇಧಿಕೆ ಹಾಳ್ಮನೆ ರುದ್ರಭೂಮಿಯಿಂ ॥
ನುಱಿದ ವಿವಿಕ್ತಮಕ್ಕೆ ಪಶು ಷಂಡ ವಧೂ ಖಳಜಂತು ದಾರಿಗರ್ ।
ಸುಱಿಯದ ತಾಣಮಾದೊಡಿವು ಜಾನಕೆ ಲೇಸಪರಾಜಿತೇಶ್ವರಾ ॥೮೯

ಬಾರದ ಜಾನಮಂ ಬರಿಸಿಕೊಂಬ ಸುಸಾಧುಜನಕ್ಕಿವಲ್ಲವೇ ।
ಘೋರತಪೋಧನಂ ಬಗೆವನೇ ಮಱೆಗಾಳಿಸಿಡಿಲ್ಬಿಸಿಲ್ಗಳಂ ॥
ಸೀರುಡುಮಾವುಪೆರ್ಬುಲಿಗಳಂ ಪೆಱರಿಟ್ಟುಪಸರ್ಗಮಂ? ಮನೋ ।
ಧೀರದೆ ಗೆಲ್ದು ನಿತ್ಯಪದನಪ್ಪನಲಾ ಅಪರಾಜಿತೇಶ್ವರಾ ॥೯೦

ರಂಭೆಯೆ ಬಂದು ತಾಂ ಕೊರಲನಪ್ಪಿದೊಡಂ ಪುಳಕಂಗಳಾಗದೇ ।
ಕುಂಭಿಚಮೂರು ಬೃಂಹಿಸುತೆ ಘರ್ಜಿಸುತುಂ ಬರೆ ಬಲ್ಪುಗುಂದದೇ॥

ಜೃಂಭಿಸಿ ಕಾಡುಗಿಚ್ಚು ಕವಿಯುತ್ತಿರೆ ಬುದ್ಧಿ ಕಲಂಕದೇ ಶಿಲಾ।
ಸ್ತಂಭವೆನಲ್ಕೆಯೆನ್ನೊಳಗೆ ನಿಲ್ವನದೆಂದಪರಾಜಿತೇಶ್ವರಾ ॥೯೧

ಇರುತಿರುತಿರ್ದು ಚಿಂತಿಸಿ ಶರೀರದ ಕರ್ಮದ ರೂಪನಂತೆ ಕೊ।
ಕ್ಕರಿಸಿ ತಪೋಗ್ನಿಯಿಂ ಸುಡುವೆನೀಭವಬಂಧಮನೆಂದು ಧೈರ್ಯವಂ॥
[1]ಕುರಿಸೆ ಪರೀಷಹಂ [2]ಬಲಿಸಿ ದೇಹಮನೊಡ್ಡಿ ನಿಜಾತ್ಮದೃಷ್ಟಿಯೊಳ್।
ತೆರಳದೆ ನಿಂದು ಗೆಲ್ವವನೆ ಧನ್ಯನಲಾ ಅಪರಾಜಿತೇಶ್ವರಾ ॥೯೨

ಒಪ್ಪಿಸಿ ದೇಹಮಂ ತಪದ ತಾಪಕೆ ತನ್ನ ನಭಸ್ಸ್ವರೂಪಮಂ।
ನೆಪ್ಪಳಿವಪ್ಪಿಕೊಂಡು ನಿಲೆ ಲೋಕದ ಕಣ್ಗದು ಯೋಗಿವೇಷಮೋ॥
ಲೆಪ್ಪದ ರೂಪೊ ಕಲ್ಲ ಪರಿಜೋ ಎನೆ ತೋರ್ಪಿನಮಷ್ಟಕರ್ಮಮುಂ।
ಕಪ್ಪನೆ ಕಂದಿ ಬೆಂದು [3]ಪತನಂಬುಗದೇ ಅಪರಾಜಿತೇಶ್ವರಾ ॥೯೩

ಆದಿಯ ವಜ್ರಕಾಯದವರ್*ಗಲ್ಲದೆ ತಾಳ್ವದಶಕ್ಯಮುಷ್ಣವಾ।
ತಾದಿಪರೀಷಹಂಗಳನದೇಂ ಬಿಸವಂದಮೊ ಈಗಳುಂ ಕೆಲರ್॥
ಈದೊರೆಮೆಯ್ಯೊಳುಗ್ರತರಘೋರಮಹಾತಪಮಂ ನೆಗಳ್ಚುಗುಂ।
ಮೇದಿನಿಗೀಮುನೀಂದ್ರರೆ ಜಿನೇಂದ್ರರಲಾ ಅಪರಾಜಿತೇಶ್ವರಾ ॥೯೪

ನರಕದೊಳಟ್ಟಿ ಮೆಟ್ಟಿ ಕಡುಕಾಸುವ ಕೀಸುವ ಸರ್ವಬಾಧೆಯಂ।
ಸ್ಮರಿಸಿದೊಡೊತ್ತಿ ಹೇರಿ ಪಶುವಂ ಮೃಗವಾದೊಡೆಯೆಚ್ಚು ಕೊ
[ಚ್ಚುಗೋ॥
ಣರಿವುದನಬ್ಬೆಯುಬ್ಬರದ ಗಬ್ಬದೊಳುಬ್ಬಸದಿಂ ಬಳಲ್ದ ತಂ।
ನಿರವನೆ ಚಿಂತಿಪಂಗೆ ತಪದೊಳ್ಬೞಿಸೇಕಪರಾಜಿತೇಶ್ವರಾ ॥೯೫

ಸ್ವಾಮಿಕುಮಾರನಾಗಜಕುಮಾರಕನಾಸುಕುಮಾರನಾತ್ಮಜಿಂ।

---

1 ಕುರಿಸಿ. ಕ॥ 2 ಬಱಿಸಿ. ಖ॥ ತಪನಂಬಗೆವೆ. ಕ॥

ತಾಮಯ[1] ಸಂಜಯಂತಗುರುದತ್ತಚಿಲಾತಜಧರ್ಮಪುತ್ರರಾ ॥
ಸ್ವಾಮಿಸುವರ್ಣಭದ್ರಶಿವಭೂತಿಸುದರ್ಶನಪಾರ್ಶ್ವನಾಥರಾ ।
ನೇಮವಿದೆಂದು ನಿಂದೊಡಿ*ರ್ದೆಯೊಳ್ಭಯವೇಅಪರಾಜಿತೇಶ್ವರಾ ॥೯೬

ಮೆಯ್ಯ ನಿರಾಸೆ ಘೋರತಪಮುತ್ತಮಸಂಯಮಮಾತ್ಮತತ್ತ್ವಮಂ
ಕಯ್ಯೊಳಗಿರ್ದ ಕನ್ನಡಿಯ ನೋೞ್ಪವೊಲೀಕ್ಷಿಪ ಬೋಧೆ ಕೂಡಿದಾ
ಸಯ್ಯಮಿಗೆಲ್ಲ[2] ಕಾಂಕ್ಷೆಯಿದಱಂ ಕ್ಷಣದೊಳ್ಭವವೃಕ್ಷಮೂಲಮಂ ।
ಕೊಯ್ಯನೆ ಸುಟ್ಟು ತೂಱಿ ಶಿವನಾಗಿರನೇ ಅಪರಾಜಿತೇಶ್ವರಾ ॥೯೭

ಕವಿದ[3] ಮುಗಿಲ್ಗಳೇ ಪರೆಯಲೆಂದುಱೆ ಚಿಂತಿಸವೇೞ್ಕುಮಲ್ಲದೇ ।
ರವಿಗಧಿಕಪ್ರಕಾಶಗುಣಮಾಗಲಿಯೆಂದೆನವೇೞ್ಕಯಾತ್ಮನುಂ ॥
ಭವವಿಕೃತಾಷ್ಟಕರ್ಮವನೆ ನಷ್ಟವನೈದಿಪನೆಂಬುದಲ್ಲದೇ।
ಶಿವಸುಖಮೆಂಬುದಂ ಬಯಸಲೇಕೆ ನಿಜಕ್ಕಪರಾಜಿತೇಶ್ವರಾ ॥೯೮

ಶುದ್ಧನಿಜಾತ್ಮನಂ ಬಿಡದೆ ಕಾಣ್ಬ ಸುಭವ್ಯನ ಸೌಖ್ಯಮೆಂಬುದಾ ।
ಸಿದ್ಧರ ಸೌಖ್ಯದಂಶಮೆನವೇೞ್ಕುಮದಲ್ಲದೆ ನಾಗದೇವಮು ॥
ತ್ರ್ಯರ್ದ್ಧತಸೌಖ್ಯದಲ್ಲಿ ಸರಿಹೋಲಿಸಲಾಗದದೇಕೆ ಕರ್ಮಸಂ ।
[4] ಬದ್ಧವದಿಂತಿದಸ್ತಮಲವಪ್ಪುದಱಿಂದಪರಾಜಿತೇಶ್ವರಾ ॥೯೯

ಚಿಂತೆಯೊಳೊಂದಿದಾವ ಬ*ರ್ದುಕುಂ ಬಹುದುಃಖಮೆ ಎಂಬರೆಂದುಮಾ
ಚಿಂತೆಯ ಬಾೞೊಳೇ ಬ*ರ್ದುಕುತಿರ್ಪರದೇಕೆ ಸುಖಸ್ಥಳಾಂಧಕರ್ ॥
ಚಿಂತಿಪ ಮಾೞ್ಪ ಮಾತುಲಿವ ದಂದುಗವಿಲ್ಲದೆ ತನ್ನ ರೂಪಿನೊಳ್ ।
ಶಾಂತದೆ ತೆಪ್ಪಗಿರ್ಪ ಬಗೆದೋಱದಲಾಅಪರಾಜಿತೇಶ್ವರಾ ॥೧೦೦

1. ಸಂಜಿಯಂತ. ಖ॥ 2. ಕಾಂಕ್ಷೆಯಿದರೇಂ. ಕ॥
3. ಮುಗಿಲ್ಗಳಿಪರಿಯೆಲೆ. ಕ॥ 4. ಬಂಧ. ಕ॥

ನೋಡಿದು ಚಿತ್ರಮೀಕ್ಷಿಸುವುದೆನ್ನ ನಿಜತ್ವಮದರ್ಕೆ ದೇಹಮು ।
ಳ್ಳುಡದೆ ಕುಳ್ಳಿತಿರ್ಪ ಕೆಲಸಂ ದೊರೆಕೊಂಬುದು ಮೋಕ್ಷಮಿಂತಿದಂ ॥
ಮಾಡುವುದರ್ಕೆ ನಾನಲಸಿ ಮೆಯ್ಮನ ಮಾತುಗಳಂ ಬಯಲ್ಗೆ ಜೋ ।
ಡಾಡಿಸಿ ಕರ್ಮಮಂ ಕರೆವೆನಜ್ಞತೆಯಿಂದಪರಾಜಿತೇಶ್ವರಾ ॥೧೦೧

ಚಿಂತಿಸವೇಳ್ಪುದಂ ಬಿಡದೆ ಚಿಂತಿಕೆ ದೇಹದ ಕಷ್ಟಮಂ ಸುಖ।
ಭ್ರಾಂತಿಯನ್ನೈದು ಭೇದಭವಮಂ ನವಭೇದಪದಾರ್ಥಮಂ ವ್ರತಾ ॥
ನಂತವನರ್ಹದಾದಿಗಳ[1] ನಾತ್ಮನ ಕರ್ಮದ ರೂಪನೇಕೆನಲ್ ।
ಚಿಂತೆಯಿದಸ್ತು ಚಿಂತೆಯನೆ ಮಾಳ್ಪುದಱಿಂದಪರಾಜಿತೇಶ್ವರಾ ॥೧೦೨

ಅಳೆದಿರಿಸಿರ್ದುದಂ ಕುಡುವನಂತೆ ಪವಣ್ಣುಡಿಯಿಂದೆ ಭವ್ಯರಂ।
ತಿಳಿವುವ ಸುಮ್ಮನಿರ್ಪ ನಿಜಕಾರ್ಯಕೆ[2] ...ಮೃಗಂಬೊಲುರ್ವಿಯೊಳ್ ॥
ಪೊಳೆವ ನಿವಿಕ್ತಮಂ ಪುಗುವ ಚೈತನಿಧಾನವನೀಕ್ಷಿಪಾತನಂ ।
ತೊಳಗನೆ ಕಾಣ್ಬನೇ ಸಫಲಜನ್ಮನಲಾ ಅಪರಾಜಿತೇಶ್ವರಾ ॥೧೦೩

ಮೞೆ ಸುರಿವಾಗಳೆಂತು ಪನಿಗಾಳಸಿಡಿಲ್ದನಿಗಳ್ಕ ಬಾಹ್ಯದೊಳ್।
ಸುೞಿಯದೆ ಗೇಹದೊಳ್ಶಿಶುಗಳಿರ್ದಪುವಂತೆಲೆ ಯೋಗಿ ನೀನುಮಾ ॥
ಗ್ಗಳಿಪ ವಿಕಾರಜೃಂಭಣದ ದುಷ್ಷಮದೊಳ್ಪಱಗಾಡಬೇಡ ಪ।
ಜ್ಜಳಿಸುತೆ ನಿನ್ನೊಳಿರ್ದು ಜಯಿಸೆಂದೆಯಲಾಅಪರಾಜಿತೇಶ್ವರಾ॥೧೦೪

ನೀಡುದಿನಂ ನಿಜಾತ್ಮನನೆ ಭಾವಿಸಿ ಸಂಸ್ಕೃತನಾದ ಮೇಲೆ ತಾಂ ।
ನೋಡುವುದಲ್ಲಿಯೋ ತಿಳಿವುದಲ್ಲಿಯೆ ಪೊರ್ದುವುದಲ್ಲಿಯೋ ಪ್ರಿಯಂ॥
ಮಾಡುವುದಲ್ಲಿಯೋ ಸುಖಿಪುದಲ್ಲಿಯೆ ಅರ್ಚಿಪುದಲ್ಲಿಯೋ[3] ಮರ।
ಲ್ದಾಡುವುದಲ್ಲಿಯೋ ಪೊಱಗೆ ಮೆಚ್ಚನಲಾಅಪರಾಜಿತೇಶ್ವರಾ ॥೧೦೫

1. ನಾತ್ಮದ. ಖ॥ 2. ಪುರುಷ. ಖ॥ 3. ಮೊರಲ್ದಾ. ಖ॥

ಸಿರಿಯೊಳಗಂತದೇಂ ಸಿರಿ ಸುಖಕ್ಕದೆ ಸೌಖ್ಯವನೇಕತತ್ತ್ವದಾ ।
ತಿರುಳದೆ[1] ತಾನೆ ಕಟ್ಟಕಡೆ ಸರ್ವವಿಚಾರಕೆಯಿಂತೆನಲ್ಕೆ ಸ ॥
ದ್ಗುರುಗಳು[2] ಮೈವರಿರ್ದರದಱೊಳ್ವರದರ್ಶನಬೋಧವೃತ್ತಗಳ್ ।
ಪರಮತಪಂಗಳಲ್ಲಿ ನೆಲೆಗೊಂಡುದಱಿಂದಪರಾಜಿತೇಶ್ವರಾ ॥ ೧೦೬

ಬಹುವಚನಂಗಳೇಕೆ ಭುವನತ್ರಯಸಾರಮಿದಾತ್ಮತತ್ತ್ವಮು ।
ತ್ಸಹಪರನಾಗಿ ತಾನದನೆ ಭಾವಿಸುತಿರ್ದೊಡೆ ಮುಕ್ತಿಯೆಯ್ದುಗುಂ ॥
ಸಹಜಮಿದೊಂದೆ ಇನ್ನುೞಿದುವೆಲ್ಲವವೇಂ ವ್ಯವಹಾರವಾತ್ಮನಂ ।
ಪಹಿಸಿ ಭವಂಗಳೊಳ್ಬರಿಸುತಿರ್ಪವಲಾ ಅಪರಾಜಿತೇಶ್ವರಾ ॥೧೦೭

ಆವತಪಂಗಳುಂ ಶ್ರುತಮುಮಾಚರಣಂಗಳುಮಕ್ಕೆ[3] ತನ್ನ ಚಿ।
ದ್ಭಾವದ ನೋಟದೊಳ್ಪಡಿದು ಬಂದೊಡೆ ನಿರ್ಜರೆಮಾಳ್ಕುಮಷ್ಟಕ ॥
ರ್ಮಾವಳಿಯುಂ ಬೞಕ್ಕೆ ಶಿವಮಪ್ಪುದು ತಾನೆಯದಲ್ಲದಿರ್ದೊಡಾ ।
ಜೀವಕೆ ಪುಣ್ಯಬಂಧನವೆ ಮಾಳ್ಪವಲಾ ಅಪರಾಜಿತೇಶ್ವರಾ ॥೧೦೮

ಭವ್ಯನಭವ್ಯನಿರ್ವರುಮುದಗ್ರತಪೋವ್ರತಶಾಸ್ತ್ರದೊಳ್ಸಮಾ ।
ನವ್ಯವಸಾಯ[4]ರಪ್ಪರದಱಿಂ ಸುರಸಂಪದಮಪ್ಪುದಲ್ಲದೇ ॥
ಅವ್ಯಯಸಿದ್ಧಿಯಾಗದದು ತನ್ನಯ ಚಿತ್ತವನಾತ್ಮರೂಪದೊಳ್ ।
ಭವ್ಯತಪಸ್ವಿ[5]ಯೋಜಿಸಿದೊಡಪ್ಪುದಲಾ ಅಪರಾಜಿತೇಶ್ವರಾ ॥೧೦೯

ಮನೆಯೊಳೆ ಪೂಳ್ದ ತನ್ನೊಡಮೆಯುಂ ತೆಗೆದುಕೊಳ್ಬಡೆ ಪುಣ್ಯಮಿಲ್ಲದಂ।
ಧನಿಕರ ಪೊರ್ಘ ಬೇಡಿದೊಡೆ ಈವರೆ ಇತ್ತೊಡುಣಲ್ಕೆ ಸಾಲ್ವನೇ॥
ತನುವಿನೊಳಿರ್ದ ತನ್ನನುಱಿ ಕಾಣ್ಬೊಡೆ ಭವ್ಯತೆಯಿಲ್ಲದಿರ್ದವಂ ।
ಮುನಿಮತ[6]ವೈದಿಯುಂ ಶಿವವನೆಯ್ದುವನೇ ಅಪರಾಜಿತೇಶ್ವರಾ ॥೧೧೦

1. ತಿರುಳದು. ಖ॥ 2. ಮೂವರಿರ್ದ. ಖ॥ 3. ನನ್ನ. ಖ॥
4. ಮಪ್ಪುದ. ಕ॥ 5. ಯೋಜಿಸಿ. ಖ॥ 6. ವೇದಿಯ. ಖ॥

ಅಶುಭಶುಭಂಗಳೆಂಬೆರಡು [1][ಯೋಗಮನೀವ ವ್ರತಾವ್ರತಂಗಳೊಳ್] ।
ವಿಶದಮಿವಿಂತು[ಸುಸ್ಮೃತಿ]ಯ ಮಾೞ್ಪವು ದುಃಖಸುಖಸ್ವರೂಪದೊಳ್ ॥
ಅಶುಭವನೊಲ್ಲದಾಶುಭದೊಳಿರ್ದದನಂ ತೊಱೆದಾತ್ಮನೊಳ್ಮನೋ ।
ವಶನೆನೆ ಶುದ್ಧಯೋಗಮಿದು ಸಿದ್ಧಿಯಲಾ ಅಪರಾಜಿತೇಶ್ವರಾ ॥೧೧೧

ವ್ರತತತಿಯಿಲ್ಲದಂದು ಪವಣಿಲ್ಲ ಮನಕ್ಕದಱಿಂದೆ ಪಾಪಮಾ ।
ವ್ರತತತಿಯುಳ್ಳೊಡಂತದನೆ ಪಾಲಿಪೆನವ್ರತಮಂ ಕಿಡಿಪ್ಪೆನೆಂ ॥
ಬತಿಮತಿಯುಳ್ವನಂ ಸುಕೃತಮುಕ್ಕುಮದುಂ ಭವಬೀಜಮೀಮನಃ ।
ಕ್ಷಿತಿ ಕಿಡೆ ತನ್ನೊಳಿರ್ದೊಡದೆ ಸಿದ್ಧಿಯಲಾ ಅಪರಾಜಿತೇಶ್ವರಾ ॥೧೧೨

ಅಧ್ಯಯನಂಗಳಿಂ ವ್ರತವಿಚಿಂತನೆಯಿಂ ಸ್ತುತಿಯಿಂ ಪ್ರಬೋಧೆಯಿಂ ।
ಸಾಧ್ಯಮನಸ್ಕನಾಗಿ ನಿಜರೂಪಮನಪ್ಪಿದವಂಗೆ ಬೇಱೆ ಮ ॥
ತ್ತಧ್ಯಯನಾದಿಗಳ್ಮಱೆಯವಾವ ವಿಕಲ್ಪಮುಮಿಲ್ಲ ಲೋಕಕಾ ।
ರಾಧ್ಯನವಂಗೆ ಪೂಜ್ಯಗುಣರಿಲ್ಲವಲಾ ಅಪರಾಜಿತೇಶ್ವರಾ ॥೧೧೩

ಪಗರಣದಾಟಮೆಂದು ಜಗಮಂ ಸಲೆ ನೋಡುತೆ ದುರ್ವಿಕಲ್ಪಮಂ ।
ತೆಗೆದು ಬಿಸಾಡುತುಂ ನಿಜಚಿದಾತ್ಮನನೀಕ್ಷಿಸುತುಂ ವಿಶೋಧಿಯೊ ॥
ಳ್ಮಗೆ ಮುಳುಗಾಡುತುಂ ಶಮರಸಾಮೃತಮಂ[3] ಸವಿಯುತ್ತೆ ತನ್ನ ತಾಂ ।
ನಗುತೆ ವಿಳಾಸದಿಂ ತಪಿಸುವಂಗೆಣೆ[4] ಯಾರಪರಾಜಿತೇಶ್ವರಾ ॥೧೧೪

ಮೂಱು ಶರೀರದೊಳ್ತೊಡೆಯದಂತರದಾತ್ಮನೊಳೈಕ್ಯವಾಗಿ ಬಂ ।
ದೇಱುವ ದುಷ್ಪರೀಷಹ[5]ವದಂಗಕೆನುತ್ತುಪಶಾಂತನಪ್ಪುದುಂ ॥
ಜಾಱುಗುಮೊಯ್ಯನೊಯ್ಯನೆ ಚಿದಾವರಣಾದಿಗಳಾತ್ಮಸಿದ್ಧಿ ಮೆ ।
ಯ್ದೇಱುಗುಮೊಯ್ಯನೊಯ್ಯನಿದೆ ಯುಕ್ತಿಯಲಾ ಅಪರಾಜಿತೇಶ್ವರಾ ॥

1. ಯೋಗಮೀವಸುವ್ರತವ್ರತಂಗಳೊಳ್. ಕ॥ಖ॥ 2. ಸಂಶ್ರುತಿ. ಕ॥ಖ॥
3. ಸುಖಸುತ್ತೆ. ಖ॥ 4. ಯೇಅ. ಖ॥ 5. ಪರೀಷಹನಂಗಕೆ. ಖ॥

ನೋಡುವ ನೋಡಿ ಲಾಲಿಸುವ ಲಾಲಿಸುತಾತ್ಮಸುಖಕ್ಕೆ ವಿಸ್ಮಯಂ ।
ಮಾಡುವ ಮಾಡಿ ಮೆಚ್ಚುವ ನಿಜಾತ್ಮನೊಳಾಗಳೆ ಮೆಚ್ಚುತೈಕ್ಯದಿಂ ॥
ಕೂಡುವ ಕೂಡಿ ಮೆಯ್ಮಱೆವ ತನ್ಮಯನಾಗುತೆ ತಾನೆ ತನ್ನೊಳೋ ।
ಲಾಡುವ ಯೋಗಿಯೇ ಅಮೃತಭಾಗಿಯಲಾ ಅಪರಾಜಿತೇಶ್ವರಾ ॥೧೧೬

ಇಂಗಡಲೊಳ್ಮುಳುಂಗಿದವೊಲಿರ್ಪುದು ಮೇಘವಡಂಗಿದಚ್ಚವೆ ।
ಳ್ದಿಂಗಳ ಕಾಂತಿಯೊಳ್ಬೆರಸಿದಂತೆವೊಲಿರ್ಪುದು ಸಿದ್ಧರಾಶಿಯೊಳ್ ॥
ಸುಗತವಾದವೊಲ್ಮೆಱೆವುದಾತ್ಮನೊಳಾತ್ಮನನಾತ್ಮನಿಂದೆ ಕಂ ।
ಡುಂಗಱಿವಂದದಿಂ ನುಡಿಯಲೆನ್ನಳವೇ ಅಪರಾಜಿತೇಶ್ವರಾ ॥೧೧೭

ಅವನ ಬರ್ದುಂಕೆ* ತಾಂ ಬರ್ದುಕು* ಜನ್ಮವದೇ ಸಫಲಂ ವಿಶಿಷ್ಟಲಾ ।
ಭವ್ಯಮುದೆ ಸರ್ವಸಿದ್ಧಿಗದು ಮೊತ್ತಮೊದಲ್ಸವಿಚಾರಕೋಟಿಗೆ ॥
ಲ್ಲವಱೊಳದೊಂದೆ ಕಟ್ಟಕಡೆ ತನ್ನೊಳೆ ತನ್ನನೆ ತಾನೆ ಕಂಡು ಬಾ ।
ಳ್ವವನುಱಿದಿರ್ದವಂಗೆ ಭವವೆತ್ತಣದಿನ್ನಪರಾಜಿತೇಶ್ವರಾ ॥೧೧೮

ತನುವಿನೊಳಿರ್ದ ಸಿದ್ಧಸದೃಶಾತ್ಮನನೀಕ್ಷಿಸುತುಂ ವಿಶೋಧಿ ಸಂ ।
ಜನಿತದೊಳೇನನಾಡಿದನದೆಲ್ಲಮುಮಾಗಮಮೆಲ್ಲರಿಚ್ಚೆ ಹೆ ॥
ಚ್ಚಿನ ಕಳೆ ಕರ್ಮನಿರ್ಜರೆ ಜಗತ್ತ್ರಯವಲ್ಲಭನಪ್ಪ ಕಜ್ಜವಿ ।
ನ್ನಿನಿತಿನಿತೆಂದದರ್ಕೆ ಮಿತಿಮಾಡುವರಾರಪರಾಜಿತೇಶ್ವರಾ ॥೧೧೯

ರವಿನಡೆದತ್ತಲಿಲ್ಲ ಬೆಳಗಲ್ಲದೆ ಕತ್ತಲೆಯುಂಟೆಯಾತ್ಮತ ।
ತ್ತ್ವವೆ ಮನದಲ್ಲಿ ನಟ್ಟು ನುಡಿವಾತನ ಮಾತುಗಳೆಲ್ಲ ಮೋಕ್ಷಮಾ ॥
ರ್ಗವೆಯವನೆಲ್ಲಿ ನಿಂದನದು ತೀರ್ಥವವಂ ನಡೆದತ್ತ ಸರ್ವರು ।
ತ್ಸವಮಿದು ನಿಮ್ಮ ಮಾರ್ಗದ ರಹಸ್ಯವಲಾ ಅಪರಾಜಿತೇಶ್ವರಾ ॥೧೨೦

ಆರಿದನೊಲ್ದು ಕೈವಿಡಿದರಾರಿದನೀಕ್ಷಿಸಿದರ್ ಯಥಾರ್ಥದಿಂ ।

ದಾರಿದರಲ್ಲಿಯೇ ಲಯುವನೆಯ್ದಿ ನಿಜಂಬಡೆದರ್ ಜಗಕ್ಕಿದಂ ||
ಆರನುಶಾಸನಂಗೊಳಸದರ್ ಜಿನ ನೀನೆ ಜಗತ್ರಯೈಕವಿ |
ಸ್ತಾರಿತವಸ್ತುವಂ ಬೆಳಗಿದೈ ಕೃಪೆಯಿಂದಪರಾಜಿತೇಶ್ವರಾ ||೧-೧

ಚೆಲುವರ ಚೆಲ್ವ ಚೆನ್ನಿಗರ ಚೆನ್ನ ಸುವೀರರ ವೀರ ಸತ್ಕಲಾ |
ಬಲರ ಬಲಾಢ್ಯ ಬಲ್ಲಿದರ ಬಲ್ಲಹ ದೇವರ ದೇವ ನೀತಿನಿ ||
ರ್ಮಲರ ನಿಧಾನ ನಿಚ್ಚಮುದವಕ್ಕಳ ಮಾಣಿಕ ಶಾಂತಿ ಶಾಂತಿಶೀ|
ತಲರ ಶಿರೋಮಣೀ ನಿನಗೆ ಪಾಸಟಿಯಾರಪರಾಜಿತೇಶ್ವರಾ ||೧-೨

ಜಡಮತಿಯೈಸೆ ನಾಂ ವರಮ[1]ನಿಮ್ಮ ಗುಣಂಗಳನೆಲ್ಲಮಂ ಮನು |
ಬಿಡಿಯೆ ಸಮರ್ಥನಲ್ಲೆನದಱಿಂ ಕಿಱಿದಂ ಪಿಡಿದಿರ್ಪೆನೆಂತೆನಲ್ ||
ಕೊಡದೊಳಗೆಷ್ಟು ನಿಲ್ವುದು ಸಮುದ್ರಜಲಂ ವರಕಾಂಚನಾದ್ರಿ ಕಂ|
ನಡಿಯೊಳಗೆಷ್ಟು ತೋರ್ಪುದವಧಾರಿಸು ನೀನಪರಾಜಿತೇಶ್ವರಾ||೧-೩

ಬಂದೊಲವಿಂದೆ ನಿನ್ನಿದಿರೊಳೊಪ್ಪದೆ ನಿಂದು ಕರಂಗಳಂ ನೊಸ |
ಲ್ಗೊಂದಿಸಿ ದೇವದೇವ ಕರುಣಾಕರ ಬಿನ್ನಪಮಾತ್ಮ[2]ಸಿದ್ಧಿಯಿಂ ||
ನೆಂದೆನಗಪ್ಪುದೆಂದೊಡೆಲೆ ಕಂದ ಕಡಂಗದಿರಿಂದು ನಾಳೆ[3]ನ |
ಮ್ಮಂದಮೆಯಪ್ಪೆಯೆಂಬ ನುಡಿಗೇಳ್ವೆನದೆಂದಪರಾಜಿತೇಶ್ವರಾ ||೧-೪

ಮುನ್ನಮನೇಕರಂ ಭವದಿನೆತ್ತಿ ಯಶೋನಿಧಿಯಾದೆಯಾ[4]ದೊಡೇಂ |
ನಿನ್ನದಯಾಗುಣಕ್ಕದು ವಿಶೇಷಮೆ ಮೂರ್ಖನನಾಥನ ರೌದ್ರನಂ||
[5]ನನ್ನ ಪವಿತ್ರಮಾಡಿದೊಡೆ ದೊಡ್ಡವೆಸರ್ಪನಕೀರ್ತಿ ದೇವ ಬಾ |
ತೆನ್ನದಿ[6]ರೊಪ್ಪುಗೊಳ್ಳಗದಿರೈ ಶರಣಾಗಪರಾಜಿತೇಶ್ವರಾ ||೧-೫

---

1. ನಿನ್ನ. ಖ|| 2. ಸಿದ್ಧಿಯಂ. ಕ|| 3. ಯೆಮ್ಮಂ. ಕ||
4. ದೊಡಂ. ಕ|| 5. ಯೆನ್ನ ಪವಿತ್ರಮಾಡಿ. ಕ|| 6. ಗೊಪ್ಪು. ಕ!

ಶ್ರೀಶುಭವೆತ್ತ ಮೇರುನಗದಿಂದ್ರದಿಶಾಸ್ಥಿತವತ್ಸಕಾವತೀ ।
ದೇಶದೊಳಿರ್ದಪ್ಪೈ ವಿಜಿತಘಾತಿಚತುಷ್ಕ ಜಗತ್ರ[1]ಯಾರ್ಚಿತಾ ॥
ಲೇಶಮದಾದೊಡಂ ಪುದಿದ ಪುದ್ಗಲದಲ್ಲಿರಲಾರೆನೈಯ್ಯ ಸ॥
ರ್ವೇಶ ಶರಣ್ಯ ಗಣ್ಯ ತಳುವೇಂ ಶರಣಾಗಪರಾಜಿತೇಶ್ವರಾ ॥೧೦೭

ತ್ರಿಜಗತ್ಸ್ವಾಮಿಗಳಿರ್ದಪರ್ಧರೆಯೊಳೀಗಳೂದ್ಧರವಲ್ಲಿದೊರ್ಡೀ ।
ವಿಜಯಾರ್ಧಂ ಹಿಮವದ್ದ್ವಯಂ ನಿಷಧಮೆಂಬೀನಾಲ್ಕುಪೆರ್ಗೋಡೆಗಳ್॥
ಪ್ರಜೆಗಡ್ಡೈಸಿದವೈಸೆ ಕ್ಷಾಣ್ಬ್ರಿಮುಡುತಾರ್ರಾಧನಂ ಮಾಡಿರಿಂ ।
ನಿಜದಿಂದೆಮ್ಮಪರಾಜಿತೇಶ್ವರನುಮಂ ಶ್ರೀಮಂದರಸ್ವಾಮಿಯುಂ॥೧೦೮

ಅಪರಾಜಿತೇಶ್ವರ ಶತಕಂ ಸಮಾಪ್ತಂ.

---

1. ಯಾರ್ಜಿತಾ, ಕ॥ ಕೊನೆಯ ಶ್ಲೋಕ ಕ॥ ಪುಸ್ತಕದಲ್ಲಿಲ್ಲ.

II.

# ರತ್ನಾಕರಕವಿವಿರಚಿತಂ

## — ಅ ಪ ರಾ ಜಿ ತೇ ಶ್ವ ರ ಶ ತ ಕಂ —

II.

## ರತ್ನಾಕರಕವಿವಿರಚಿತಂ

## — ಅಪರಾಜಿತೇಶ್ವರಶತಕಂ —

ಶ್ರೀ ಕುಲಮಾಪ್ತಗೋತ್ರಮಮಲಾಂಗಮತೆಂದ್ರುತೆ ಸಮ್ಯಗಾಯು ವಿ ।
ದ್ಯಾಕುಶಲತ್ವಮಾದೊಡಮಿದೆನ್ನದಿದನ್ಯಮೆನುತ್ತೆ ಕಂಡು ನಿ ॥
ರ್ವ್ಯಾಕುಲನಾಗಿಯೆಲ್ಲಮನಗಲ್ದು ಮಣಿತ್ರಯಸಂಪದಕ್ಕೆ ರ ।
ತ್ನಾಕರನಾದವಂ ತವಕ್ಕೆಪಾತ್ರನಲಾ ಅಪರಾಜಿತೇಶ್ವರಾ ॥೧

ನಂಬುವುದೇಳು ತತ್ವಮನದುತ್ತಮದೃಷ್ಟಿ ತದರ್ಥಮಂ ನಯಾ ।
ರ್ಥಂ ಬರೆ ನೋಡಿ ಭೇದಿಪುದದುತ್ತಮಬೋಧಮಹಿಂಸೆಯುಲ್ಲಿ ಮಾ ॥
ರ್ಗಂಬಿಡದಿರ್ಪುದುತ್ತಮಚರಿತ್ರಮಿವಿಂತು ಮಣಿತ್ರಯಂ ತಪೋ।
ಯಾಂಬುಧಿಯಾವುದುತ್ತಮತಪಂಗಳಲಾ ಅಪರಾಜಿತೇಶ್ವರಾ ॥೨

ಮೂಜಗವೆಂಬ ಗೇಹದೊಳ್ ತುಂಬಿದ ವಸ್ತುಗಳಾಱು ಕಾಯಮೈ ।
ದೋಜೆಯ ತತ್ವಮೇಳು ನವಭೇದಪದಾರ್ಥಮಿವಂ ತಪಸ್ವಿ ಸಂ ॥
ಯೋಜಿಸಿ ಕೂಡೆ ಕೂಡೆ ಪರಿಭಾವಿಸಿ ತನ್ನನೆ ಕಾಣ್ಬುದರ್ಕೆ ಚೇ ।
ತೋಜಯನಾಗಬೇಕು ಮೊದಲೆಂದೆಯಲಾ ಅಪರಾಜಿತೇಶ್ವರಾ ॥೩

ಬಱಿಕಣುಪೆಕ್ಕೆ ಪನ್ನೆರಡಱಲ್ಲಿ ಚತುಷ್ಕದ ಧರ್ಮಜಾಗದೊಳ್ ।
ಸುಱಿಸುಱಿದಾಡಿ ಕೂಡೆ ಗುರುಪಂಚಕದೊಳ್ಪೊಳೆದಾಡಿ ಚಿತ್ತದ ॥

ಗ್ಗಱಿಮನಡಂಗಿಸುತ್ತೊಡನೆ ತನ್ನಯ ದೇಹದೊಳಾತ್ಮನಲ್ಲಿ ನಿಂ ।
ದೆಱಲಱಿದಿರ್ದವಂ ತಪಕ್ಕೆಪಾತ್ರನಲಾ ಅಪರಾಜಿತೇಶ್ವರಾ ॥೪

ಆಪದದೊಳ್ ಕ್ಷಣಕ್ಷಣಕೆ ಕರ್ಮಸಮೂಹಕೆ ಹಾನಿ ಸದ್ಗುಣೋ ।
ದ್ದೀಪಿಕೆಯಪ್ಪುದೋದಿನ ಪರಿಶ್ರಮಮುಂ ತಪದುಬ್ಬೆಯುಂ ಸುಧಾ॥
ರೂಪಮನೆಯ್ದುತಿರ್ಕುಮದಱಿಂದದನೇ ಸಕಲಪ್ರಯತ್ನದಿಂ ।
ಸ್ಥಾಪಿಸಿ ಮುಕ್ತಿಯಂ ಪಡೆವುದೆಂದೆಯಲಾ ಅಪರಾಜಿತೇಶ್ವರಾ ॥೫

ಅದು ಲಘುಕರ್ಮಿಗಾತ್ಮತನುಭೇದವಿಚಾರದೊಳೞ್ತಿಯುಳ್ಳವಂ ।
ಗುದಯಿಪುದಲ್ಲದೇ ಸಕಲಶಾಸ್ತ್ರಮನೋದಿದೊಡಂ ತಪಂಗಳೊ ॥
ಳ್ಪುದಿದೊಡವಾಗದಂತದಱಿನಾರುಚಿಯುಳ್ಳವನೇ ಭವತ್ಪ್ರಸಾ ।
ದದ ಸುಖಿಯೆಂದು [1]ಮೆಚ್ಚಿ ಪರಿಕೀರ್ತಿಪೆನಾನಪರಾಜಿತೇಶ್ವರಾ ॥೬

ಭೇದವಿಚಾರಮೆಂತೊ ತನುಮೂಱುವರಲ್ಲಿಯೆ ಕರ್ಮ[2]ವೆಂಟವೇ ।
ವೇದನೆಗಿಂಬುಗಳ್ಕಡೆಗಚೇತನರೂಪಿಗಳಾತ್ಮನಿಲ್ಲಿ ಪಿ ॥
ತ್ರೋದಯನಾಗಿ ಬಾಳ್ದಪನವಂ ಸುಖಿ ಚಿನ್ಮಯನೆಂದು ಬುದ್ಧಿಯಿಂ ।
ಭೇದಿಸಿ ಬೇಱೆಗೆಯ್ದೊಳಗೆ ನೋೞ್ಪುದಲಾ ಅಪರಾಜಿತೇಶ್ವರಾ ॥೭

ಪೊಱಗಿದು ಧಾತುರೂಪದೊಡ[3]ಲಿಂತೆರಡುಂಟೊಳಗೊಂದು ತೇಜದಿಂ ।
ತುಱುಗಿದ ತೈಜಸಾಂಗವೊಡನಷ್ಟಮಲಾಶ್ರಿತಕಾರ್ಮಣಾಂಗವೊಂ ॥
ದುಱೆ ಪೆಸಱಿಂದೆ ಬೇರ್ಪಡಿಸಬರ್ಪುದು ರೂಪದೆ ಮಿಶ್ರಿತಂಗಳೀ ।
ಸೆಱೆವನೆ ಮೂಱಱೊ[4]ಳ್ಪುದಿದನಾತ್ಮನಹೋ ಅಪರಾಜಿತೇಶ್ವರಾ ॥೮

1. ಪೆರ್ಚೆ. ಖ॥ 2. ವೆಂಟಿರಲೊಡನೆಗಿಂಬುಗಳ್. ಖ॥
3. ನಿಂದೆರಡುಂ. ಖ॥ 4. ಳ್ಸಿಲ್ಕಿದ ಜೀವನಹೋ. ಕ॥

ಆಗುತೆ ಪೋಗುತಿರ್ಪುದಿದು ಬಾಹ್ಯಶರೀರಮನೇಕರೂಪದಿಂ ।
ಯೋಗಿವಿಯೋಗಿಗಪ್ಪ ಪದಿನಾಲ್ಕುಗುಣಸ್ಥಲಕಾಲಕಲ್ಲದೇ ॥
ಪೋಗದು ತೈಜಸಂ ಪುದಿದ ಕಾರ್ಮಣಮುಂ ಸಲೆ ಭೇದಭಾವನೋ ।
ದ್ಯೋಗಮನಿಂದು ತೊಟ್ಟೆಸೆಗವೇೞ್ಕುಮದರ್ಕಪರಾಜಿತೇಶ್ವರಾ ॥೯

ಕಳೆದು ಸಮಸ್ತಬಾಹ್ಯರತಿಯಂ ಮನದುತ್ಸವದಿಂದೆ ಗೂಢನು ।
ಸ್ಥಳದೊಳಗಿರ್ದ ತನ್ನೊಳಗೆ ತನ್ನಯ ರೂಪನೆ ನಿರ್ಮ್ಮ ರೂಪಿನಾ ॥
ಪಳುಕಿನ ಬೊಂಬೆಯಂದವೆನುತುಂ ನೆನೆದೀಕ್ಷಿಸುವಂಗೆ ಚಿತ್ತದೊಳ್ ।
ಪೊಳೆಯದೆ ಮಾಣ್ಬುದೇ ಪರಮಸಿದ್ಧನ ರೂಪಪರಾಜಿತೇಶ್ವರಾ ॥೧೦

ತನು ಜಿನಗೇಹವೆಂಬುದೊಳಗಿರ್ದ ನಿಜಾತ್ಮನೆ ದೇವನೆಂಬುದಾ ।
ತನು ಪರಿಮಾಣನೆಂಬುದಶರೀರಕನೆಂಬುದು ಬೋಧದರ್ಶನಂ॥
ತನುವೆನಿಸಿರ್ದನೆಂಬುದಕಲಂಕನಬಾಧನಖಂಡನೆಂಬ ಭಾ ।
ವನೆಯನೆ ಭಾವಿಸುತ್ತಿರೆ ಭವಚ್ಯುತಿ ತಾನಪರಾಜಿತೇಶ್ವರಾ ॥೧೧

ಮೊದವೊದಲಾಸರಪ್ಪುದೊಡನೊಪ್ಪಿರೆ ಸಂತಸಮಪ್ಪುದಂತು ಮಾ।
ಣದೆ ಪರಿಭಾವಿಸುತ್ತಿರೆ ಮಹಾಸುಖಮಪ್ಪುದು ಬಾಹ್ಯದಾಟದೊಳ್ ॥
ಬೆದಱಿಕೆಯಪ್ಪುದಾತ್ಮನೊಳೆ ಮೆಚ್ಚುಗೆಯಪ್ಪುದು ಲೋಕಮೆಲ್ಲ ಮಾ।
ಯದ ಮರುಳಾಗಿ ತೋರ್ಪುದು ನಿಜಾತ್ಮರತಂಗಪರಾಜಿತೇಶ್ವರಾ ॥೧೨

ನುಡಿ ಕಿಱಿದಪ್ಪುದೂಟದೊಳರೋಚಕಮಪ್ಪುದು ಬಾಹ್ಯಗೋಷ್ಠಿ [ಯೊಳ್।
ಸಿಡಿಮಿಡಿಯಪ್ಪುದಂತೆ ಬಹಿರಂಗದ ನೋಟಕೆ ಕಣ್ಗಳೊಲ್ಲವಾ ॥
ಕಡುಪಿನ ಕಾಲ್ಗಳಾಟವಡಕಕ್ಕೊಳಗಪ್ಪುದು ಬುದ್ಧಿ ಮುಕ್ತಿಯಂ ।
ತುಡುಕುತುಮಿರ್ಪುದಲ್ತೆ ಪರಮಾತ್ಮರತಂಗಪರಾಜಿತೇಶ್ವರಾ ॥೧೩

ಪೊಱಗೆ ತಪಂಗಳಾಱಱ ಸಹಾಯತೆ ಬೇಕು ಶರೀರಮೋಹಮಂ ।
ತೊಱೆಯಲೆಬೇಕು ಭಾವನೆಯ ಶಾಸ್ತ್ರವಿಲೋಕಿತೆ ಬೇಕು ನಿಚ್ಚಮುಂ ॥
ನೆಱೆವ ವಿರಕ್ತಿ ಬೇಕು ರಿಪುಬಂಧುಗಳೊಳ್ಸರಿಗಾಣಬೇಕು ಕಂ ।
ಡೆಱೆದು ನಿಜಾತ್ಮನಂ ಬೆಲಿಸದೀಕ್ಷಿಸುವಂಗಪರಾಜಿತೇಶ್ವರಾ ॥೧೪

ಮೈಯ್ಯೊಳಗೆನ್ನೆಗಂ ಮಮತೆಯುಂಟವನನ್ನೆಗಮುಗ್ರಕಾಲನಾ ।
ಕೈಯ್ಯೊಳಗಿರ್ದ ಪಕ್ಕಿ ವಿಷಯಂಗಳ ಮೆಚ್ಚಿದವಂ ವಿಷಾಗ್ನಿಯೊಳ್ ॥
ಬೆಯ್ಯನೆ ಬೆಂದವಂ ಬಹುಕಷಾಯಮನೊತ್ತಿ ಕಟ್ಟಿದಾತನ ।
ಯ್ಯಯ್ಯೊ! ಮುಳುಂಗಿದಂ ನರಕದೊಳ್ಪಲವೇನಪರಾಜಿತೇಶ್ವರಾ ॥೧೫

ತನು ಪಗೆಯೆಂಬವಂ ವ್ರತಯುತಂ ವಿಷಯಂ ವಿಷಮೆಂದು ಬಿಟ್ಟವಂ ।
ವಿನುತತಪಸ್ವಿ ಕೋಪವಿಡಿದಿರ್ದ ಕಷಾಯಕೆ ದೂರನಾದ ಶಾಂ ॥
ತನೆ ಸಕಲಾತ್ಮರಕ್ಷನಿನಿತುಂ ಗುಣಸಂತತಿಗೂಡಿ ತತ್ವಭಾ ।
ವನೆಯೊಳೆ ಬಾಳ್ವನೇ ಶಿವನಮಂಗೆಣೆಯಾರಪರಾಜಿತೇಶ್ವರಾ ॥೧೬

ಉಂಬನಿತರ್ಕೆ ಕೊಟ್ಟು ಪಗೆಯೊಳ್ಪಲವ್ರಂ ತೆಱದಿಂದೆ ಸೇವೆಯಂ ।
ಕೊಂಬ ವಿವೇಕಿಯಂತೆ ವಿರಸಾನ್ನಮನೇ ತನುವಿಂಗೆ ಜೋಕೆಯಿಂ ॥
ತುಂಬಿ ಜಪಂ ತಪಂ ಪರಮಶಾಸ್ತ್ರರಹಸ್ಯದೊಳಾತ್ಮಕಾರಮಂ ।
ಬೆಂಬಿಡದಾವಗಂ ನೆ*ಗಳ್ವವಂಗೆಣೆಯಾರಪರಾಜಿತೇಶ್ವರಾ ॥೧೭

ಉಂಬುದು ನೀರಸಂ ಪೊಱೆವುದೊಂದೊಡಲಿರ್ಪುದು ಗೂಢವಾಸವಾ ।
ಡುಂಬೊಲನೇಳುತತ್ವಮೊಳುಮಾತು ಸರಸ್ವತಿಯೊಳ್ನಿರಂತರಂ ॥
ಹಂಬಲಪ್ರಣಾಶದೊಳಗೀಕ್ಷಣಮಾತ್ಮನೊಳಾಗಿ ಬಾಳ್ವ ಧೀ ।
ರಂ ಬಹುಕರ್ಮಮಂ ಕ್ಷಣಕೆ ಖಂಡಿಸನೇ ಅಪರಾಜಿತೇಶ್ವರಾ ॥೧೮

ತನ್ನೊಳೆ ತನ್ನ ನೋಟ್ಪ ಬುಧಗಣ್ಯರ ನೋಟವುದೇಕೆ ಚಿದ್ಗುಣೋ|
ತ್ಪನ್ನಸುಧಾನ್ನಮುಣ್ಬ ಮುನಿಗೊಳ್ಳುಣಿಸೆಂಬ ವಿವಕ್ಷೆಯೇಕೆ ಸಿ ॥
ದ್ಧನ್ನಮ ಎಂಬ ವಾಕ್ಯಮಿರೆ ಬೇರ್ನುಡಿಯೇಕೆ ನಿಜಾತ್ಮರೂಪದೊಳ್ |
ನಿನ್ನೊಡನಾಡುವಂಗುಱದ ಗೋಷ್ಠಿಗಳೇಕಪರಾಜಿತೇಶ್ವರಾ ॥೧೯

ಬಿಡದೆ ಕಷಾಯಮುಂ ಸುಡದೆಯಿಂದ್ರಿಯತೃಷ್ಣೆಗಳಂ ಪರೀಷಹ |
ಕ್ಕೊಡನಿದಿರಾಗಿ ಗೆಲ್ಲದೆ ಸುಗುಪ್ತಿಗಳಂ ಪುಗದಾತ್ಮನಂ ಮಲಂ ॥
ಬಿಡಿದೊಡಲಿಂದೆ ಬೇರ್ಪಡಿಸಿ ನೋಡದೆ ಸುಮ್ಮನೆ ಕರ್ಮಶತ್ರುವೇ |
ಬಿಡು ಬಿಡು ಪೋಗೆನಲ್ನುಡಿಗೆ ಪೋದಪುದೇ ಅಪರಾಜಿತೇಶ್ವರಾ ॥೨೦

ಪುರುಪರಮೇಶರಾದಿಯೆನೆ ತೀರ್ಥಕರರ್ಮೊದಲಾಗಿ ಕಾನನಾಂ |
ತರದೊಳಗದ್ರಿಯೊಳ್ ಚಳಿಯೊಳಾತಪದೊಳ್ಮಳೆಯೊಳ್ ಕ್ಷುಧಾತೃಷಾ ॥
ಭರಮನಡರ್ತು ಗೆಲ್ದಡೆ ಜಿನೇಶ್ವರರಾದರೆ? ಕೋಡಿ ಬಾಡಿ[1] ಜೋ |
ಕರಿಪೆನಗೆತ್ತ ನಿರ್ಜರೆಯ ಮಾತು ಜಡಂಗಪರಾಜಿತೇಶ್ವರಾ ॥೨೧

ಓದಿದ ತತ್ವಮಿಲ್ಲ ಪರಿದಿಟ್ಟ ಪರಿಗ್ರಹಮಿಲ್ಲ ತಗ್ಗಿ ತೆಂ|
ಪಾದ ಕಷಾಯಮಿಲ್ಲ ನೆರೆ ಗೆಲ್ದ ಪರೀಷಹಮಿಲ್ಲ ಸದ್ಗುಣಾ ॥
ಮೋದತೆಯಿಲ್ಲ ಮಾಡಿದುದು ಧರ್ಮನಿಕಾಸತೆಯಿಲ್ಲ ನಿಮ್ಮೊಳ |
ತ್ಯಾದರಭಕ್ತಿಯಿಲ್ಲ ಸುಖಿಯಾಗುವೆನೆಂತಪರಾಜಿತೇಶ್ವರಾ ॥೨೨

ಬೋಧಿಪೆನೆಂಬೆನೆಲ್ಲರುಮನಾಗಮಪದ್ಧತಿ ಬಾರದಾಯ್ತು ಬ |
ಲ್ಬಾಧೆಯನಾಂತು ಸೈರಿಸುತುಮಾತ್ಮನೊಳಿರ್ದ ಮಲೀಮಸಂಗಳಂ ॥
ಶೋಧಿಪೆನೆಂಬೆನಳ್ಳೆರ್ದೆ*ತನಂ ಬಿಡದಾಯ್ತು ನಿಜಾತ್ಮದೃಷ್ಟಿಯಂ |
ಸಾಧಿಪೆನೆಂಬೆನೆಂದೊಡೆ ಮನಂ ಚಲಮಾಯ್ತಪರಾಜಿತೇಶ್ವರಾ ॥೨೩

1 ಬೋಕರಿ. ಕ॥

ಭೂರಿಮತಂಗಳಂ ತಿಳಿವುದುಂ ಪಲರುಂ ಮತಿದೋಱು ಧರ್ಮದೊಳ್ ।
ಸೇರಿವುದುಂ ಮಹೋಗ್ರತಪದೊಳ್ಪಟುವಪ್ಪುದುಮಾತ್ಮನಂ ಮನೋ
ಗಾರದೊಳೀಕ್ಷಿಸುತ್ತೆ ಭವಬಂಧಮನಿಕ್ಕುವ ಬುದ್ಧಿ ಸುಮ್ಮನೇ ।
ಬಾರದದರ್ಕೆ ನಿಮ್ಮ ಕರುಣೋನ್ನತಿ ಬೇಕಪರಾಜಿತೇಶ್ವರಾ ॥೧೪

ಕುಡುವ ಸಮರ್ಥರಾರಖಿಳಲೋಕಕೆ ನೀಂ ಪೊಱಗಾಗಿ ಮಾನವಂ ।
ಪಡೆವ ಪದಂಗಳಾವುವು ತಪಂ ಶ್ರುತಮುಂ ಪೊಱಗಾಗಿ ಬಲ್ಲವಂ ॥
ಪಿಡಿವ ಸುವಸ್ತುವಾವುದು ಮಣಿತ್ರಿತಯಂ ಪೊಱಗಾಗಿ ಸೋಲ್ತು ಕ ।
ಣ್ಣಿಡುವೆಡೆಯಾವುದಾತ್ಮವಿಭವಂ ಪೊಱಗಾಗಪರಾಜಿತೇಶ್ವರಾ ॥೧೫

ಪುಟನಿಡುವಲ್ಲಿ ಕಿಚ್ಚಿನುರಿಗಂಜಿದೊಡಾಕನಕಕ್ಕೆ ಕೂಡಿದಾ ।
ಕುಟಿಲತೆ ಪೋಕುಮೇ ಮಲಕಳಂಕಮ[1]ನೂದಿ ಕಳಲ್ಚಿ ಕಾಂತಿಸಂ॥
ಪುಟದೊಳಗಾತ್ಮನಂ ನಿಲಿಸಿ ನಿರ್ಮಲನಾಗುವೆನೆಂಬ ಭವ್ಯನು ।
ತ್ಕಟತಪದುಬ್ಬೆಗಳ್ಕಿದೊಡೆ ಸಿದ್ಧಿಪುದೇ ? ಅಪರಾಜಿತೇಶ್ವರಾ ॥೧೬

ರಾಗಕೆ ರೋಷನಾಗಿ ಲಲನಾದಿವಿಯೋಗದೊಳುಗ್ರಯುದ್ಧದೊಳ್ ।
ನೀಗಿದೆನಂಗಕೋಟಿಗಳನಂತದಱಿಂ ಭವರೋಗಿಯಾದೆನಾ ॥
ರೋಗದ ಮೂಲಮಂ ಸುಡುವ ಘೋರತಪಂದಳೆದೊಂದು ಕಾಯಮಂ ।
ತ್ಯಾಗಿಸಲಂಜುತಿರ್ದಪೆನಲಾ ಧೃತಿದೋಱಪರಾಜಿತೇಶ್ವರಾ ॥೧೭

ಪೋಗದೆ ಪೋಪ ಪೋದ[2] ಭವಕೋಟಿಗಳೊಳ್ಬಱಸೂದು ಕೊಂದುತಾಂ।
ಕೂಗುವ ಮೋಹರಾಕ್ಷಸನನುಗ್ರತಪೋಭರ[3]ಧೀರನಾಗಿ ನಾಂ ॥
ತಾಗುವೆನೆಂದು ತೆಱ್ತುಱಿದು ಗೆಲ್ವೆನದೆಂದು ಜಗಕ್ಕೆ ಮಿತ್ರನಾ ।

1 ನೂಡಿ. ಕ॥ 2 ಭವದೊಳ್ಭವದೊಳ್. ಖ॥ 3 ದೀನನಾಗಿ. ಕ॥

ನಾಗುವೆನೆಂದು ನಿನ್ನೆಡೆಯನೆಯ್ದುವೆನೆಂದಪರಾಜಿತೇಶ್ವರಾ ॥೨೮

[1]ಹೇವರಮಂ ಕ್ಷಣಾಂತರಕೆ ತೋರ್ಪ ಸುಖಕ್ಕೊಲವಿಂದೊ ನಾಳೆಯೋ।
ಸಾವ ಜನಂಗಳೊಳ್ಮಮತೆ ಮತ್ಸರವೀಗಳೊ ಬೈಗಿನಾಗಳೋ ॥
ಜೀವ ಶರೀರದೊಳ್ಬರ್ದುಕುವಾಸೆ ವಿರಕ್ತಿಯೊಳಾತ್ಮತತ್ತ್ವಮಂ।
ಭಾವಿಸಿ ಮುಕ್ತನಾಗಲರಿದಾಯ್ತಕಟಾ! ಅಪರಾಜಿತೇಶ್ವರಾ ॥೨೯

ನಾಗನರಾಮರೇಂದ್ರರ ಸುಖಂ ಸಿರಿಯಂ ನಿಜದಿಂದೆ ಭಾವಿಸಲ್।
ಜೋಗಿ ಮಹೇಂದ್ರಜಾಲದ ಕುಮಂತ್ರದೆ ತೋಱುವ ಮಾಮಱಂಗಳೊಳ್॥
ತೂಗುವ ಪಣ್ಗಳಂ ಸವಿದೆನೆಂಬನ ಸಂಭ್ರಮದಂತೆ ಕರ್ಮಸಂ।
ಯೋಗದಿನಾಯ್ತು ಪೋಯ್ತು ನಿಸುಗಂ ಪಿರಿದೇನಪರಾಜಿತೇಶ್ವರಾ॥೩೦

ಮುಕ್ತಿಯೊಳಲ್ಲದಿಲ್ಲ ಸುಖಮಂತದು ಕರ್ಮವಿನಾಶವಿಲ್ಲದೇ।
ವ್ಯಕ್ತಿಗೆ ಬಾರದಾದುರಿತನಾಶಕೆ ದೀಕ್ಷೆಯೆ ಬೇಕು ಮೋಹದಾ ॥
ಶಕ್ತಿಯೊಳಿರ್ದವಂಗೆ ರುಚಿದೋಱದು ದೀಕ್ಷೆಯದರ್ಕೆ ನಿಮ್ಮಸ।
ದ್ಭಕ್ತಿಯೆ ಬೀಜ[2]ಮೊಯ್ಯನದನೀವುದು ಮುಂದಪರಾಜಿತೇಶ್ವರಾ॥೩೧

ಶಕ್ತಿಗೆ ತಕ್ಕ ದಾನಗುರುಪೂಜನಸುವ್ರತಪರ್ವಕಾಲನಿ।
ರ್ಭುಕ್ತಿಗಳಂ ನೆಗಳ್ಚುತೆ ಜಿನಾಗಮಗೋಷ್ಠಿಗಳಲ್ಲಿ ಧರ್ಮಸಂ ॥
ಯುಕ್ತರ ಮೇಳದೊಳ್ ಕಳೆಯುತುಂ ದಿನಮಂ ನಡೆವಂಗೆ ಮೋಹದಾ।
ಸಕ್ತಿ ಸಡಿಲ್ದು ಪೋಪುದಿದು ಭಕ್ತಿಯಲಾ ಅಪರಾಜಿತೇಶ್ವರಾ ॥೩೨

ಮಾಡುವುದರ್ಕೆ ಶಕ್ತಿಯೆನಗೊಚ್ಚತಮಿಲ್ಲದೊಡೊಲ್ದು ಧರ್ಮಮಂ।
ಮಾಡುವರಲ್ಲಿ ನೋಡಿ ಪರಿಣಾಮಮನೆಯ್ದುವುದೊರ್ಮೆ ನೋರ್ಪುದುಂ॥

1 ಹೀವರಮಂ. ಖ॥ 2 ಮೊಯ್ಯನನಗೀವುದು. ಖ॥

ಕೂಡದೊಡಂತೆ ಕೇಳ್ದು ಸುಖಿಯಪ್ಪುದು ನಿಮ್ಮನೆ ನಂಬಿ ಧರ್ಮಮಂ।
ಜೋಡಿಸಿ ಕೊಳ್ವುದರ್ಕೆ [1]ಬಿಱುಸುಂಟೆ ಜನಕ್ಕಪರಾಜಿತೇಶ್ವರಾ ॥ ೩೩

ಹವಣಿಸಿ ಕೊಂಬುದೊಯ್ಯನೆ ಪರಿಗ್ರಹಮಂ ಗತಿನಾಲ್ಕಱಂದಮಂ ।
ಶಿವಪದದಂದಮಂ ತಿಳಿಯುತಿರ್ಪುದು ಕಾಯದ ಕಷ್ಟಮಂ ನಿಜಾ ॥
ತ್ಮವಿಮಲಶುದ್ಧಿಯಂ ನೆನೆಯುತಿರ್ಪುದು ಕೂಡೆ ವಿರಕ್ತಿ ತಾನೆ ಸಂ।
ಭವಿಪ್ಪುದು [2]ದೇಹಿಗೇದೊರೆಯದೋಜೆಯಲಾ ಅಪರಾಜಿತೇಶ್ವರಾ ॥ ೩೪

ಮಿಕ್ಕ ಪರಿಗ್ರಹಗ್ರಹಿತನನ್ಯಱನಾದುಪಕಾರಲೇಶಮಂ ।
ಲೆಕ್ಕಿಪನೇ ವಿರೋಧಿಗಳ ಬಲ್ಲನೆ ಮೆಲ್ಲಿ*ರ್ದೆಯುಂಟೆ ಮತ್ತಮಂ ॥
ನಕ್ಕುದು ನಕ್ಕುದೇ ಮುನಿದುದುಂ ಮುನಿಸೇ ಅವನಾಟವೆಲ್ಲಮುಂ ।
ಮಕ್ಕಳ ಮೇಳದಾಟದವೊಲಿರ್ಪುದಲಾ ಅಪರಾಜಿತೇಶ್ವರಾ ॥ ೩೫

ಗೃಹವಿಡಿಗೊಂಡವಂಗೆ ಮಱವೊರ್ಮೆ ವಿವೇಕವದೊರ್ಮೆ ಕೂಡೆ ಸಂ ।
ಗ್ರಹಿಸುತುಮಿರ್ಕುಮಲ್ಲದೆ ಯಥಾಸ್ಥಿತಿಯುಂಟೆ ನಿರಂತರಂ ಪರಿ ॥
ಗ್ರಹದೊಳಗಿರ್ದವಂಗೆ ನುಡಿಯುಂ ನಡೆಯುಂ ಕ್ಷಣಿಕಂಗಳಲ್ಲದೇ ।
ಸಹಜಚರಿತ್ರದೊಳ್ನಿಱಗೆಮೆತ್ತಣವಾತಪರಾಜಿತೇಶ್ವರಾ ॥ ೩೬

ಸೊರ್ಕಿ ಶರೀರನಾರಿಧನವೆನ್ನವಿವೆಂದವರಲ್ಲಿ ಕಣ್ಮನಂ ।
ಸಿರ್ಕಿ ವಿವೇಕಿಗಳ್ನುಡಿದ ಧರ್ಮಮನೊಲ್ಲದೆ ಕೂಱ ಕೊರ್ಬಿನೊಳ್ ॥
ಕರ್ಕಶವೃತ್ತಿಯೊಳ್ನಡೆವ ಕಾಮುಕರಂತಕನೊಯ್ವ ಕಾಲದೊಳ್ ।
ಮರ್ಕಟನಂತೆ ಪಲ್ಗಿರಿವರೇತಱ ಬಾಱಪರಾಜಿತೇಶ್ವರಾ ॥ ೩೭

ರಚ್ಚೆಯ ಸಂಭ್ರಮಕ್ಕೆ ಕುಣಿದಿಚ್ಚೆಯ ಕೊಱಱುತುಂ ಕ್ಷಣಾಂತದೊಳ್।

1 ಬಿರಿಸುಂಟೆ, ಖ॥ 2 ಗೇಹಿಗೇಂ, ಖ॥

ಕಿಚ್ಚಿನ ಕೊಂಡಮಂ ಪುಗುವ [1]ಮಾಸತಿವೊಲ್ವಿಷಯಂಗಳಿಚ್ಛೆಯಂ॥
ಮುಚ್ಚಿ ಮನಕ್ಕೆ ಬಂದ ತೆಱದೊಳ್ನಡೆದೊಲ್ದು ಸುವ್ರತಂಗಳಂ।
ಹುಚ್ಚರ ದುರ್ಗತಿಸ್ಥಳಕೆ ಬೀೞ್ವರದೇಕಪರಾಜಿತೇಶ್ವರಾ ॥೩೮

ಪಿಂದಣ ಜನ್ಮಜನ್ಮದೊಳ[2] ಗೆಲ್ದುದನೀಭವದತ್ತ ತನ್ನನಾ।
ತಂದರದೆಲ್ಲಿ ಮುಂದೆ ತನಗಿನ್ನೆಡೆ? ಪುಟ್ಟಿದ ತಾಣತಾಣದೊಳ್॥
ಕುಂದದುಪಾರ್ಜಿಸಿರ್ದ ಧನವಂ ತನುವಂ ಬರುತೊಂದನುಂ ಮನಂ।
ತಂದುದೆ? ನಿಮ್ಮ ನಚ್ಚಿರದೆ ಚಿಂತಿಪುದೇಕಪರಾಜಿತೇಶ್ವರಾ ॥೩೯

ಇತ್ತೊಡೆ ಬರ್ಪುದೇ ಬಡತನಂ? ಕುಡದಿರ್ದೊಡೆ ಲಕ್ಷ್ಮಿ ನಿಲ್ವುದೇ?।
ಸತ್ತೊಡೆ ಜೀವನಂತೆ ಲಯವಾದನೆ? ಜೀವಿಸುತಿರ್ದೊಡಿರ್ದನೇ?॥
ಎತ್ತಣ ಮಾತಿವೆಲ್ಲ ಬರುತುಂ ಬಯಲಾಗುತಮಿರ್ಪುವೈಸೆ ನಿಂ।
ಮತ್ತಣ ಭಕ್ತಿಯೊಂದೆ ನಿಜಸಿದ್ಧಿಯಲಾ ಅಪರಾಜಿತೇಶ್ವರಾ ॥೪೦

ನಿನ್ನ ಪದಾಬ್ಜಭಕ್ತಿ ವಿಷಯಾರ್ಥವಿರಕ್ತಿ ತಪೋಭರಕ್ಕೆ ಸಂ।
ಪನ್ನತೆವೆತ್ತ ಶಕ್ತಿ ತನುವಂ ಸಲೆ ಭೇದಿಸಿ ತನ್ನ ರೂಪನ॥
ಚ್ಛಿನ್ನದೆ ಕಾಣ್ಬ ಯುಕ್ತಿ ಗುಣದಲ್ಲನುರಕ್ತಿಯಿವಾಗೆ ಮುಕ್ತಿ ಜೀ।
ವನ್ನರನಾಗಿವಂ ಪಡೆಯದಿರ್ದೊಡದೇಕಪರಾಜಿತೇಶ್ವರಾ ॥೪೧

ನಿನ್ನೊಳಗಾದ ಭಕ್ತಿ ಗಡ ನಿರ್ವೃತಿ ಬೇಕು ಗಡಂ ವಿಶುದ್ಧದಿಂ।
ತನ್ನಿರವುಂ[3] ಭವತ್ಪ್ರತಿ ಗಡಾಂತುದು ದೀಕ್ಷೆ ಗಡಂ ಬೞಿಕ್ಕಹೋ!॥
ಸನ್ನಿ ಗಡಂ ಬಿಸಿಲ್ಗಡ ಭಯಂ ಗಡ ಬಾಯ್ಸವಿಯಾಸೆಯುಂ ಗಡಂ।
ನನ್ನ ಮನೋವಿಕಾರತೆಯನಾಡುವೆನೇನಪರಾಜಿತೇಶ್ವರಾ ॥೪೨

1. ರಂಡೆಯವೊಲ್, ಖ॥ 2. ದೆಲ್ದಿದ. ಖ॥ 3. ಭವಪ್ರತಿಗಡಾಂತು. ಖ॥

ನಾಲಗೆಗಾವುದಿಚ್ಚೆ ತಪನಾಮರಸಾಯನವೊಂದೆ [1] ಯೆನ್ನ ಚಿ ।
ತ್ತಾಲಯದೊಳ್ಬೆಳಪ್ಪ ಮಣಿದೀಪಮದಾವುದು ನಿನ್ನ ರೂಪೆ ಪ್ರೊ ॥
ಯ್ಯಾಮ್ರಲೆಯ ಮೆಯ್ಯ ಭಾರಣೆಯ ಪಿಂಗಿಸುವೌಷಧಿಯಾವುದೆನ್ನ ಚಿ ।
ತ್ತ್ವಾಲಕ ನಿನ್ನ ಮಾರ್ಗದ ತಪಂಗಳಲಾ ಅಪರಾಜಿತೇಶ್ವರಾ ॥೪೩

ತೊಗಲ ಪಸುಂಬೆಯೊಳ್ಪೊಲಸಿನೋವಱಯೊಳ್ಪುಜೆಯೆಂಬ ತೇಱ್ಗಳಾ।
ಪಗವಿನೊಳರ್ಪವ್ರೊಲ್ತನುವಿನೊಳ್ಕವಿದಿರ್ದಪನಾತ್ಮನೆಂಬುದಂ ॥
ಬಗೆಯದ ಕಾರಣಂ ಬರ್ದುಕು* ರಂಜಿಸಿತಲ್ಲದೆ ತೂಗಿ ನೋೞ್ಪನಂ।
ನಗಲಿಡೆಯುಂಟೆ ? ತುತ್ತಿಡೆ ಮನಂ ಬಹುದೇ ? ಅಪರಾಜಿತೇಶ್ವರಾ ॥

ಮಾಸು ಮುಸುಂಕಿ ತಾಯೊಡಲೊಳಿಂತಿರೆವರ್ಪುದು ಮೂತ್ರಮಾರ್ಗದೊಳ್ ।
ಹೇಸದೆ ಬರ್ಪುದೆಂತು ? ಮೊರಪೊಳ್ಮಲಮೂತ್ರದೊಳಾೞುತೇೞುತುಂ॥
ಕೂಸೆನಿಸಿರ್ಪುದೆಂತುಟದನಾಂ ಮಱದಾಗಳೆ ಠಕ್ಕುಜವ್ವನಂ ।
[2]ಸಾಸದವೆಂದು ನಚ್ಚಿದೆನಲಾ ಮತಿದೋಱಪರಾಜಿತೇಶ್ವರಾ ॥೪೫

ಪಗೆಯ ವಶಕ್ಕೆ ಸಿಲ್ಕಿ ಸೆಱಯಿರ್ದ ಮಹಾನುಭವಂಗೆ ನಿದ್ರೆ ತಾ ।
ನೊಗೆವುದೊ? ಭೋಗದಿಚ್ಛೆಯೆ ವಿಡಾಯುವೆ ಮಚ್ಚರವುಂಟೆ ದಿವ್ಯಯೋ
ಗಿಗೆ ರಿಪುಮೋಹಮಂ ಜಯಿಸಿ [3]ಮೆಯ್ಸೆಱಯಂ ಕಳೆವೊಂದು ಜೋಕೆಯು ।
ಜ್ಜಗವದೆ ಚಿಂತೆಯ್ಮಸೆ ಪೆಱತೊಂದಿಹುದೇ ? ಅಪರಾಜಿತೇಶ್ವರಾ॥೪೬

ಓದುವ ಪೇೞ್ವ ಕೇಳ್ವ ಪರಿಭಾವಿಪ ಬಲ್ಲನಿತಂ ಪೆಱರ್ಗೆ ತಾ ।
ನೋದಿಪ ಮೂಱುಸಂಜೆಗಳನಾಱು ಸುಪರ್ವದಿನಂಗಳಂ ಸದಾ ॥

1. ನನ್ನ. ಖ॥ 2. ನಾಸದೆವೆಂತುಸಚ್ಚಿ. ಖ॥ 3. ಮ್ಯೆಸಿರೆಯಂ. ಖ॥

ಸಾಧಿಸತಕ್ಕ ಸತ್ಕ್ರಿಯೆಗಳಂ *ನೆಗಳ್ದುಂತುಟು ದಂದುಗಂಗಳಂ ।
ಪೋದೊಡೆ ಕಾಲಮೆಲ್ಲ ಶುಭಕಾಲವಲಾ ಅಪರಾಜಿತೇಶ್ವರಾ ॥೪೭

[1] ನುಡಿವೊಡೆ ದೇವ ನಿಮ್ಮಯ ಮಹಾಸಭೆಯೊಳ್ನುಡಿವಂತಿರೋಜೆಯಿಂ।
ನುಡಿವುದು ಪೋಗುವಲ್ಲಿ ಮುಳುವಟ್ಟೆಯೊಳೆಯ್ದುವನಂತಿರೋ
[ಜೆಯಿಂ ॥
ನಡೆವುದು ಕುಳ್ಳಿರಿಪ್ಪೊರ್ಱಗುವುಣ್ಬೆಡೆಯೊಳ್ನೆಱಸಿಲ್ಕಿದಾತನಂ ।
ತೊಡನೆ ನಿಜಾತ್ಮಚಿಂತೆಯೊಳಹಂಗಘವೇನಪರಾಜಿತೇಶ್ವರಾ ॥೪೮

ಲೋಕದ ವಾರ್ತೆಯೊಳ್ಬಧಿರನಾತ್ಮಹಿತಂ ಪೊಱಗಾದ ಮಾತಿನೊಳ್ ।
ಮೂಕತೆ ತನ್ನದೇಹಪರದೇಹದ ನೋಟದೊಳಂಧಕಂ ಪ್ರಮಾ ॥
ದೈಕದೆ ಕಂಡು ರಾಗಿಸಿದೊಡಂ ಸುಡು ಮಾಂಸವಿಕಾರಮೆಂದು ಮೆ ।
ಯ್ಯೋಕ್ಕರಿಪಾತನಂತಕನನಂಜಿಸನೇ ? ಅಪರಾಜಿತೇಶ್ವರಾ ॥೪೯

ನೋಡಿದೊಡೆಲ್ಲಿಯುಂ ತನುವಿನೊಳ್ಮತಿಸೋಲದೆ ಶುದ್ಧಜೀವನಂ ।
ನೋಡುವ ಮಾತನಾಡಿದೊಡೆ ಶಾಂತಿ ಶುಭಂ ಪವಣಾಗಿ ಪೇಳ್ವ ತಾಂ ॥
ಪಾಡಿದೊಡತ್ತಲಿತ್ತ ತೊನದಾಡದೆ ನಿನ್ನೊಳೆ ನಟ್ಟ ಚಿತ್ತದಿಂ ।
ಪಾಡುವನಾಗಿಯುಂ ಕಡುವಿರಾಗಿಯಲಾ ಅಪರಾಜಿತೇಶ್ವರಾ ॥೫೦

ಕಣ್ಮಲರಳ್ಕರಿಂದೊಸಱೆ ನಿಮ್ಮನೆ ನೋಡುತುಮಂತರಂಗದೊಳ್ ।
ಪೊಣ್ಮೆ ವಿಶೋಧಿ ಭಾವಿಸುತೆ ನಾಲಗೆ ರಾಗಿಸೆ ಪಾಡುತಂಗದೊಳ್ ॥
ಉಣ್ಮಿರೆ ರೋಮಜಾಲವೆಱಗುತ್ತನುಕಂಪನವೆತ್ತ ಕೈಗಳಂ ।
ದಣ್ಮೆ ತವಾಂಘ್ರಿಗ[2]ಳ್ಗಲರನರ್ಚಿಪೆನೆಂದಪರಾಜಿತೇಶ್ವರಾ ॥೫೧

1 ನಡಿವರೆ. ಖ॥ 2 ಳ್ಚಲರ. ಕ॥

ಮಾತಿನ ಮಾಲೆಯೇಕೆ ಜಿನ ನಿನ್ನೆಡೆ ತನ್ನೆಡೆಯಲ್ಲದನ್ಯರೊಳ್ ।
ಪ್ರೀತಿಯನಾವನೆಯ್ದಿದನವಂ ತಳುವೇನುಱೆಯೆಯ್ದಿದಂ ಮಹಾ ॥
ಭೀತಿಯನೆಯ್ದಿದಂ ಭವಸಮುದ್ರವನೆಯ್ದಿದನೆಂದೊಡಾತ್ಮಸ ।
ದ್ಭೂತಿಗೆ ನೀನೆ ಮಾನ್ಯ ಜೆಱುಂ ಫಲವೇನಪರಾಜಿತೇಶ್ವರಾ ॥೫೨

ಆವನುಮಕ್ಕೆ ನಿಮ್ಮಡಿಗಳಂ ನೆನೆವಾತನೆ[1] ಯೆನ್ನ ಬಂಧು ಸ ।
ದ್ಭಾವದೆ ಪೂಜೆಪಾತನೆ ಸಖಂ ಶ್ರುತಯೋಗಸಮೃದ್ಧನೆನ್ನ ಸಂ ॥
[2] ಜೀವನನೆಂಬೆನೇಕಿನಿತು ಪಕ್ಷವಿಭೇದದೊಡೆ ನನ್ನ ಮೆಚ್ಚಿನಾ ।
ದೇವನ ನಚ್ಚಿನಾತನೆನಗನ್ಯನೆ ಪೇೞಪರಾಜಿತೇಶ್ವರಾ ॥೫೩

ಲೋಕಮಿದೆಲ್ಲಮುಂ ಸ್ಮರಪಿಶಾಚವಿಜೃಂಭಿತಮಿಂದ್ರಜಾಲವಿ ।
ದ್ಯಾಕಥನಂ ಯಮಾಸುರನ ದೀಪನದಾಹುತಿಯಲ್ಲಿ ಪಕ್ಷದಿಂ ॥
ಶೋಕವನಾರ್ಗೆ ಮಾೞ್ಪನೊಲಿದಿರ್ಪನದಾರ್ಗೆ ? ಕನಲ್ವನಾರ್ಗನಲ್? ।
ಮೂಕತೆಯುಂ ದಯೋಕ್ತಿಯೆರಡೇಹಿತಮಿನ್ನಪರಾಜಿತೇಶ್ವರಾ ॥೫೪

ಮೊನ್ನೆ ಬರುತ್ತೆ ಕಂಡೆನವನಂ ಮೃತನಾದನೆಯಾವನಕ್ಕಟಾ ! ।
ನಿನ್ನೆ ಸುಗೋಷ್ಠಿಗೆಯ್ದನಿವನುಂ ಲಯವಾದನೆಯಾದನಪ್ಪೊ! ಇಂ ॥
ದೆನ್ನೊಡವಂದನೀತನಕಟಾ ! ಕಡೆಗಂಡನೆ ಕಂಡೆನೆಂಬ ಮಾ ।
ತನ್ನೆಱ ಕೇಳುತೆನ್ನೊಡಲ ನಚ್ಚುವನೆಂತಪರಾಜಿತೇಶ್ವರಾ ॥೫೫

ಎಲೆ ಎಲೆ ಇತ್ತಲಿರ್ದ ಮೊಗವತ್ತಲಿದೀಕ್ಷಿಸೆ ಮುನ್ನೆ ಕಂಡರೊಳ್ ।
ಕೆಲಬರನಲ್ಲಿ ಕಾಣಲರಿದಿಂತುಟು ತೋಱುತೆ ಮಾಯಮಪ್ಪ ಮೆ ॥
ಯ್ವಲೆಯೊಳೆ ಬಾೞ್ವೆನೆಂಬ ಮನವಲ್ಲದೆ ತತ್ತನುವಂ ತಮಂಗಳೊಳ್ ।
ಸಲಿಸಿ ನಿಜತ್ವಮಂ ಪಡೆಯಲಂಜುವೆನೇಕಪರಾಜಿತೇಶ್ವರಾ ॥೫೬

---

1. ಉನ್ನ. ಕ॥ 2. ಜೀವತನೆಂಬೆ. ಕ॥

ಪೇೞವೆ ವೇಳೆವೇಳೆಗಿಱುವಾಯುಷನೀಗಳೆಯಾರಸನ್ನೆಯುಂ |
ಕೋಱಯುವೋದುತಿರ್ಪ ತಿಥಿಪಾತಕಘೋಷಣೆ ತೆಱುತ್ತ ಪೇೞ್ಯುಂ||
ಕೇಳುತುಮಂ[1] ತವಕ್ಕೆಗಿಯುಧಂಗವಿದಂ ಸ್ಥಿರವೆಂದೆ ನಚ್ಚಿ ನಿಂ |
ನೊಳಗಡಿಚ್ಚಿಯಂ ಮಱದು ಕೆಟ್ಟನಲಾ ಅಪರಾಜಿತೇಶ್ವರಾ ||೫೭

ಪೊಕ್ಕು ಸಮಾನಚಿತ್ತವನೆ ಸಾಧಿಸಿ ಕರ್ಮನಿಬಂಧಮುಂ ಲಯ |
ಕ್ಕಿಕ್ಕುವೆನೆಂದು ತಾಳ್ದು ತಪಮಂ ನಡೆಯುತ್ತಿಡೆಯೊಳ್ಕೆಲಂಬರೊಳ್||
ನಕ್ಕು ಕೆಲಂಬರೊಳ್ಮುನಿದು ಬಾಱ್ವದಿದೇಂ ಬಿಡ ಪೋಗಿ ಮಾಱುಗಂ |
ಟಕ್ಕಿದ ಗಾದೆಯಾದೆನುಪಶಾಂತಿಯನೀಯಪರಾಜಿತೇಶ್ವರಾ ||೫೮

[2]ಕಟ್ಟದ ಪಟ್ಟಣಕ್ಕೆ ಪಯಣಂಬರುತಿರ್ದವನಲ್ಲಿಗಲ್ಲಿ ತಾಂ |
ಬಿಟ್ಟಿಡೆಯೊಳ್ಪಲಂಬರೊಳಗೆಂತು ಸಮಂಬಡೆದಿರ್ಪನಂತೆ ಕ ||
ಣ್ಣಿಟ್ಟು ನಿಜಾತ್ಮಸಿದ್ಧಿಗೆ ತಪಂ[3] ಬಡೆವಂ ಪಲರಲ್ಲಿ ಮುಟ್ಟಿಯುಂ |
ಮುಟ್ಟದ ಭಾವದಿಂ ನಡೆಯವೇೞ್ಕುಮಲಾ ಅಪರಾಜಿತೇಶ್ವರಾ ||೫೯

ಆವನೊಳಾದೊಡಂ ಕುಮತಿ ಕಾಱ್ನುಡಿ ಕಿೞ್ನುಡಿ ತೋಱುತಿರ್ದೊಡಾ|
ಜೀವನೆ ನೈಜವೆನ್ನದೆ ತದೀಯಕಷಾಯಗುಣಂಗಳೆಂದವಂ ||
ಭಾವಿಸಿಯಾಕಷಾಯತತಿ ತನ್ನೊಳಗಾಗದವೋಲ್ ನಿಜಾತ್ಮನಂ |
ಕಾವುತುಮಿರ್ಪವಂ ಸ್ವಪರವೇದಿಯಲಾ ಅಪರಾಜಿತೇಶ್ವರಾ||೬೦

ಗುಣಿಯೆನಿಸುತ್ತೆ ತಾಂ ನಡೆಯುತಿರ್ದೊಡಮನ್ಯರ ದುರ್ಗುಣಂಗಳಂ |
ಗಣಿಯಿಸಿದಂದು ತಾಂ ಗುಣವಿಹೀನನೆಯಂತದಱಂದೆ ಸರ್ವರೊಳ್ ||
ಗುಣವನೆ ಕಾಣ್ಬುದುತ್ತಮಗುಣಕ್ಕವರಂ ತೆರಲಾರ್ಪೊಡೆಲ್ಲರಂ |
ಗಣಿಯಿಪುದಲ್ಲದಂದವಱ ಚಿಂತೆಯದೇಕಪರಾಜಿತೇಶ್ವರಾ ||೬೧

1. ತದಕ್ಕೆ. ಖ|| 2. ತುಟ್ಟದ. ಕ|| 3. ಬಡುವಂ. ಕ||

ಸರ್ವಗುಣಂಗಳೊಳ್ಸ್ವಲಭರಾರ್ ಜಿನ ನೀಂ ಪ್ರೊಱಗಾಗಿ ಲೋಕದೊಳ್ |
ಪರ್ವಿದ ಮಿಥ್ಯೆಯೊಳ್ವಿಷಮಕಾಲದೊಳೀನರಕೀಟಕಂಗಳೊಳ್ ||
ಒರ್ವರೊಳಿರ್ದ್ದೊಂದು ಗುಣಮಂ ಗುಣಕೋಟಿಯೆನುತ್ತೆ ಕಂಡು [ತಾ|
ನುರ್ವುವವಂಗೆ ನಿನ್ನ ಗುಣವೊಲ್ದಿರವೇ ಅಪರಾಜಿತೇಶ್ವರಾ ||೬೨

ದುರ್ವಿಷಯಂಗಳೆಂಬ ವಿಷಮಂ ಕುಡಿದಾರ್ತ್ತವಿರೋಧಮೋಹಮೆಂ |
ಬುರ್ವಿನ ವತ್ಸನಾಭಿಯೆನೆ ಮುಚ್ಚಿ ಕಿಡುತ್ತಿದೆ ಲೋಕಮಕ್ಕಟಾ ! ||
ಸರ್ವರ ಮೆಯ್ಯೊಳಾವಿಷನಿವಾರಣಕಾತ್ಮನಿಜಸ್ವರೂಪದಾ |
ನಿರ್ವಿಷಮುಂಟದಂ ಮಱದು[1] ನೋವರದೇಕಪರಾಜಿತೇಶ್ವರಾ ||೬೩

ಅಱಯಲಿ ಚಿತ್ತಮೀಯುದಘಸಂತತಿಯಾತ್ಮನನೆತ್ತಲಾನುಮೊ |
ಲ್ದಱಪೊಡೆಯುಸ್ತಬೆಸ್ತವನೆ ಮಾಡುವುದೊರ್ಕ್ಕೆ ಯಥಾರ್ತ್ಥಮಾಗಿ ತಾ ||
ನಱದೊಡಮೇನೊ ತನ್ನೊಳಗೆ ತನ್ನನೆ ಭೇದಿಸಿ ಶುದ್ಧಸಿದ್ಧನೆಂ |
ದಱವಿನೊಳೀಕ್ಷಿಸಲ್ಕೆ ಬಿಡದಚ್ಚಿಗಿ ನೋಡಪರಾಜಿತೇಶ್ವರಾ ||೬೪

ಘುಳಿಸುವನ್ನೈದೆ ಪಾಪಸುಕೃತಂಗಳನುಣ್ಬನೆರಲ್ಫಲಂಗಳಂ |
ಮಳವಶನಾಗಿ ದೇಹಿ ಸುಖಿ ದುಃಖಿ ಕಷಾಯವಿನಾಶಿ ಕಾಮಿ ಪ್ರ ||
ಲ್ಪಟು ಸತಿ ಗಂಡು ಷಂಡನೆನಲಿಂತು ಬಹುಸ್ಥಿತಿಯಪ್ಪನಾತ್ಮನಾ |
ಮಳಕುಳಮಂ ಕಟಲ್ಚಿ[2] ಸುಖಿಯಪ್ಪನಲಾ ಅಪರಾಜಿತೇಶ್ವರಾ ||೬೫

ಕರ್ಮನಿಬಂಧನಾಗಿಯುಮಬಂಧನಮೂರ್ತನೆ ಮೂರ್ತ್ತನಾಗಿಯುಂ |
ಕೂರ್ಮೆ ವಿಷಾದಮಿರ್ದ್ದುಮಮಲಂ ನಭದಂತಿರೆ ಶೂನ್ಯನಾಗಿಯುಂ||

1. ಪರಿದೇಕೆ. ಖ|| 2. ನಿಜಮಪ್ಪನಲಾ. ಖ||

ಧರ್ಮಗುಣಾತಿಶಾಯಿಕನಿದಾತ್ಮನ ವರ್ತನೆಯದ್ಭುತಕ್ಕೆ ಸಾ।
ಸಿರ್ಮಡಿಯದ್ಭುತಂ ತಿಳಿಯಬಲ್ಲವನಾರಪರಾಜಿತೇಶ್ವರಾ॥೬೬

ಏಕನನೇಕನಲ್ಪನಧಿಕಂ ಕ್ಷಯನಕ್ಷಯನಸ್ತಿನಾಸ್ತಿ ಮೂ।
ಲೋಕಮಿತಂ ಸ್ವದೇಹಮಿತನುತ್ತಮಬೋಧಸುದರ್ಶನಂಗಳಿಂ॥
ಲೋಕಕಲೋಕಕಂ ನೆರೆವನುಂಗದ ನೋಟದೆ ಬದ್ಧನಾತ್ಮನಾ।
ಲೋಕನದಿಂದೆ ಮುಕ್ತನಿದು ಶಕ್ಯಮದಾರ್ಗಪರಾಜಿತೇಶ್ವರಾ॥೬೭

ಮಾನವರಾತ್ಮತತ್ವಮಱಿಯಲ್ಕೆ ಕುವಾದಿವಿವರ್ಜನಕ್ಕೆ ನಾ।
ನಾನಯಮುಂ ಪ್ರಮಾಣನಿಧಿಸಂಗ್ರಹಮುಂ ನೆಱದಿರ್ದುವಲ್ಲದೇ॥
ಧ್ಯಾನಿಸುವಾಗಳೀಬಹುವಿಕಲ್ಪತೆಯಿಲ್ಲ ಮಣಿತ್ರಯಾತ್ಮನಂ।
ಬೇನುತಭಾವಮೊಂದೆ ಬೆಳಗಿರ್ಪುದಲಾ ಅಪರಾಜಿತೇಶ್ವರಾ॥೬೮

ವ್ಯವಹೃತಿಯೆಂದು ನಿಶ್ಚಯತೆಯೆಂದು ಮಣಿತ್ರಯಮಕ್ಕುಮಲ್ಲದೇ।
ವವಚನ ತಾಪಸರ್ಕಳವಧಾರಣೆ ತಾಂ ವ್ಯವಹಾರಮಲ್ಲದೋ॥
ಷವ[1]ನುಱವಿಲ್ಲದೇ[2]ಗೆಲಿದೆ ನೀನೆ ಮಮಪ್ರಭು ನಿಮ್ಮ ವಾಣಿಯೇ।
ಶಿವಮತ ತಾನಸಂಗನೆ ತಪಸ್ವಿಯಲಾ ಅಪರಾಜಿತೇಶ್ವರಾ॥೬೯

ಮೊದಲೊಳೆ ತತ್ವಸಪ್ತಕವಿ ಪೇಳ್ದು ಮಣಿತ್ರಯಮಂ ಬಱಿಕ್ಕೆದೇ।
ನಿವನೊರೆದಿರ್ದನೆನ್ನದಿರಿಮಾಪ್ತನೊಳಾಗಮದೊಳ್ತಪಸ್ವಿಯೊಳ್॥
ಪ್ರದಿದುದು ತತ್ವವರ್ಗಮದಱಿಂದೆ[3]ರವಿಲ್ಲಮದುಂ ನಿಜಾತ್ಮನಾ।
ಧ್ಯದ ಸಹಕಾರಿಯೆಂಬುದು ತಮಾಜ್ಞೆಯಲಾ ಅಪರಾಜಿತೇಶ್ವರಾ॥೭೦

ನಿಶ್ಚಯದಿಂದಮಾತ್ಮನೆ ಸುದರ್ಶನಮಾತ್ಮನೆ ಶುದ್ಧಬೋಧನಂ।
ತಶ್ಚರಿತಂ ನಿಜಾತ್ಮನೆ ಮಣಿತ್ರಯರೂಪನುಮಾತ್ಮನೆಂಬುದಂ॥

---

1. ನುಭಾವಿಲ್ಲದೇ, ಖ॥ 2. ಗೆಲಿದ, ಖ॥ 3. ಪುಲ್ಲದುದಂ, ಕ॥

ನಿಶ್ಚಲವಾಗಿ ನಂಬಿ ನಿಜಮಂ ತಿಳಿದಲ್ಲಿಯೆ ಲೀನವಾಗಿ ಚೇ |
ತಶ್ಚರಮಂ ನೆಗಚ್ಚ ಶಿವಮೆಂದೆಯಲಾ ಅಪರಾಜಿತೇಶ್ವರಾ ॥೨೧

ನಿನ್ನನೆ ನಂಬು ನಂಬಿದೊಡೆ[1] ನನ್ನನೆ ನಂಬಿದೆ ಶುದ್ಧದೃಷ್ಟಿಯಿಂ |
ನಿನ್ನನೆ ನೋಡು ನೋಡಿದೊಡೆ[2] ನನ್ನನೆ ನೋಡಿದವಂ ಸುಚಿತ್ತದಿಂ ||
ನಿನ್ನೊಳಗೈಕ್ಯವಾಗದುವೆ[3] ನನ್ನೊಳಗೇಕತೆಯಾದುದೆಂದು ರ |
ತ್ನೋನ್ನತಿಯಿಂತುಟೆಂದೊರೆದೆ ನೀನೆ ಬುಧಂಗಪರಾಜಿತೇಶ್ವರಾ ॥೨೨

ವರಗುರುಪಂಚಕಂ ವರತಪಶ್ಚರಣಂಗಳವಿಪ್ಪುವಲ್ಲಿ ಸ |
ದ್ಗುರು[4] ಗುಣಶೀಲಸಂಯಮಸುತೀರ್ಥಪವಿತ್ರತೆಯಲ್ಲಿ ತೋರ್ಕುವು ||
ತ್ತರಗುಣರಾಶಿಮೂಲಗುಣವೃಂದಮುಮಿರ್ಪುವಲ್ಲಿ ನಿನ್ನ ಚಿ |
ತ್ಪರಿಣತೆಯಲ್ಲಿ ನಿಟ್ಟಿಸೊಳಗೆಂದೆಯಲಾ ಅಪರಾಜಿತೇಶ್ವರಾ ॥೨೩

ಅಱವಱಿಂಗಡಪ್ಪುಮಱಿವಾತನುಮಂತದೆ ಕಾಣ್ಕೆಕಾಣ್ಕೆಗಂ |
ಗುಱಿಯುಮಡಂಗೆ ಕಾಣ್ಬನುಮದೇ ಶರಣಂ ಶರಣಾರ್ಥಿ ಸಾಧ್ಯದುಂ ||
ಎಱಕವೆಱಂಗುವಾತನೆಱಕಕ್ಕಧಿದೈವಮುಮಾತ್ಮತತ್ವವೇ |
ಪ್ರೊಱಗರಸಲ್ಕೆವೇಡ ನಿಜವೆಂದೆಯಲಾ ಅಪರಾಜಿತೇಶ್ವರಾ ॥೨೪

ಅದನಱಿದಾತನೆಲ್ಲಮಱಿದಾತನದೊಂದನೆ ಕಂಡನೆಲ್ಲಮಂ |
ಸದರದೆ ಕಂಡನಲ್ಲಿಗೆ ಮನಂ ವಶವಾದೊಡೆ ಮುಕ್ತಿಸಾಧ್ಯಮಾ ||
ದುಧ[illegible]ಠಲವೇಕದೊಂದು ಪ್ರೊಱಗಾದೊಡೆ ಕಲ್ತ ಸಮಸ್ತಶಾಸ್ತ್ರದಿಂ |
ಚದುರರೆನಿಕ್ಕುಮಾತ್ಮಪದಸಾಧಕರೇ ಅಪರಾಜಿತೇಶ್ವರಾ ॥೨೫

ಉದ್ಗತ[5] ದೃಷ್ಟಿಯಿಂ ಸಕಳಮಂ ಪ್ರೊಱಗೀಕ್ಷಿಸಪ್ಪುದಾತ್ಮನಂ |
ಹೃದ್ಗತದೃಷ್ಟಿಯಿಂದೊಳಗೆ ನಿಟ್ಟಿಸಬಾರದು ಜನ್ಮಜನ್ಮದೊಳ್ ||

1. 2. 3. ಯೆನ್ನನೆ. ಕ॥ 4. ಗಣ. ಖ॥ 5. ದೃಷ್ಟಿಯುಂ, ಕ॥

ಪುದ್ಗಲರೂಪದಾಱು ರಸದಿಂ ಸುಖಿಸಲ್ಬಱುದಾತ್ಮರೂಪಸಂ ।
ವಿದ್ಗುಣದಾ ರಸಾನ್ನವನುಣಲ್ಕರಿದಿಂತಪರಾಜಿತೇಶ್ವರಾ ॥೭೬

ತಡೆತಡೆದೋಡುತಿರ್ಪ ಮನಮಂ ಪಿಡಿದಾತ್ಮನೊಳಿಟ್ಟು ತನ್ನ ತಾಂ ।
ನುಡಿನುಡಿದಾತ್ಮನೊಳ್ ಸ್ವಪರತತ್ವರಹಸ್ಯಮನಾತ್ಮರೂಪಮಂ ॥
ಅಡಿಗಡಿಗೊಲ್ದು ನೋಡುತೆ ಶಮಾಮೃತಮಂ ಸಲೆ ಪೀರ್ದು ಪೀರ್ದುತೆಂ।
ಪಡರ್ದ ತಪಸ್ವಿಯೋ ಸುಖಿ ಪೆಱಂ ಸುಖಿಯೋ ಅಪರಾಜಿತೇಶ್ವರಾ ॥೭೭

ಮನಮನಿದೊಂದನೇ ತನುವಿನೊಳ್ನೆಲೆಸಿರ್ದ ನಿಜಾತ್ಮನಲ್ಲಿ ನೆ ।
ಟ್ಟನೆ ನಿಲಿಸಲ್ಕೆ ಸಾಕು ಭಯವೆತ್ತಣದೆತ್ತಣದಾರ್ತರೌದ್ರಮೀ ॥
ತನುಸುಖದಾಸೆಯೆತ್ತಣದು ತೀವ್ರಪರೀಷಹಮೆತ್ತ ಮೋಹಮು ।
ಲ್ಲನಕುಱುಪಾಟವೆತ್ತ ಪಲವುಂ ಕೊಸಱೀಕಪರಾಜಿತೇಶ್ವರಾ ॥೭೮

ಮನದ ವಿಕಲ್ಪಮಿಂದ್ರಿಯಕಷಾಯಮನಾಗಿಪುದಂತವಾದೊಡಾ ।
ತನು ವಚನಂಗಳಾಡುವುದು ತಾನದಱಿಂದವೆ ಕರ್ಮಲಬ್ಧಿಯಾ॥
ಮನವೆ ನಿಜಾತ್ಮರೂಪದೊಳೆ ಮಗ್ನವನೆಯ್ದಿದ ಮೇಲೆ ಕರ್ಮಬಂ ।
ಧನದೆಡೆಯೆತ್ತ ನಿರ್ಜರೆಗಿದೊಂದೆಯಲಾ ಅಪರಾಜಿತೇಶ್ವರಾ ॥೭೯

ಮನದ ಕುಭಾವಮೇ ದುರಿತಮಲ್ಲಿ ಸುಭಾವಮೆ ಪುಣ್ಯಮೀಯೆರ ।
ಡ್ಮನದೊಳಗಿಲ್ಲದಾ ಮನವೆ ತನ್ನ ನಿಜಾತ್ಮನೊಳೈಕ್ಯಮಾಗಿ ಸ[illegible]॥
ಮನೆ ನಿಲೆ ಮೋಕ್ಷಮಂತದಱನಾತ್ಮನೆ ತಾಂ ಪಗೆ ತಾನೆ ಬಂಧುವುಂ।
ತನಗೆ ವಿನಿಶ್ಚಯಕ್ಕೆ ಗುರು ತಾನೆಯಲಾ ಅಪರಾಜಿತೇಶ್ವರಾ ॥೮೦

ಇಷ್ಟರುಮೆನ್ನೊಳಿರ್ದಪರನಿಷ್ಟರುಮೆನ್ನೊಳೆ ಇರ್ದಪರ್ ಜಿನೋ ।
ದ್ದಿಷ್ಟಮಿದಿರ್ದಮೇಲೆ ಪೊಱಗೇನನಭೀಕ್ಷಿಪೆನೇನ ಮಾಡುವೆಂ ॥

ಅಷ್ಟಗುಣಂಗಳೊಳ್ನಲಿಯುತೊತ್ತರಿಸುತೊತ್ತಡನಷ್ಟಕರ್ಮಮಂ ।
[1]ದೃಷ್ಟಿಯನೆನ್ನೊಳಾನಿರಿಸಿ ನಿಂದಪೆನಿನ್ನಪರಾಜಿತೇಶ್ವರಾ ॥೮೧

ಅಱಿಸುವೆನೆನ್ನ ದೇಹದೊಳಗೆನ್ನನೆ ಕಾಣ್ಬೆನಮೂರ್ತಸಿದ್ಧನಂ ।
ಪೊಱಗೊಳಗೆಲ್ಲಮಂ ತೊಳೆದು ತಿಂಗಳ ಪುತ್ಥಳಿಮಾಡಿ ನೋಡುವೆಂ ॥
ತೞಬುವೆನಲ್ಲಿಯೇ ಮನವನಾಗಳೆ ಬಾಹ್ಯಸಮಸ್ತಚಿಂತೆಯಂ ।
ಮಱೆವೆನನಂತಸೌಖ್ಯದೊಳಗೞ್ದುಪೆನಾನಪರಾಜಿತೇಶ್ವರಾ ॥೮೨

ಬಾಗದೆ ತೂಗದೋರೆ ಪುಗದೊಯ್ಕನೆ ಸ್ಪೈಕನೆ ಕುಳ್ಳಿತಕ್ಕೆ[2]ನಿಂ(?) ।
ದಾಗಲೆ ದೇಹಮೂಷೆಯನುಪಾಯದೊಳಾಂತು ತಪ್ರೋಗ್ನಿಗೊಡ್ಡಿ ಬೇ॥
ೞಾಗಿರೆ [3]ಸೋರ್ಚೆ ಕರ್ಮ[4]ಮಯಣಾಕೃತಿಯಂ ಬೞಿಕಲ್ಲಿ ತೋಱುತಿ।
ರ್ಪಾಗಸಮೊಂದು ಕಾಣ್ಬೆನೊಳಗೆನ್ನನೆ ನಾಪರಾಜಿತೇಶ್ವರಾ ॥೮೩

ಚೇತನನಾತ್ಮನಾಗಸಮಚೇತನಮೆಂಬಿನಿತಲ್ಲದೇ ಸ್ವರೂ ।
ಪಾತಿಶಯಕ್ಕೆ ಭೇದವಿಡಲಿಲ್ಲ ನಭಕ್ಕೆಯುಮಾತ್ಮತತ್ವಕಂ ॥
ಓತದೞಿಂದ[5]ಮಾಗಸವೆ ತಾಂ ಪುರುಷಾಕೃತಿಯಾಯ್ತು ಎಂಬುಪಾ ;
ಯಾತುರಮಿಟ್ಟು ನೋೞ್ಪೆನೊಳಗೆನ್ನನೆ ನಾನಪರಾಜಿತೇಶ್ವರಾ ॥೮೪

ಸಿದ್ಧರ ರೂಪಿನೊಳ್ಕ್ರಮದಲೆ ನೋಟದ ಸಾಧನೆ ಮಾಡಿಮಾಡಿ ಸಂ ।
ಶುದ್ಧದೊಳಾನುಮಿಂತೆಯೆನುತಾಗಳೆ ತನ್ನನೆ ನೋಡಿ ನೋಡಿಯಾ ॥
ಸಿದ್ಧರುಮಾನುಮೆಂಬೆರಡು[6]ಭೇದವಡಂಗಿ ನಿಜಾತ್ಮನಲ್ಲಿ ಸಂ ।
ನದ್ಧರೊಳೈಕ್ಯವಾಗುವನೆ ಸಿದ್ಧನಲಾ ಅಪರಾಜಿತೇಶ್ವರಾ ॥೮೫

ನಾಸಿಕದಗ್ರದೊ[7]ಳ್ನಿಲಸೆ ದೃಷ್ಟಿಗಳೊಪ್ಪೆ ಮನಂ ಲಲಾಟದೊಳ್ ।

---

1. ದುಷ್ಟಿ. ಖ॥ 2. ನಿಂದಾಗಲಿ. ಖ॥ 3. ಸೋರ್ಚೆ. ಖ॥ 4. ಮಯನಾ. ಖ॥
5. ಮನಭಕ್ಕೆ. ಕ॥ 6. ಸಂನಾರ್ಗದೊಳೈಕ್ಯವಾ. ಖ॥ 7. ಳ್ನಿಲಿಸಿ. ಖ॥

ಸೂಸದೆ ಕೂರ್ಮನಂತೊಳಗಡಂಗಿರೆ ಮತ್ತುಮಿಂದ್ರಿಯಂಗಳುಂ॥
ಶ್ವಾಸಮದೊಯ್ಯನಾಗಲೊಳಗೆನ್ನನೆ ನಾಂ ಪರಿಯಂಕಚಂದ್ರಭ ।
ದ್ರಾಸನಮಾದಿಯಾದವಱೊಳೀಕ್ಷಿಪೆನಿನ್ನಪರಾಜಿತೇಶ್ವರಾ ॥೮೬

ಕಲಿಗೆ ಮಹಾಬಲಂಗೆ ಮುಖಕುಕ್ಕುಟಕೂರ್ಮಸರೋಜವಜ್ರಕಂ ।
ಡಲಿಕಮಯೂರವೀರಮಕರೋತ್ಕಟಕಾಸನಮಾದಿಯಾಇವುಂ ॥
ಫಲಿಸುಗುಮಲ್ಪಶಕ್ತಿಗೆಸೆಗುಂ ಪರಿಯಂಕಮದೊಂದು ಮಗ್ಗಲೊಳ್।
ಮಲಗಿಯುಮಾತ್ಮದೃಷ್ಟಿಯಹುದಾವುದವಂಗಪರಾಜಿತೇಶ್ವರಾ ॥೮೭

ಆಸನಸಂಕುಲಂಗಳನುಬಂಧದಿ ಜಾಡ್ಯಹರಂ ಪಟುತ್ವಮೆ ।
ಲ್ಲೋಸರಿಕುಂ ಪುರಾಣರುಜೆ ಪೂರಕಕುಂಭಕರೇಚಕಂಗಳ ॥
ಭ್ಯಾಸಮೆ ಚಿತ್ತಮಂ ಸ್ಥಿರತೆಮಾಡಿ ವಿಕಲ್ಪಮನೊತ್ತುಗುಂ ಸಮಂ ।
ತೀಸಮುಕಟ್ಟ ಬೇಕು ನಿಜಮಂ ಬಗೆವಂಗಪರಾಜಿತೇಶ್ವರಾ ॥೮೮

ಪ್ರೋಱ್ ಕೆಱೆಯೊತ್ತು ವಾರ್ಧಿತಟಮರ್ದಗಾರಮರಣ್ಯಮುಂ ವನಂ ।
ಪುಳಿಲತಳಂ ಬಿಲಂ ಗುಹೆ ನಿಷೇಧಿಕೆ ಪಾೞ್ಮನೆ ರುದ್ರಭೂಮಿಯುಂ ॥
ನುಱಿದ ವಿವಿಕ್ತಮಕ್ಕೆ ಪಶು ಷಂಡ ವಧೂ ಖಳಜಂತು ದಾರಿಗರ್ ।
ಸುಱಿಯದ ತಾಣಮಾದೊಡಿವು ಜಾನಕೆ ಲೇಸಪರಾಜಿತೇಶ್ವರಾ ॥೮೯

ಬಾರದ ಜಾನಮುಂ ಬರಿಸಿಕೊಂಬ ಸುಸಾಧುಜನಕ್ಕೆವಲ್ಲವೇ ।
ಘೋರತಪೋಧನಂ ಬಗೆವನೇ ಮಱೆಗಾಳಸಿಡಿಲ್ಬಿಸಿಲ್ಗಳಂ ॥
ಸೀರುಡುಪಾವುಪೆರ್ಬುಲಿಗಳಂ ಪೆಱರಿಟ್ಟುಪಸರ್ಗಮಂ? ಮನೋ।
ಧೀರದೆ ಗೆಲ್ದು ನಿತ್ಯಪದನಪ್ಪನಲಾ ಅಪರಾಜಿತೇಶ್ವರಾ ॥೯೦

ರಂಭೆಯೆ ಬಂದು ತಾಂ ಕೊರಲನಪ್ಪಿದೊಡಂ ಪುಳಕಂಗಳಾಗದೇ ।
ಕುಂಭಿಪಮೂರು ಬೃಂಹಿಸುತೆ ಘರ್ಜಿಸುತುಂ ಬರೆ ಬಲ್ಪುಗುಂದದೇ॥

ಜೃಂಭಿಸಿ ಕಾಡುಗಿಚ್ಚು ಕವಿಯುತ್ತಿರೆ ಬುದ್ಧಿ ಕಲಂಕದೇ ಶಿಲಾ ।
ಸ್ತಂಭವೆನಲ್ಕೆಯೆನ್ನೊಳಗೆ ನಿಲ್ವನದೆಂದಪರಾಜಿತೇಶ್ವರಾ ॥೯೧

ಇರುತಿರುತಿರ್ದು ಚಿಂತಿಸಿ ಶರೀರದ ಕರ್ಮದ ರೂಪನಂತೆ ಕೊ ।
ಕ್ಕರಿಸಿ ತಪೋಗ್ನಿಯಿಂ ಸುಡುವೆನೀಭವಬಂಧಮನೆಂದು ಧೈರ್ಯಮಂ ॥
[1]ಕುರಿಸೆ ಪರೀಷಹಂ [2]ಬಲಿಸಿ ದೇಹಮನೊಡ್ಡಿ ನಿಜಾತ್ಮದೃಷ್ಟಿಯೊಳ್ ।
ತೆರಳದೆ ನಿಂದು ಗೆಲ್ವವನೆ ಧನ್ಯನಲಾ ಅಪರಾಜಿತೇಶ್ವರಾ ॥೯೨

ಒಪ್ಪಿಸಿ ದೇಹಮಂ ತಪದ ತಾಪಕೆ ತನ್ನ ನಭಸ್ಸ್ವರೂಪಮಂ ।
ನೆಪ್ಪಱವಪ್ಪಿಕೊಂಡು ನಿಲೆ ಲೋಕದ ಕಣ್ಗದು ಯೋಗಿವೇಷಮೋ ॥
ಲೆಪ್ಪದ ರೂಪೊ ಕಲ್ಲ ಪರಿಜೋ ಎನೆ ತೋರ್ಪಿನಮಷ್ಟಕರ್ಮಮುಂ ।
ಕಪ್ಪನೆ ಕಂದಿ ಬೆಂದು [3]ಪತನಂಬುಗದೇ ಅಪರಾಜಿತೇಶ್ವರಾ ॥೯೩

ಆದಿಯ ವಜ್ರಕಾಯದವ*ರ್ಗಲ್ಲದೆ ತಾಳ್ವದಶಕ್ಯಮುಷ್ಣವಾ ।
ತಾದಿಪರೀಷಹಂಗಳನದೇಂ ಬಿಸವಂದಮೊ ಈಗಳುಂ ಕೆಲರ್ ॥
ಈದೊರೆಮೆಯ್ಯೊಳುಗ್ರತರಘೋರಮಹಾತಪಮಂ ನೆಗಳ್ಚುಗುಂ ।
ಮೇದಿನಿಗೀಮುನೀಂದ್ರರೆ ಜಿನೇಂದ್ರರಲಾ ಅಪರಾಜಿತೇಶ್ವರಾ ॥೯೪

ನರಕದೊಳಟ್ಟೆ ಮೆಟ್ಟೆ ಕಡುಕಾಸುವ ಕೀಸುವ ಸರ್ವಬಾಧೆಯಂ ।
ಸ್ಮರಿಸಿದೊಡೊತ್ತಿ ಹೇರಿ ಪಶುವಂ ಮೃಗವಾದೊಡೆಯುಚ್ಚು ಕೊ
[ಚ್ಚುಗೋ ॥
ಣರಿವುದನಬ್ಬೆಯುಬ್ಬರದ ಗಬ್ಬದೊಳುಬ್ಬಸದಿಂ ಬೞಲ್ದ ತಂ ।
ನಿರವನೆ ಚಿಂತಿಪಂಗೆ ತಪದೊಳ್ಬಱಸೇಕಪರಾಜಿತೇಶ್ವರಾ ॥೯೫

ಸ್ವಾಮಿಕುಮಾರನಾಗಜಕುಮಾರಕನಾಸುಕುಮಾರನಾತ್ಮಜಿಂ ।

---

1 ಕುರಿಸಿ. ಕ॥ 2 ಬಱಿಸಿ, ಖ॥ ತಪನಂಬುಗವೆ, ಕ॥

ತಾಮುಯ[1] ಸಂಜಯಂತಗುರುದತ್ತ ಚಿಲಾತಜಧರ್ಮಪುತ್ರರಾ ॥
ಸ್ವಾಮಿಸುವರ್ಣಭದ್ರಶಿವಭೂತಿಸುದರ್ಶನಪಾರ್ಶ್ವನಾಥರಾ ।
ನೇಮವಿದೆಂದು ನಿಂದೊಡೆ*ರ್ದೆಯೊಳ್ಬಯನೇಅಪರಾಜಿತೇಶ್ವರಾ ॥೯೬

ಮೆಯ್ಯ ನಿರಾಸೆ ಘೋರತಪಮುತ್ತಮಸಂಯಮಮಾತ್ಮತತ್ತ್ವಮುಂ
ಕಯ್ಯೊಳಗಿರ್ದ ಕನ್ನಡಿಯ ನೋಳ್ಪವೊಲೀಕ್ಷಿಪ ಬೋಧೆ ಕೂಡಿದಾ
ಸಯ್ಯಮಿಗೆಲ್ಲಿ[2]ಕಾಂಕ್ಷೆಯಿದಱಂ ಕ್ಷಣದೊಳ್ಭವವೃಕ್ಷಮೂಲಮಂ ।
ಕೊಯ್ಯನೆ ಸುಟ್ಟು ತೂಱ ಶಿವನಾಗಿರನೇ ಅಪರಾಜಿತೇಶ್ವರಾ ॥೯೭

ಕವಿದ[3] ಮುಗಿಲ್ಗಳೇ ಪರೆಯಲೆಂದುಱ ಚಿಂತಿಸವೇಳ್ಕುಮಲ್ಲದೇ ।
ರವಿಗಧಿಕಪ್ರಕಾಶಗುಣಮಾಗಲಿಯೆಂದೆನವೇಳ್ಕುಯಾತ್ಮನುಂ ॥
ಭವವಿಕೃತಾಷ್ಟಕರ್ಮವನೆ ನಷ್ಟವನೈದಿಪನೆಂಬುದಲ್ಲದೇ।
ಶಿವಸುಖಮೆಂಬುದಂ ಬಯಸಲೇಕೆ ನಿಜಕ್ಕಪರಾಜಿತೇಶ್ವರಾ ॥೯೮

ಶುದ್ಧನಿಜಾತ್ಮನಂ ಬಿಡದೆ ಕಾಣ್ಬ ಸುಭವ್ಯನ ಸೌಖ್ಯಮೆಂಬುದಾ ।
ಸಿದ್ಧರ ಸೌಖ್ಯದಂಶಮೆನವೇಳ್ಕುಮದಲ್ಲದೆ ನಾಗದೇವಮ ॥
ತ್ರ್ಯೈರ್ದ್ಧತಸೌಖ್ಯದಲ್ಲಿ ಸರಿಹೋಲಿಸಲಾಗದದೇಕೆ ಕರ್ಮಸಂ ।
[4] ಬದ್ಧವದಿಂತಿದಸ್ತಮಲವಪ್ಪುದಱಂದಪರಾಜಿತೇಶ್ವರಾ ॥೯೯

ಚಿಂತೆಯೊಳೊಂದಿದಾವ ಬ*ರ್ದುಕುಂ ಬಹುದುಃಖಮೆ ಎಂಬರೆಂದುಮಾ
ಚಿಂತೆಯ ಬಾೞೊಳೇ ಬ*ರ್ದುಕುತಿರ್ಪರದೇಕೆ ಸುಖಸ್ಥಳಾಂಧಕರ್ ॥
ಚಿಂತಿಪ ಮಾಳ್ಪ ಮಾತುಲಿವ ದಂದುಗವಿಲ್ಲದೆ ತನ್ನ ರೂಪಿನೊಳ್ ।
ಶಾಂತದೆ ತೆಪ್ಪಗಿರ್ಪ ಬಗೆದೋಱದಲಾಅಪರಾಜಿತೇಶ್ವರಾ ॥೧೦೦

1. ಸಂಜಿಯಂತ. ಖ॥ 2. ಕಾಂಕ್ಷೆಯಿದರೇಂ. ಕ॥
3. ಮುಗಿಲ್ಗಳಿಪರಿಯೆಲೆ. ಕ॥ 4. ಬಂಧ. ಕ॥

ನೋಡಿದು ಚಿತ್ರಮೀಕ್ಷಿಸುವುದೆನ್ನ ನಿಜತ್ವಮದರ್ಕೆ ದೇಹಮ |
ಳ್ಳಾಡದೆ ಕುಳ್ಳಿತಿರ್ಪ ಕೆಲಸಂ ದೊರೆಕೊಂಬುದು ಮೋಕ್ಷಮಿಂತಿದಂ ‖
ಮಾಡುವುದರ್ಕೆ ನಾನಲಸಿ ಮೆಯ್ಮನ ಮಾತುಗಳಂ ಬಯಲ್ಗೆ ಱೋ |
ಡಾಡಿಸಿ ಕರ್ಮಮಂ ಕರೆವೆನಜ್ಞತೆಯಿಂದಪರಾಜಿತೇಶ್ವರಾ ‖೧೦೧

ಚಿಂತಿಸವೇೞ್ಪೊಡಂ ಬಿಡದೆ ಚಿಂತಿಕೆ ದೇಹದ ಕಷ್ಟಮಂ ಸುಖ|
ಭ್ರಾಂತಿಯನ್ನೈದು ಭೇದಭವಮಂ ನಪಭೇದಪದಾರ್ಥಮಂ ಪ್ರತಾ ‖
ನಂತವನರ್ಹದಾದಿಗಳ[1] ನಾತ್ಮನ ಕರ್ಮದ ರೂಪನೇಕೆನಲ್ |
ಚಿಂತೆಯಿದಸ್ತು ಚಿಂತೆಯನೆ ಮಾಱ್ಪುದಱಿಂದಪರಾಜಿತೇಶ್ವರಾ ‖೧೦೨

ಅಳಿದಿರಿಸಿರ್ದದಂ ಕುಡುವನಂತೆ ಪವಣ್ನುಡಿಯಿಂದೆ ಭವ್ಯರಂ |
ತಿಳಿವುವ ಸುಮ್ಮನಿರ್ಪ ನಿಜಕಾರ್ಯಕೆ[2] ...ಮೃಗಂಬೊಲುರ್ವಿಯೊಳ್ ‖
ಪೊಳೆವ ನಿವಿಕ್ತಮಂ ಪುಗುವ ಬೈತನಿಧಾನವನೀಕ್ಷಿಪಾತನಂ |
ತೊಳಗನೆ ಕಾಣ್ಬನೇ ಸಫಲಜನ್ಮನಲಾ ಅಪರಾಜಿತೇಶ್ವರಾ ‖೧೦೩

ಮೞೆ ಸುರಿವಾಗಳೆಂತು ಪನಿಗಾಳಸಿಡಿಲ್ದನಿಗಳ್ಕ ಬಾಹ್ಯದೊಳ್|
ಸುೞಿಯದೆ ಗೇಹದೊಳ್ಳಿರುಗಳಿರ್ಪುವಂತೆಲೆ ಯೋಗಿ ನೀನುಮ ‖
ಗ್ಗಳಪ ವಿಕಾರಜೃಂಭಣದ ದುಷ್ಷುಮದೊಳ್ಪುಗಾಡಬೇಡ ಪ|
ಜ್ಜಳಸುತೆ ನಿನ್ನೊಳಿರ್ದ ಜಯಿಸೆಂದೆಯಲಾ ಅಪರಾಜಿತೇಶ್ವರಾ‖೧೦೪

ನೀಡುದಿನಂ ನಿಜಾತ್ಮನನೆ ಭಾವಿಸಿ ಸಂಸ್ಕೃತನಾದ ಮೇಲೆ ತಾಂ |
ನೋಡುವುದಲ್ಲಿಯೇ ತಿಳಿವುದಲ್ಲಿಯೆ ಪೊರ್ದುವುದಲ್ಲಿಯೇ ಪ್ರಿಯಂ‖
ಮಾಡುವುದಲ್ಲಿಯೇ ಸುಖಿಪುದಲ್ಲಿಯೆ ಅರ್ಚಿಪುದಲ್ಲಿಯೇ[3] ಮರ |
ಲ್ದಾಡುವುದಲ್ಲಿಯೇ ಪೊಱಗೆ ಮೆಚ್ಚನಲಾ ಅಪರಾಜಿತೇಶ್ವರಾ ‖೧೦೫

---

1. ನಾತ್ಮದ. ಖ‖ 2. ಪುರುಷ. ಖ‖ 3. ಮೊರಲ್ದಾ. ಖ‖

ಸಿರಿಯೊಳಗಂತದೇಂ ಸಿರಿ ಸುಖಕ್ಕದೆ ಸೌಖ್ಯವನೇಕತತ್ತ್ವದಾ ।
ತಿರುಳದೆ[1] ತಾನೆ ಕಟ್ಟಕಡೆ ಸರ್ವವಿಚಾರಕೆಯಂತೆನಲ್ಕೆ ಸ ॥
ದ್ಗುರುಗಳು[2] ಮೈವರಿರ್ದರದಱೊಳ್ವರದರ್ಶನಬೋಧವೃತ್ತಿಗಳ್ ।
ಪರಮತಪಂಗಳಲ್ಲಿ ನೆಲೆಗೊಂಡುದಱಿಂದಪರಾಜಿತೇಶ್ವರಾ ॥ ೧೦೬

ಬಹುವಚನಂಗಳೇಕೆ ಭುವನತ್ರಯಸಾರಮಿದಾತ್ಮತತ್ತ್ವಮು ।
ತ್ಸಹಪರನಾಗಿ ತಾನದನೆ ಭಾವಿಸುತಿರ್ದೊಡೆ ಮುಕ್ತಿಯೆಯ್ದುಗುಂ ॥
ಸಹಜಮಿದೊಂದೆ ಇನ್ನುೞಿದುವೆಲ್ಲವವೇಂ ವ್ಯವಹಾರವಾತ್ಮನಂ ।
ಪಹಿಸಿ ಭವಂಗಳೊಳ್ಬರಿಸುತಿರ್ಪವಲಾ ಅಪರಾಜಿತೇಶ್ವರಾ ॥೧೦೭

ಆವತಪಂಗಳುಂ ಶ್ರುತಮುಮಾಚರಣಂಗಳುಮಕ್ಕೆ[3] ತನ್ನ ಚಿ ।
ದ್ಭಾವದ ನೋಟದೊಳ್ಪಡಿದು ಬಂದೊಡೆ ನಿರ್ಜರೆಮಾಳ್ಕುಮಷ್ಟಕ ॥
ರ್ಮಾವಳಿಯುಂ ಬೞಿಕ್ಕೆ ಶಿವಮಪ್ಪುದು ತಾನೆಯದಲ್ಲದಿರ್ದೊಡಾ ।
ಜೀವಕೆ ಪುಣ್ಯಬಂಧನವೆ ಮಾಳ್ಪುವಲಾ ಅಪರಾಜಿತೇಶ್ವರಾ ॥೧೦೮

ಭವ್ಯನಭವ್ಯನಿರ್ವರುಮುದಗ್ರತಪೋವ್ರತಶಾಸ್ತ್ರದೊಳ್ಸಮಾ ।
ನವ್ಯವಸಾಯ[4]ರಪ್ಪರದಱಿಂ ಸುರಸಂಪದಮಪ್ಪುದಲ್ಲದೇ ॥
ಅವ್ಯಯಸಿದ್ಧಿಯಾಗದದು ತನ್ನಱಿ ಚಿತ್ತವನಾತ್ಮರೂಪದೊಳ್ ।
ಭವ್ಯತಪಸ್ವಿ[5]ಯೋಜಿಸಿದೊಡಪ್ಪುದಲಾ ಅಪರಾಜಿತೇಶ್ವರಾ ॥೧೦೯

ಮನೆಯೊಳೆ ಪೂಳ್ದ ತನ್ನೊಡಮೆಯುಂ ತೆಗೆದುಕೊಳ್ಬಡೆ ಪುಣ್ಯಮಿಲ್ಲದಂ।
ಧನಿಕರ ಪ್ರೊರ್ಥ ಬೇಡಿದೊಡೆ ಈವರೆ ಇತ್ತೊಡುಣಕ್ಕೆ ಸಾಲ್ವನೇ॥
ತನುವಿನೊಳಿರ್ದ ತನ್ನನುಱಿ ಕಾಣ್ಬೊಡೆ ಭವ್ಯತೆಯಿಲ್ಲದಿರ್ದವಂ ।
ಮುನಿಮತ[6]ವೈದಿಯುಂ ಶಿವವನೆಯ್ದುವನೇ ಅಪರಾಜಿತೇಶ್ವರಾ ॥೧೧೦

1. ತಿರುಳದು. ಖ॥ 2. ಮೂವರಿರ್ದ. ಖ॥ 3. ನನ್ನ. ಖ॥
4. ಮಪ್ಪುದ. ಕ॥ 5. ಯೋಚಿಸಿ. ಖ॥ 6. ವೇದಿಯು. ಖ॥

ಅಶುಭಶುಭಂಗಳೆಂಬೆರಡು [1][ಯೋಗಮನೀವ ವ್ರತಾವ್ರತಂಗಳೊಳ್] ।
ವಿಶದಮಿವಿಂತು[ಸುಸ್ಮೃತಿ]ಯ ಮಾಳ್ಪವು ದುಃಖಸುಖಸ್ವರೂಪದೊಳ್ ॥
ಅಶುಭವನೊಲ್ಲದಾಶುಭದೊಳದುರ್ಗದನಂ ತೊಱೆದಾತ್ಮನೊಳ್ಮನೋ ।
ವಶನೆನೆ ಶುದ್ಧಯೋಗಮಿದು ಸಿದ್ಧಿಯಲಾ ಅಪರಾಜಿತೇಶ್ವರಾ ॥೧೧೧

ವ್ರತತತಿಯಿಲ್ಲದಂದು ಪವಣಿಲ್ಲ ಮನಕ್ಕದಱಿಂದೆ ಪಾಪಮಾ ।
ವ್ರತತತಿಯುಳ್ಳೊಡಂತದನೆ ಪಾಲಿಪೆನವ್ರತಮಂ ಕೆಡಿಪ್ಪೆನೆಂ ॥
ಬತಿಮತಿಯುಳ್ಳನಂ ಸುಕೃತಮುಕ್ಕುಮದುಂ ಭವಬೀಜಪಿಃಮನಃ ।
ಕ್ಷಿತಿ ಕಿಡೆ ತನ್ನೊಳದೊರ್ಡದೆ ಸಿದ್ಧಿಯಲಾ ಅಪರಾಜಿತೇಶ್ವರಾ ॥೧೧೨

ಅಧ್ಯಯನಂಗಳಂ ವ್ರತವಿಚಿಂತನೆಯಿಂ ಸ್ತುತಿಯಿಂ ಪ್ರಬೋಧೆಯಿಂ ।
ಸಾಧ್ಯಮನಸ್ಕನಾಗಿ ನಿಜರೂಪಮನಪ್ಪಿದವಂಗೆ ಬೇಱೆ ಮ ॥
ತ್ರಧ್ಯಯನಾದಿಗಳ್ಮಱೆಯವಾವ ವಿಕಲ್ಪಮುಮಿಲ್ಲ ಲೋಕರಾ ।
ರಾಧ್ಯನವಂಗೆ ಪೂಜ್ಯಗುಣರಿಲ್ಲವಲಾ ಅಪರಾಜಿತೇಶ್ವರಾ ॥೧೧೩

ಪಗರಣದಾಟವೆಂದು ಜಗಮಂ ಸಲೆ ನೋಡುತೆ ದುರ್ವಿಕಲ್ಪಮಂ ।
ತೆಗೆದು ಬಿಸಾಡುತುಂ ನಿಜಚಿದಾತ್ಮನನೀಕ್ಷಿಸುತುಂ ವಿಶೋಧಿಯೊ ॥
ಳ್ಮಗೆ ಮುಳುಗಾಡುತುಂ ಶಮರಸಾಮೃತಮಂ [3]ಸವಿಯುತ್ತೆ ತನ್ನ ತಾಂ ।
ನಗುತೆ ವಿಳಾಸದಿಂ ತಪಿಸುವಂಗೆಣೆ [4]ಯಾರಪರಾಜಿತೇಶ್ವರಾ ॥೧೧೪

ಮೂಱು ಶರೀರದೊಳ್ತಡೆಯದಂತರದಾತ್ಮನೊಳೈಕ್ಯವಾಗಿ ಬಂ ।
ದೇಱುವ ದುಷ್ಪರೀಷಹ[5]ಪದಂಗಕೆನುತ್ತುಪಶಾಂತನಪ್ಪುದುಂ ॥
ಜಾಱುಗುಮೊಯ್ಯನೊಯ್ಯನೆ ಚಿದಾವರಣಾದಿಗಳಾತ್ಮಸಿದ್ಧಿ ಮೆ ।
ಯ್ದೋಱುಗುಮೊಯ್ಯನೊಯ್ಯನಿದೆ ಯುಕ್ತಿಯಲಾ ಅಪರಾಜಿತೇಶ್ವರಾ ॥

---

1. ಯೋಗಮೀವಸುವ್ರತವ್ರತಂಗಳೊಳ್. ಕ॥ಖ॥ 2. ಸಂಶ್ರುತಿ. ಕ॥ಖ॥
3. ಸುಖಸುತ್ತೆ. ಖ॥ 4. ಯೇಅ. ಖ॥ 5. ಪರೀಷಹನಂಗಕೆ. ಖ॥

ನೋಡುವ ನೋಡಿ ಲಾಲಿಸುವ ಲಾಲಿಸುತಾತ್ಮಸುಖಕ್ಕೆ ವಿಸ್ಮಯಂ |
ಮಾಡುವ ಮಾಡಿ ಮೆಚ್ಚುವ ನಿಜಾತ್ಮನೊಳಾಗಳೆ ಮೆಚ್ಚುತೈಕ್ಯದಿಂ ||
ಕೂಡುವ ಕೂಡಿ ಮೆಯ್ಮಱೆವು ತನ್ಮಯನಾಗುತೆ ತಾನೆ ತನ್ನೊಳೋ|
ಲಾಡುವ ಯೋಗಿಯೇ ಅಮೃತಭಾಗಿಯಲಾ ಅಪರಾಜಿತೇಶ್ವರಾ ||೧೧೬

ಇಂಗಡಲೊಳ್ಮುಳುಂಗಿದವೊಲಿರ್ಪುದು ಮೋಕ್ಷವಡಂಗಿದಚ್ಚವೆ |
ಳ್ದಂಗಳ ಕಾಂತಿಯೊಳ್ಬೆರಸಿದಂತೆವೊಲಿರ್ಪುದು ಸಿದ್ಧರಾಶಿಯೊಳ್ ||
ಸಂಗತವಾದವೊಲ್ಮೆಱೆವುದಾತ್ಮನೊಳಾತ್ಮನನಾತ್ಮನಿಂದೆ ಕಂ |
ಡಂಗಱಿವಂದದಿಂ ನುಡಿಯಲೆನ್ನಳವೇ ಅಪರಾಜಿತೇಶ್ವರಾ ||೧೧೭

ಅವನ ಬ*ರ್ದುಂಕೆ ತಾಂ ಬ*ರ್ದುಕು ಜನ್ಮವದೇ ಸಫಲಂ ವಿಶಿಷ್ಟಲಾ |
ಭವ್ಯಮದೆ ಸರ್ವಸಿದ್ಧಿಗದು ಮೊತ್ತಮೊದಲ್ಸವಿಚಾರಕೋಟಿಗೆ ||
ಲ್ಲವಱೊಳದೊಂದೆ ಕಟ್ಟಕಡೆ ತನ್ನೊಳೆ ತನ್ನನೆ ತಾನೆ ಕಂಡು ಬಾ |
ಳ್ವವನುೞಿದಿರ್ದವಂಗೆ ಭವವೆತ್ತಣದಿನ್ನಪರಾಜಿತೇಶ್ವರಾ ||೧೧೮

ತನುವಿನೊಳಿರ್ದ ಸಿದ್ಧಸದೃಶಾತ್ಮನನೀಕ್ಷಿಸುತುಂ ವಿಶೋಧಿ ಸಂ|
ಜನಿತದೊಳೇನನಾಡಿದನದೆಲ್ಲವುಮಾಗಮವೆಲ್ಲರಿಚ್ಛೆ ಹೆ ||
ಚ್ಚಿನ ಕಳೆ ಕರ್ಮನಿರ್ಜರೆ ಜಗತ್ತ್ರಯವಲ್ಲಭನಪ್ಪ ಕಜ್ಜವಿ |
ನ್ನಿನಿತಿನಿತೆಂದದರ್ಕೆ ಮಿತಿಮಾಡುವರಾರಪರಾಜಿತೇಶ್ವರಾ ||೧೧೯

ರವಿನಡೆದತ್ತಲೆಲ್ಲ ಬೆಳಗಲ್ಲದೆ ಕತ್ತಲೆಯುಂಟೆಯಾತ್ಮತ |
ತ್ತ್ವವೆ ಮನದಲ್ಲಿ ನಟ್ಟು ನುಡಿವಾತನ ಮಾತುಗಳೆಲ್ಲ ಮೋಕ್ಷಮಾ ||
ರ್ಗವೆಯವನೆಲ್ಲಿ ನಿಂದನದು ತೀರ್ಥವವಂ ನಡೆದತ್ತ ಸರ್ವರು |
ತ್ಸವಮಿದು ನಿಮ್ಮ ಮಾರ್ಗದ ರಹಸ್ಯವಲಾ ಅಪರಾಜಿತೇಶ್ವರಾ||೧೨೦

ಆರಿದನೊಲ್ದು ಕೈವಿಡಿದರಾರಿದನೀಕ್ಷಿಸಿದರ್ ಯಥಾರ್ಥದಿಂ |

ಪಾರಿದರಲ್ಲಿಯೋ ಲಯವನೆಯ್ದಿ ನಿಜಂಬಡೆದರ್ ಜಗಕ್ಕಿದಂ ॥
ಆರನುಶಾಸನಂಗೊಳಿಸದರ್ ಜಿನ ನೀನೆ ಜಗತ್ರಯೈಕವಿ ।
ಸ್ಫಾರಿತವಸ್ತುವಂ ಬೆಳಗಿದೈ ಕೃಪೆಯಿಂದಪರಾಜಿತೇಶ್ವರಾ ॥೧೨೧

ಚೆಲುವರ ಚೆಲ್ವ ಚೆನ್ನಿಗರ ಚೆನ್ನ ಸುವೀರರ ವೀರ ಸತ್ಕಲಾ ।
ಬಲರ ಬಲಾಢ್ಯ ಬಲ್ಲಿದರ ಬಲ್ಲಹ ದೇವರ ದೇವ ನೀತಿನಿ ॥
ರ್ಮಲರ ನಿಧಾನ ನಿಚ್ಚಮುದವಕ್ಕಳ ಮಾಣಿಕ ಶಾಂತಿ ಶಾಂತಿಶೀ।
ತಲರ ಶಿರೋಮಣೀ ನಿನಗೆ ಪಾಸಟಿಯಾರಪರಾಜಿತೇಶ್ವರಾ ॥೧೨೨

ಜಡಮತಿಯೈಸೆ ನಾಂ ಪರಮ[1]ನಿಮ್ಮ ಗುಣಂಗಳನೆಲ್ಲಮಂ ಮನು ।
ಬಿಡಿಯೆ ಸಮರ್ಥನಲ್ಲೆನದಱಿಂ ಕಿಱಿದಂ ಪಿಡಿದಿರ್ಪೆನೆಂತೆನಲ್ ॥
ಕೊಡದೊಳಗೆಷ್ಟು ನಿಲ್ವುದು ಸಮುದ್ರಜಲಂ ವರಕಾಂಚನಾದ್ರಿ ಕಂ।
ನಡಿಯೊಳಗೆಷ್ಟು ತೋರ್ಪುದವಧಾರಿಸು ನೀನಪರಾಜಿತೇಶ್ವರಾ॥೧೨೩

ಬಂದೊಲವಿಂದೆ ನಿನ್ನಿದಿರೊಳೊಪ್ಪದೆ ನಿಂದು ಕರಂಗಳಂ ನೊಸ।
ಲೊಂದಿಸಿ ದೇವದೇವ ಕರುಣಾಕರ ಬಿನ್ನವಮಾತ್ಮ[2]ಸಿದ್ಧಿಯಿಂ ॥
ನೆಂದೆನಗಪ್ಪುದೆಂದೊಡೆಲೆ ಕಂದ ಕಡಂಗದಿರಿಂದು ನಾಳೆ[3]ನ।
ಮ್ಮಂದಪೆಯಪ್ಪೆಯೆಂಬ ನುಡಿಗೇಳ್ವೆನದೆಂದಪರಾಜಿತೇಶ್ವರಾ ॥೧೨೪

ಮುನ್ನಮನೇಕರಂ ಭವದಿನೆತ್ತಿ ಯಶೋನಿಧಿಯಾದೆಯಾ [4]ದೊಡೇಂ ।
ನಿನ್ನದಯಾಗುಣಕ್ಕದು ವಿಶೇಷಮೆ ಮೂರ್ಖನನಾಥನ ರೌದ್ರನಂ॥
[5]ನನ್ನ ಪವಿತ್ರಮಾಡಿದೊಡೆ ದೊಡ್ಡವೆಸರ್ಘನಕೀರ್ತಿ ದೇವ ಬೂ ।
ತೆನ್ನದಿ[6]ರೊಪ್ಪುಗೊಳ್ಳಗದಿರ್ಕೆ ಶರಣಾಗಪರಾಜಿತೇಶ್ವರಾ ॥೧೨೫

1. ನಿನ್ನ. ಖ॥ 2. ಸಿದ್ಧಿಯುಂ. ಕ॥ 3. ಯೆಮ್ಮಂ. ಕ॥
4. ದೊಡಂ. ಕ॥ 5. ಯೆನ್ನ ಪವಿತ್ರಮಾಡಿ. ಕ॥ 6. ಗೊಪ್ಪು. ಕ!

ಶ್ರೀಶುಭವೆತ್ತ ಮೇರುನಗದಿಂದ್ರದಿಶಾಸ್ಥಿತವತ್ಸಕಾವತೀ ।
ದೇಶದೊಳಿರ್ದಪೈ ವಿಜಿತಘಾತಿಚತುಷ್ಕ ಜಗತ್ರ[1]ಯಾರ್ಚಿತಾ ॥
ಲೇಶಮುಮಾದೊಡಂ ಪುದಿದ ಪುದ್ಗಲದಲ್ಲಿರಲಾರೆನೈಯ್ಯ ಸ॥
ರ್ವೇಶ ಶರಣ್ಯ ಗಣ್ಯ ತಳುವೇಂ ಶರಣಾಗಪರಾಜಿತೇಶ್ವರಾ ॥೧೦೭

ತ್ರಿಜಗತ್ಸ್ವಾಮಿಗಳಿರ್ದಪರ್ಧರೆಯೊಳೀಗಳ್ದೂರವಲ್ಲಿರ್ದೊಡೀ ।
ವಿಜಯಾರ್ಧಂ ಹಿಮವದ್ವಯಂ ನಿಷಧಮೆಂಬೀನಾಲ್ಕು ಪೆರ್ಗೋಡೆಗಳ್॥
ಪ್ರಜೆಗಡ್ಡೈಸಿದವೈಸೆ ಕ್ಷಾಣ್ಬಿರಿಮುಡುತ್ತಾರಾಧನಂ ಮಾಡಿರಿಂ ।
ನಿಜದಿಂದೆಮ್ಮಪರಾಜಿತೇಶ್ವರನುಮಂ ಶ್ರೀಮಂದರಸ್ವಾಮಿಯುಂ॥೧೦೮

ಅಪರಾಜಿತೇಶ್ವರ ಶತಕಂ ಸಮಾಪ್ತಂ.

---

1. ಯಾರ್ಜಿತಾ, ಕ॥ ಕೊನೆಯ ಶ್ಲೋಕ ಕ॥ ಪುಸ್ತಕದಲ್ಲಿಲ್ಲ.